prajavani.net prajavani

ಮಂಗಳವಾರ, ಅಕ್ಟೋಬರ್ 28, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 297 | ಪುಟ 16

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 84,778 | ನಿಫ್ಟಿ 25,966 | $/₹ 88.19 | ಚಿನ್ನ (Std. 10g) ₹1,28,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,59,710 (ಬೆಂಗಳೂರು)

ಎಸ್‌ಐಆರ್: ವೇಳಾಪಟ್ಟಿ ಪ್ರಕಟ

12 ರಾಜ್ಯಗಳು, ಕೇಂದ್ರಾಡಳಿತ ಪ್ರದೇಶದಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ದಿನಾಂಕ ಘೋಷಿಸಿದ ಆಯೋಗ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ದೇಶದಾದ್ಯಂತ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕೈಗೊಳ್ಳಲು ಕೇಂದ್ರ ಚುನಾವಣಾ ಆಯೋಗ ಮುಂದಡಿಯಿಟ್ಟಿದ್ದು, ಎರಡನೇ ಹಂತದಲ್ಲಿ 12 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಪ್ರಕ್ರಿಯೆ ನಡೆಸುವುದಾಗಿ ಘೋಷಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ವೇಳಾಪಟ್ಟಿ ಪ್ರಕಟಿಸಿದ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್, 'ಈಗ ಕೈಗೊಂಡಿರುವ ವಿಶೇಷ ಸಮಗ್ರ ಪರಿಷ್ಕರಣೆಯು ಸ್ವಾತಂತ್ರ್ಯದ ಬಳಿಕ ನಡೆಯುತ್ತಿರುವ ಒಂಬತ್ತನೇ ಪ್ರಕ್ರಿಯೆಯಾಗಿದೆ. 2002–04ರಲ್ಲಿ ಕೊನೆಯದಾಗಿ ಎಸ್‌ಐಆರ್ ನಡೆದಿತ್ತು' ಎಂದರು.

2ನೇ ಹಂತದಲ್ಲಿ ಎಸ್‌ಐಆರ್ ನಡೆಯಲಿರುವ ತಮಿಳುನಾಡು, ಪುದುಚೇರಿ, ಕೇರಳ, ಪಶ್ಚಿಮ ಬಂಗಾಳದಲ್ಲಿ 2026ರಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆ. ಅಸ್ಸಾಂನಲ್ಲೂ ಮುಂದಿನ ವರ್ಷ ಚುನಾವಣೆ ನಡೆಯಲಿದ್ದು, ಅಲ್ಲಿನ ಎಸ್‌ಐಆರ್ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಪ್ರತ್ಯೇಕವಾಗಿ ಘೋಷಿಸಲಾಗುವುದು ಎಂದು ಸ್ಪಷ್ಟಪಡಿಸಿದರು.



ಸುದ್ದಿಗೋಷ್ಠಿಯಲ್ಲಿ ಜ್ಞಾನೇಶ್ ಕುಮಾರ್ ಮಾತನಾಡಿದರು –ಪಿಟಿಐ ಚಿತ್ರ

ಮತದಾರರು, ವಿರೋಧ ಪಕ್ಷಗಳು ಎಸ್‌ಐಆರ್ ಪ್ರಕ್ರಿಯೆ ಬಗ್ಗೆ ತೃಪ್ತಿ ಹೊಂದಿಲ್ಲ. ಚುನಾವಣಾ ಆಯೋಗದ ವಿಶ್ವಾಸಾರ್ಹತೆ ಅನುಮಾನದಲ್ಲಿದೆ

ಪವನ್ ಖೇರಾ, ಕಾಂಗ್ರೆಸ್ ನಾಯಕ

ಮೊದಲ ಹಂತದಲ್ಲಿ ಎಸ್‌ಐಆರ್ ನಡೆದ ಬಿಹಾರದಲ್ಲಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ಅಂತಿಮ ಪಟ್ಟಿಗೆ ಸಂಬಂಧಿಸಿದಂತೆ ಅಲ್ಲಿ ಯಾವುದೇ ಮೇಲ್ಮನವಿ ಸಲ್ಲಿಕೆಯಾಗಿಲ್ಲ ಎಂಬುದನ್ನು ಅವರು ಒತ್ತಿ ಹೇಳಿದರು.

'ಯಾವುದೇ ಅರ್ಹ ಮತದಾರ ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಮತ್ತು ಯಾವುದೇ ಅನರ್ಹ ಮತದಾರರು ಮತದಾರರ ಪಟ್ಟಿಯಲ್ಲಿ ಸ್ಥಾನ ಪಡೆಯದಂತೆ ಎಸ್‌ಐಆರ್ ಖಚಿತಪಡಿಸುತ್ತದೆ' ಎಂದರು.

▶10

ಎರಡನೇ ಹಂತ ಎಲ್ಲೆಲ್ಲಿ?

ಅಂಡಮಾನ್ ಮತ್ತು ನಿಕೋಬಾರ್, ಲಕ್ಷದ್ವೀಪ, ಛತ್ತೀಸಗಢ, ಗೋವಾ, ಗುಜರಾತ್, ಕೇರಳ, ಮಧ್ಯ ಪ್ರದೇಶ, ಪುದುಚೇರಿ, ರಾಜಸ್ಥಾನ, ತಮಿಳುನಾಡು, ಉತ್ತರ ಪ್ರದೇಶ ಮತ್ತು ಪಶ್ಚಿಮ ಬಂಗಾಳ

ವೇಳಾಪಟ್ಟಿ	
ನ.4	ಗಣತಿ ಪ್ರಕ್ರಿಯೆ ಆರಂಭ
ಡಿ.9	ಮತದಾರರ ಕರಡು ಪಟ್ಟಿ ಪ್ರಕಟ
2026ರ ಫೆ.7	ಅಂತಿಮ ಪಟ್ಟಿ ಪ್ರಕಟ

51 ಕೋಟಿ ಎರಡನೇ ಹಂತದಲ್ಲಿ ಎಸ್‌ಐಆರ್ ನಡೆಯಲಿರುವ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಒಟ್ಟು ಮತದಾರರು

'ಪ್ರಶ್ನೆಗಳಿಗೆ ಉತ್ತರ ಸಿಕ್ಕಿಲ್ಲ'

ದೇಶದಾದ್ಯಂತ ಎಸ್‌ಐಆರ್ ನಡೆಸಲು ಮುಂದಾಗಿರುವ ಚುನಾವಣಾ ಆಯೋಗದ ವಿಶ್ವಾಸಾರ್ಹತೆ ಬಗ್ಗೆ ಕಾಂಗ್ರೆಸ್ ಪಕ್ಷ ಸೋಮವಾರ ಪ್ರಶ್ನೆಗಳನ್ನು ಎತ್ತಿದೆ.

'ಬಿಹಾರದಲ್ಲಿ ನಡೆಸಿದ ಎಸ್‌ಐಆರ್‌ಗೆ ಸಂಬಂಧಿಸಿದ ಪ್ರಶ್ನೆಗಳಿಗೆ ನಮಗೆ ಇನ್ನೂ ಉತ್ತರಗಳು ಬಂದಿಲ್ಲ. ಬಿಹಾರದಲ್ಲಿ ಈ ಪ್ರಕ್ರಿಯೆಯಲ್ಲಿನ ಲೋಪಗಳನ್ನು ಸರಿಪಡಿಸಲು ಸುಪ್ರೀಂ ಕೋರ್ಟ್ ಹಲವು ಬಾರಿ ಮಧ್ಯಪ್ರವೇಶಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು' ಎಂದು ಕಾಂಗ್ರೆಸ್ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

'ಎಸ್‌ಐಆರ್ ಪ್ರಕ್ರಿಯೆ ನಡೆದಾಗಲೆಲ್ಲಾ, ಚುನಾವಣಾ ಆಯೋಗದವರು ಪ್ರತಿ ಮನೆಗೆ ಹೋಗಿ, ಹೊಸ ಮತದಾರರನ್ನು ಸೇರಿಸುತ್ತಾರೆ, ಕೈಬಿಡಬೇಕಾದವರ ಹೆಸರನ್ನು ಪಟ್ಟಿಯಿಂದ ಅಳಿಸುತ್ತಾರೆ. ಆದರೆ ಬಿಹಾರದಲ್ಲಿ ಒಬ್ಬನೇ ಒಬ್ಬ ಮತದಾರನನ್ನೂ ಪಟ್ಟಿಗೆ ಸೇರಿಸಿಲ್ಲ. ಆದರೆ, 65 ಲಕ್ಷ ಮತಗಳನ್ನು ಅಳಿಸಲಾಗಿದೆ. ಇದು ಹಲವಾರು ಪ್ರಶ್ನೆಗಳನ್ನು ಹುಟ್ಟುಹಾಕಿದೆ' ಎಂದು ಖೇರಾ ದೂರಿದರು.

ಛತ್ ಪೂಜಾ

ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.



ಉತ್ತರ ಭಾರತದ ಜನಪ್ರಿಯ ಹಬ್ಬ ಛತ್ ಪೂಜೆಯ ಪ್ರಯುಕ್ತ ಸೋಮವಾರ ಬೆಂಗಳೂರಿನ ಹಲಸೂರು ಕೆರೆಯಲ್ಲಿ ಸೂರ್ಯನ ಪೂಜೆಯಲ್ಲಿ (ಛತ್ ಪೂಜಾ) ಜನರು ನಿರತರಾಗಿದ್ದರು

ಬೀದಿ ನಾಯಿ ಹಾವಳಿ; ನಿರ್ದೇಶನ ಪಾಲಿಸದ ರಾಜ್ಯಗಳು

ಪ್ರಮಾಣಪತ್ರ ಸಲ್ಲಿಸದ್ದಕ್ಕೆ ತರಾಟೆ

ನವದೆಹಲಿ (ಪಿಟಿಐ): ಬೀದಿ ನಾಯಿಗಳ ಹಾವಳಿ ತಡೆಗಟ್ಟಲು ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂಬ ಬಗ್ಗೆ ಇದುವರೆಗೂ ಪ್ರಮಾಣ ಪತ್ರಗಳನ್ನು ಸಲ್ಲಿಸದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಸುಪ್ರೀಂ ಕೋರ್ಟ್ ಸೋಮವಾರ ತರಾಟೆಗೆ ತೆಗೆದುಕೊಂಡಿದೆ.

ಪಶ್ಚಿಮ ಬಂಗಾಳ ಮತ್ತು ತೆಲಂಗಾಣ ಬಿಟ್ಟು ಇತರ ಎಲ್ಲ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ನವೆಂಬರ್ 3ರಂದು ನ್ಯಾಯಾಲಯದ ಮುಂದೆ ಹಾಜರಾಗುವಂತೆ ನ್ಯಾಯಮೂರ್ತಿಗಳಾದ ವಿಕ್ರಮನಾಥ್, ಸಂದೀಪ್ ಮೆಹ್ತಾ ಹಾಗೂ ಎನ್.ವಿ.ಅಂಜಾರಿಯಾ ಅವರ ವಿಶೇಷ ನ್ಯಾಯಪೀಠ ನಿರ್ದೇಶನ ನೀಡಿದೆ.

ಆಗಸ್ಟ್ 22ರಂದೇ ತಾನು ಆದೇಶ ನೀಡಿದ್ದರೂ ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ದೆಹಲಿ ಮಹಾನಗರ ಪಾಲಿಕೆ (ಎಂಸಿಡಿ) ಹೊರತುಪಡಿಸಿ ಇತರ ಯಾವುದೇ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಪ್ರಮಾಣ ಪತ್ರ ಸಲ್ಲಿಸಿಲ್ಲ ಎಂದು ಪೀಠ ಹೇಳಿತು.

'ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೋಟಿಸ್ ನೀಡಲಾಗಿದೆ. ಅವರು ಪ್ರತಿಕ್ರಿಯಿಸದ ಕಾರಣ, ಎಲ್ಲಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳು ಮುಂಬರುವ ಸೋಮವಾರ ಬೆಳಿಗ್ಗೆ 10.30ಕ್ಕೆ ಈ ನ್ಯಾಯಾಲಯದಲ್ಲಿ ಹಾಜರಾಗಬೇಕು. ಪ್ರಮಾಣ ಪತ್ರಗಳನ್ನು ಏಕೆ ಸಲ್ಲಿಸಿಲ್ಲ ಎಂಬ ವಿವರಣೆ ನೀಡಬೇಕು' ಎಂದು ಸೂಚಿಸಿತು.

ಪ್ರಮಾಣ ಪತ್ರಗಳನ್ನು ಸಲ್ಲಿಸದ ರಾಜ್ಯಗಳ ಯಾವುದೇ ಪ್ರತಿನಿಧಿ ಸೋಮವಾರದ ವಿಚಾರಣೆ ವೇಳೆ ಹಾಜರಿರಲಿಲ್ಲ ಎಂಬುದನ್ನು ಪೀಠವು ಗಮನಿಸಿತು. ಬೀದಿ ನಾಯಿಗಳಿಗೆ ಸಂಬಂಧಿಸಿದ ವಿಷಯದಲ್ಲಿ ಜುಲೈ 28ರಂದು ದಾಖಲಿಸಿ ಕೊಂಡಿದ್ದ ಸ್ವಯಂ ಪ್ರೇರಿತ ಪ್ರಕರಣದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸುತ್ತಿದೆ.

▶10

'ಅಧಿಕಾರಿಗಳು ಪತ್ರಿಕೆ ಓದುವುದಿಲ್ಲವೇ?'

ವಿಚಾರಣೆ ವೇಳೆ ವಕೀಲರೊಬ್ಬರು ಕೆಲವೊಂದು ಮಾರ್ಗಸೂಚಿಗಳನ್ನು ಉಲ್ಲೇಖಿಸಿದಾಗ ಪೀಠವು, 'ಸಂಬಂಧಪಟ್ಟ ಅಧಿಕಾರಿಗಳು ಬಂದು ಆ ವಿಚಾರವನ್ನು ಹೇಳಲಿ' ಎಂದಿತು.



ಪ್ರಮಾಣಪತ್ರ ಸಲ್ಲಿಸುವಂತೆ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಆಗಸ್ಟ್ 22ರಂದು ನೋಟಿಸ್ ಕಳುಹಿಸಲಾಗಿತ್ತು ಹಾಗೂ ಆ ವಿಷಯ ಮಾಧ್ಯಮಗಳಲ್ಲಿ ವರದಿಯಾಗಿತ್ತು ಎಂದಿತು.

'ನಿಮ್ಮ ಅಧಿಕಾರಿಗಳು ಪತ್ರಿಕೆಗಳನ್ನು ಓದುವುದಿಲ್ಲವೇ? ಅವರು ಸಾಮಾಜಿಕ ಮಾಧ್ಯಮಗಳ ಬಗ್ಗೆ ತಿಳಿದುಕೊಂಡಿಲ್ಲವೇ? ಔಪಚಾರಿಕ ನೋಟಿಸ್ ನೀಡಬೇಕೆಂದು ಅವರು ಬಯಸುತ್ತಿದ್ದಾರೆಯೇ? ಆಗಸ್ಟ್ 22ರ ಆದೇಶದಲ್ಲಿ ಎಲ್ಲ ಅಂಶಗಳನ್ನೂ ಉಲ್ಲೇಖಿಸಲಾಗಿದೆ. ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನೋಟಿಸ್ ನೀಡಲಾಗುತ್ತಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಈಗ ಒಂದೊಂದೇ ನೆಪಗಳನ್ನು ಹೇಳಬೇಡಿ' ಎಂದು ಪೀಠ ತೀಕ್ಷ್ಣವಾಗಿ ಹೇಳಿತು.

'ಪಕ್ಷ ತೀರ್ಮಾನಿಸಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಹೈಕಮಾಂಡ್ ತೀರ್ಮಾನ ಮಾಡಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ ಆಗಿ ಮುಂದುವರಿಯುತ್ತೇನೆ' ಎಂದು ಸಿದ್ದರಾಮಯ್ಯ ಸೋಮವಾರ ಇಲ್ಲಿ ಹೇಳಿದರು.

ಮಾಧ್ಯಮದವರ ಜೊತೆ ಮಾತನಾಡಿದ ಅವರು, 'ಐದು ವರ್ಷ ನೀವೇ ಮುಖ್ಯಮಂತ್ರಿ ಆಗಿ ಮುಂದುವರಿಯುತ್ತೀರಾ' ಎಂಬ ಪ್ರಶ್ನೆಗೆ, 'ಹೈಕಮಾಂಡ್ ತೀರ್ಮಾನ ಮಾಡಿದರೆ ಮಾತ್ರ' ಎಂದರು.

'ಐದು ವರ್ಷ ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ' ಎಂಬ ಶಾಸಕ ಕೆ.ಎನ್.ರಾಜಣ್ಣ ಅವರ ಹೇಳಿಕೆ ಕುರಿತು ಗಮನಸೆಳೆದಾಗ 'ಅದು ಅವರ ಸ್ವಂತ ಅಭಿಪ್ರಾಯ' ಎಂದರು.

'ನಾನೂ ಮುಖ್ಯಮಂತ್ರಿ ಹುದ್ದೆ ಆಕಾಂಕ್ಷಿ' ಎಂದು ಕೆಲವರು ಹೇಳುತ್ತಿದ್ದಾರೆ ಎಂಬ ಪ್ರಶ್ನೆಗೆ, 'ಪ್ರಜಾ ಪ್ರಭುತ್ವದಲ್ಲಿ ಸ್ಪರ್ಧೆಯಲ್ಲಿ ಇರಬಾರದು ಎನ್ನಲಾಗದು. ಆಕಾಂಕ್ಷೆ ವ್ಯಕ್ತಪಡಿಸುವುದು ಅವರ ಹಕ್ಕು. ಅಂತಿಮವಾಗಿ ಹೈಕಮಾಂಡ್ ತೀರ್ಮಾನ ತೆಗೆದುಕೊಳ್ಳುತ್ತದೆ' ಎಂದರು.

'ಸಿ.ಎಂ ಬದಲಾವಣೆ ವಿಷಯ ಪದೇ ಪದೇ ಏಕೆ ಚರ್ಚೆ ಆಗುತ್ತಿದೆ' ಎಂಬ ಪ್ರಶ್ನೆಗೆ, 'ನೀವು (ಮಾಧ್ಯಮದವರು) ಕೇಳುತ್ತೀರಲ್ಲ. ಅದಕ್ಕೆ ವಿಷಯ ಚರ್ಚೆಗೆ ಬರುತ್ತಿದೆ' ಎಂದು ಹೇಳಿದರು.

ಸಿ.ಎಂ ಹೇಳಿದ ಮೇಲೆ ಇನ್ನೇನಿದೆ: ಡಿಕೆಶಿ

ಬೆಂಗಳೂರು: 'ಮುಖ್ಯಮಂತ್ರಿ ಹೇಳಿದ ಮೇಲೆ ಮುಗಿಯಿತು. ಅವರು ಹೇಳಿದ ಮೇಲೆ ಇನ್ನೇನಿದೆ? ಅವರು ಹೇಗೆ ಹೇಳುತ್ತಾರೊ ಹಾಗೆ ನಾವು ಕೇಳುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಹೈಕಮಾಂಡ್ ಒಪ್ಪಿದರೆ ನಾನೇ ಪೂರ್ಣಾವಧಿ ಮುಖ್ಯಮಂತ್ರಿ ಆಗಿರುತ್ತೇನೆ' ಎಂಬ ಸಿದ್ದರಾಮಯ್ಯ ಅವರ ಹೇಳಿಕೆ ಬಗ್ಗೆ ಸುದ್ದಿಗಾರರು ಪ್ರಸ್ತಾಪಿಸಿದಾಗ ಶಿವಕುಮಾರ್ ಹೀಗೆ ಪ್ರತಿಕ್ರಿಯಿಸಿದರು.

ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಸೋಮವಾರ ಮಾತನಾಡಿದ ಅವರು, 'ನಮ್ಮ ಪಕ್ಷದ ಕಾರ್ಯಕಾರಿ ಸಮಿತಿ ಸದಸ್ಯೆ ಅಂಬಿಕಾ ಸೋನಿಯವರ ಪತಿ ತೀರಿಕೊಂಡಿದ್ದರು. ಹೀಗಾಗಿ, ಸಂತಾಪ ಸೂಚಿಸಲು ದೆಹಲಿಯಲ್ಲಿರುವ ಅವರ ಮನೆಗೆ ಹೋಗಿದ್ದೆ' ಎಂದರು.

'ನಾನು ತಿಹಾರ್ ಜೈಲಿನಲ್ಲಿದ್ದಾಗ ಅಂಬಿಕಾ ಸೋನಿಯವರು ಸೋನಿಯಾ ಗಾಂಧಿ ಅವರ ಜೊತೆ ಬಂದು ಭೇಟಿ ಮಾಡಿದ್ದರು. ಎಸ್.ಎಂ.ಕೃಷ್ಣ ಅವರು ಅಧಿಕಾರದಲ್ಲಿದ್ದಾಗ ನಮಗೆ ಪ್ರಧಾನ ಕಾರ್ಯದರ್ಶಿ ಆಗಿದ್ದರು. ನನ್ನನ್ನು ತಮ್ಮನಂತೆ ಕಂಡಿದ್ದ ಅವರು, ನನ್ನ ಕೆಲಸಗಳಿಗೆ ಪ್ರೋತ್ಸಾಹ ನೀಡುತ್ತಿದ್ದರು' ಎಂದರು.

'ನೀವು ಹೈಕಮಾಂಡ್ ಭೇಟಿಗೆ ದೆಹಲಿಗೆ ಹೋಗಿದ್ದೀರಿ ಎಂದು ಚರ್ಚೆ ಆಗುತ್ತಿದೆಯಲ್ಲ' ಎಂದಾಗ, 'ನಾನು ದೆಹಲಿಗೆ ಹೋಗಿದ್ದ ವಿಷಯ, ಕೆಲಸದ ಬಗ್ಗೆ ಮಾತ್ರ ಹೇಳಬಲ್ಲೆ. ಹೈಕಮಾಂಡ್ ಭೇಟಿ ಬಗ್ಗೆ ನೀವು ಮಾಧ್ಯಮದವರು, ಸಾರ್ವಜನಿಕರು, ಇನ್ನೂ ಬೇರೆಯವರು ಏನು ಬೇಕಾದರೂ ಚರ್ಚೆ ಮಾಡಿಕೊಳ್ಳಿ. ಯಾರು ಬೇಕಾದರೂ ಮಾತನಾಡಿಕೊಳ್ಳಲಿ. ನನಗದು ಸಂಬಂಧಪಡದ ವಿಷಯ' ಎಂದರು.

ಇನ್ನಷ್ಟು ಸುದ್ದಿ ▶6

ಮುಂದಿನ ಸಿಜೆಐ ನ್ಯಾ. ಸೂರ್ಯಕಾಂತ್ ಹೆಸರು ಶಿಫಾರಸು

ನವದೆಹಲಿ (ಪಿಟಿಐ): ನ್ಯಾಯಮೂರ್ತಿ ಸೂರ್ಯಕಾಂತ್ ಅವರನ್ನು ಸುಪ್ರೀಂ ಕೋರ್ಟ್‌ನ ಮುಂದಿನ ಮುಖ್ಯ ನ್ಯಾಯಮೂರ್ತಿಯನ್ನಾಗಿ ನೇಮಕ ಮಾಡುವಂತೆ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಬಿ.ಆರ್. ಗವಾಯಿ ಅವರು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.




ನ್ಯಾ. ಸೂರ್ಯಕಾಂತ್

ಸಿಜೆಐ ಗವಾಯಿ ಅವರ ಬಳಿಕ ನ್ಯಾ. ಸೂರ್ಯಕಾಂತ್ ಅವರೇ ಹಿರಿಯ ನ್ಯಾಯಮೂರ್ತಿಯಾಗಿದ್ದಾರೆ. ಗವಾಯಿ ಅವರು ನ. 23ರಂದು ನಿವೃತ್ತಿಯಾಗಲಿದ್ದಾರೆ. ಈ ಬಳಿಕ ಸೂರ್ಯಕಾಂತ್ 53ನೇ ಸಿಜೆಐ ಆಗಲಿದ್ದಾರೆ.

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯಾಗಿ ನ್ಯಾ. ಸೂರ್ಯಕಾಂತ್ ಅವರು 2019ರ ಮೇ 24ರಂದು ಬಡ್ತಿ ಪಡೆದಿದ್ದರು. ಇವರು 2027ರ ಫೆ. 9ರಂದು ನಿವೃತ್ತಿಯಾಗಲಿದ್ದಾರೆ. ಇವರು ಸುಮಾರು 15 ತಿಂಗಳವರೆಗೆ ಸಿಜೆಐ ಆಗಿ ಕಾರ್ಯನಿರ್ವಹಿಸಲಿದ್ದಾರೆ. ಸಿಜೆಐ ಆಗಿದ್ದವರು ತಮ್ಮ ನಿವೃತ್ತಿಗೆ ಒಂದು ತಿಂಗಳು ಇರುವಂತೆ ಮುಂದಿನ ಸಿಜೆಐ ಆಗುವವರ ಹೆಸರನ್ನು ಶಿಫಾರಸು ಮಾಡಬೇಕಾಗುತ್ತದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಸರ್ಕಾರಿ ಬ್ಯಾಂಕ್‌ನಲ್ಲಿ ಶೇ 49ರಷ್ಟು ಎಫ್‌ಡಿಐ?

ನವದೆಹಲಿ (ರಾಯಿಟರ್ಸ್): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ಗರಿಷ್ಠ ಶೇಕಡ 49ರಷ್ಟು ವಿದೇಶಿ ನೇರ ಹೂಡಿಕೆಗೆ (ಎಫ್‌ಡಿಐ) ಅವಕಾಶ ಕಲ್ಪಿಸಲು ಕೇಂದ್ರ ಸರ್ಕಾರ ಆಲೋಚಿಸಿದೆ ಎಂದು ಮೂಲಗಳು ತಿಳಿಸಿವೆ.

ಈ ವಿಚಾರವಾಗಿ ಕೇಂದ್ರ ಹಣಕಾಸು ಸಚಿವಾಲಯವು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಜೊತೆ ಚರ್ಚೆ ನಡೆಸಿದೆ. ಕಳೆದ ಎರಡು ತಿಂಗಳುಗಳಿಂದ ಚರ್ಚೆ ನಡೆಯುತ್ತಿದೆ ಎಂದು ಮೂಲವೊಂದು ಹೇಳಿದೆ. ಆದರೆ ಈ ವಿಚಾರವಾಗಿ ಅಂತಿಮ ತೀರ್ಮಾನ ಇನ್ನೂ ಆಗಿಲ್ಲ.

ಭಾರತದ ಬ್ಯಾಂಕಿಂಗ್ ಉದ್ಯಮದಲ್ಲಿ ವಿದೇಶಿ ಕಂಪನಿಗಳು ಹೆಚ್ಚಿನ ಮಟ್ಟದ ಆಸಕ್ತಿ ತೋರಿಸಿವೆ. ದುಬೈ ಮೂಲದ ಎಮಿರೇಟ್ಸ್ ಎನ್‌ಬಿಡಿ ಸಂಸ್ಥೆಯು ಖಾಸಗಿ ವಲಯದ ಆರ್‌ಬಿಎಲ್ ಬ್ಯಾಂಕ್‌ನ ಶೇಕಡ 60ರಷ್ಟು ಪಾಲನ್ನು ಖರೀದಿಸಿದೆ. ಯೆಸ್ ಬ್ಯಾಂಕ್‌ನ ಶೇ 20ರಷ್ಟು ಪಾಲನ್ನು ಜಪಾನ್‌ನ ಸುಮಿಟೊಮೊ ಮಿಟ್ಸುಯಿ ಬ್ಯಾಂಕಿಂಗ್ ಕಾರ್ಪ್ ಖರೀದಿಸಿ, ನಂತರ ಹೆಚ್ಚುವರಿಯಾಗಿ ಶೇ 4.99ರಷ್ಟು ಪಾಲು ಖರೀದಿಸಿದೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಬಗ್ಗೆಯೂ ವಿದೇಶಿ ಹೂಡಿಕೆದಾರರು ಆಸಕ್ತಿ ವಹಿಸಿದ್ದಾರೆ. ಈ ಬ್ಯಾಂಕ್‌ಗಳಲ್ಲಿ ವಿದೇಶಿ ನೇರ ಹೂಡಿಕೆಗೆ ಇರುವ ಮಿತಿಯನ್ನು ಹೆಚ್ಚಿಸಿದರೆ ಅವುಗಳಿಗೆ ಭವಿಷ್ಯದಲ್ಲಿ ಹೆಚ್ಚಿನ ಬಂಡವಾಳ ಹೊಂದಲು ಆಗುತ್ತದೆ ಎಂದು ಮೂಲಗಳು ವಿವರಿಸಿವೆ.

14 ಸಾವಿರಕ್ಕೂ ಹೆಚ್ಚು ಪ್ರಕರಣ: ಸುಳಿವು ಸಿಗದ ಸಾವಿರ ಮಕ್ಕಳು

ನಾಪತ್ತೆ ಪ್ರಕರಣ: ಬಾಲಕಿಯರೇ ಅಧಿಕ

● ಕೆ.ಎಸ್.ಸುನಿಲ್

ಬೆಂಗಳೂರು: ರಾಜ್ಯದಲ್ಲಿ ಮಕ್ಕಳ ನಾಪತ್ತೆ, ಅಪಹರಣ ಪ್ರಕರಣಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದ್ದು, ಇದರಲ್ಲಿ ಬಾಲಕಿಯರ ಸಂಖ್ಯೆ ಅಧಿಕವಾಗಿದೆ.

2020ರಿಂದ 2025ರ (ಜುಲೈವರೆಗೆ) ನಡುವೆ ನಾಪತ್ತೆಯಾಗಿದ್ದ 14,878 ಮಕ್ಕಳ ಪೈಕಿ 13,542 ಮಕ್ಕಳು ಪೋಷಕರ ಮಡಿಲು ಸೇರಿದ್ದಾರೆ. ನಾಪತ್ತೆ, ಅಪಹರಣಕ್ಕೆ ಒಳಗಾದ ಪ್ರಕರಣಗಳಲ್ಲಿ ಬೆಂಗಳೂರು ನಗರ ಜಿಲ್ಲೆ ಅಗ್ರಸ್ಥಾನದಲ್ಲಿದೆ. ದಾವಣಗೆರೆ, ಉಡುಪಿ, ದಕ್ಷಿಣ ಕನ್ನಡ, ಹಾವೇರಿ, ಚಿತ್ರದುರ್ಗ, ತುಮಕೂರು, ಮೈಸೂರು ನಂತರದ ಸ್ಥಾನದಲ್ಲಿವೆ.

ಗೃಹ ಇಲಾಖೆಯ ಅಂಕಿ ಅಂಶದ ಪ್ರಕಾರ, 2025ರ ಜುಲೈ ಅಂತ್ಯದವರೆಗೆ ಒಟ್ಟು 2,170 ಮಕ್ಕಳು ಕಾಣೆಯಾಗಿದ್ದಾರೆ. ಇವರಲ್ಲಿ ಬಾಲಕರ ಸಂಖ್ಯೆ 551 ಮತ್ತು ಬಾಲಕಿಯರ ಸಂಖ್ಯೆ 1,619.

ಐದೂವರೆ ವರ್ಷದಲ್ಲಿ ನಾಪತ್ತೆಯಾದ 10,792 ಬಾಲಕಿಯರ ಪೈಕಿ 1,003 ಹಾಗೂ 4,086 ಬಾಲಕರ ಪೈಕಿ 333 ಮಕ್ಕಳು ಪತ್ತೆಯಾಗಿಲ್ಲ. ಈ ಪ್ರಕರಣಗಳಲ್ಲಿ ಐದು ವರ್ಷದಲ್ಲಿ 634 ಆರೋಪಿಗಳನ್ನು ಪೊಲೀಸರು ಬಂಧಿಸಿ, ಜೈಲಿಗೆ ಕಳುಹಿಸಿದ್ದಾರೆ. ಈ ಎಲ್ಲಾ ಪ್ರಕರಣಗಳನ್ನು 'ಮಕ್ಕಳ ಕಾಣೆ/ಅಪಹರಣ' ಪ್ರಕರಣಗಳು ಎಂದು ಗುರುತಿಸಲಾಗಿದೆ.

ಕೌಟುಂಬಿಕ ಕಲಹ, ತಂದೆ–ತಾಯಿ ಜಗಳ, ಪೋಷಕರ ವಿಚ್ಛೇದನದಿಂದ ನೊಂದು ಮಕ್ಕಳು ಮನೆ ತೊರೆಯುತ್ತಿದ್ದಾರೆ. ಹದಿಹರೆಯದವರು ಪ್ರೀತಿ, ಪ್ರೇಮದ ಬಲೆಗೆ ಸಿಲುಕಿ ಮನೆ ಬಿಟ್ಟು ಹೋಗುತ್ತಿದ್ದಾರೆ. ಇದಲ್ಲದೆ, ಬಾಲ ಕಾರ್ಮಿಕರಾಗಿ ದುಡಿಸುವುದು, ಹಣದಾಸೆ ತೋರಿಸಿ ವೇಶ್ಯಾವಾಟಿಕೆ ಜಾಲಕ್ಕೆ ತಳ್ಳುವುದು, ಅಂಗಾಂಗ ಮಾರಾಟ ದಂಧೆ, ಭಿಕ್ಷಾಟನೆಯಲ್ಲಿ ತೊಡಗಿಸಲು ಮಕ್ಕಳ ಅಪಹರಣವಾಗುತ್ತಿದೆ.

▶6

ನಾಪತ್ತೆಯಾದ ಬಾಲಕಿಯರು

ವರ್ಷ	ವರದಿ	ಪತ್ತೆ
2020	1,137	1,104
2021	1,630	1,591
2022	1,829	1,785
2023	2,131	2,083
2024	2,446	2,293
2025*	1,619	933
ಒಟ್ಟು	10,792	9,789

ನಾಪತ್ತೆಯಾದ ಬಾಲಕರು

ವರ್ಷ	ವರದಿ	ಪತ್ತೆ
2020	421	402
2021	487	462
2022	745	715
2023	907	869
2024	975	920
2025*	551	385
ಒಟ್ಟು	4,086	3,753

*ಜುಲೈವರೆಗೆ

'ಪತ್ತೆ ಹಚ್ಚಿ ಪೋಷಕರಿಗೆ ಒಪ್ಪಿಸಿ'

'ನಾಪತ್ತೆಯಾಗಿರುವ ಸಾವಿರಕ್ಕೂ ಹೆಚ್ಚು ಮಕ್ಕಳನ್ನು ಪೊಲೀಸರು ಪತ್ತೆ ಹಚ್ಚಿ ಪೋಷಕರಿಗೆ ಒಪ್ಪಿಸಬೇಕು. ಪ್ರತಿಯೊಂದು ಮಗು 18 ವರ್ಷ ಪೂರ್ಣಗೊಳ್ಳುವವರೆಗೆ ಕುಟುಂಬ ಮತ್ತು ಸಮಾಜದಲ್ಲಿ ಗೌರವದಿಂದ ಬದುಕಬೇಕು. ಪತ್ತೆಯಾಗದೇ ಇರುವ ಮಕ್ಕಳು ಎಲ್ಲಿಗೆ ಹೋಗುತ್ತಿದ್ದಾರೆ ಎಂಬುದನ್ನು ಸರ್ಕಾರ ಮತ್ತು ಸಂಬಂಧಪಟ್ಟ ಇಲಾಖೆಗಳು ಗಂಭೀರವಾಗಿ ಪರಿಗಣಿಸಬೇಕು. ಪ್ರಕರಣ ದಾಖಲಾದ 120 ದಿನಗಳ ನಂತರವೂ ಮಕ್ಕಳು ಪತ್ತೆಯಾಗದಿದ್ದರೆ, ಅಂತಹ ಪ್ರಕರಣಗಳನ್ನು ಮಾನವ ಕಳ್ಳಸಾಗಣೆ ತಡೆ ಘಟಕಗಳಿಗೆ (ಎಎಚ್‌ಟಿಯು) ವರ್ಗಾಯಿಸಲಾಗುತ್ತದೆ' ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸಂಬೆ 'ಪ್ರಜಾವಾಣಿ'ಗೆ ತಿಳಿಸಿದರು.

▶6

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ತುಂತುರು ಮಳೆಯಾಗಲಿದೆ.

ಬಿಬಿಸಿ ಯೋಜನೆ ರದ್ದುಪಡಿಸಲು ಆಗ್ರಹ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ-1 ಬಿಬಿಸಿ) ಯೋಜನೆಯನ್ನು ರದ್ದು ಪಡಿಸಬೇಕು ಎಂದು ಪಿಆರ್‌ಆರ್ ರೈತರ ಹಾಗೂ ನಿವೇಶನದಾರರ ಸಂಘ ಆಗ್ರಹಿಸಿದೆ.

ಯೋಜನೆಗೆ 2007ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ಇದುವರೆಗೂ ಯೋಜನೆ ಅನುಷ್ಠಾನಗೊಂಡಿಲ್ಲ. ಬಿಡಿಎ ಕಾಯ್ದೆಯ ಸೆಕ್ಷನ್ 27 ಪ್ರಕಾರ ಅಧಿಸೂಚನೆ ಹೊರಡಿಸಿದ ಬಳಿಕ ಐದು ವರ್ಷಗಳಲ್ಲಿ ಜಾರಿಯಾಗದಿದ್ದರೆ ಯೋಜನೆಯ ರದ್ದಾಗುತ್ತದೆ ಎಂದು ಪಿಆರ್‌ಆರ್ ರೈತ ಮತ್ತು ನಿವೇಶನದಾರರ ಸಂಘದ ಅಧ್ಯಕ್ಷ ಬಿ.ಶ್ರೀನಿವಾಸ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಪಿಆರ್‌ಆರ್ ಯೋಜನೆಗಾಗಿ 20 ವರ್ಷಗಳಿಂದ ಯಾವುದೇ ಪ್ರಕ್ರಿಯೆ ನಡೆದಿಲ್ಲ. ಈ ಭಾಗದ ರೈತರು ಆರ್ಥಿಕ ನಷ್ಟ, ಮಾನಸಿಕ ಯಾತನೆ ಅನುಭವಿಸಿದ್ದಾರೆ. ಸ್ವಂತ ಆಸ್ತಿಯ ಮೇಲೆ ಅಧಿಕಾರ ಇಲ್ಲದೆ ಬದುಕುತ್ತಿದ್ದಾರೆ. ಆದರೆ, ಬಿಡಿಎ ರೈತರಿಗೆ ಏನೂ ಮಾಡಲಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಹಳೆಯ ಪೆರಿಫೆರಲ್ ರಿಂಗ್ ರಸ್ತೆ ಯೋಜನೆಗೆ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು, ಸಂತ್ರಸ್ತರಿಗೆ ಪರಿಹಾರ ಪಡೆಯಲು ಸರ್ಕಾರ ನೀಡಿರುವ ಐದು ಆಯ್ಕೆಗಳು ರೈತರ ಮರಣ ಶಾಸನವಾಗಲಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರಿಗೆ ಮನವಿ ಸಲ್ಲಿಸಲಾಗಿದೆ' ಎಂದು ತಿಳಿಸಿದರು.

'ಬಿಡಿಎ ಕಾಯ್ದೆ 1894ರ ಸೆಕ್ಷನ್ 27ರ ಪ್ರಕಾರ ಐದು ವರ್ಷಗಳ ಅವಧಿ ಮುಗಿದಿರುವುದರಿಂದ ಪಿಆರ್‌ಆರ್ ಭಾಗ -1 ಯೋಜನೆಯನ್ನು ರದ್ದುಗೊಳಿಸಿ, ಎಲ್ಲ ಭೂ ಮಾಲೀಕರಿಗೆ ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಒಸಿ) ನೀಡಬೇಕು ಎಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ರೈತರಾದ ರಘು, ಜಗದೀಶ್ ಹಾಜರಿದ್ದರು.

ಮತದಾರರ ಪಟ್ಟಿ ತಯಾರಿಗೆ ವೇಳಾಪಟ್ಟಿ

ಐದು ನಗರ ಪಾಲಿಕೆಗಳ ವಾರ್ಡ್‌ವಾರು ಮತಪಟ್ಟಿ ತಯಾರಿಸಲು ಚುನಾವಣಾ ಆಯೋಗ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ಸಾರ್ವತ್ರಿಕ ಚುನಾವಣೆಗೆ ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸುವ ವೇಳಾಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗ ಪ್ರಕಟಿಸಿದೆ.

ಗ್ರೇಟರ್ ಬೆಂಗಳೂರು ಆಡಳಿತ ಕಾಯ್ದೆ-2024ರ ಸೆಕ್ಷನ್ 35ರಂತೆ ಐದು ನಗರ ಪಾಲಿಕೆಗಳ ಮತದಾರರ ಪಟ್ಟಿ ತಯಾರಿಸಲು ಸೋಮವಾರ ಆದೇಶ ಹೊರಡಿಸಲಾಗಿದೆ.

ನಗರ ಪಾಲಿಕೆಗಳ ಕ್ಷೇತ್ರಗಳಿಗೆ ಸಂಬಂಧಿಸಿದ ಎಲ್ಲ ಕರ್ತವ್ಯಗಳನ್ನು ನಿರ್ವಹಿಸಲು ಜಿಬಿಎ ಮುಖ್ಯ ಆಯುಕ್ತರನ್ನು ಜಿಲ್ಲಾ ಚುನಾವಣಾಧಿಕಾರಿಯಾಗಿ ಹಾಗೂ ನಗರ ಪಾಲಿಕೆಗಳ ಆಯುಕ್ತರನ್ನು ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ನೇಮಿಸಿ ಅ.13ರಂದು ಅಧಿಸೂಚಿಸಲಾಗಿತ್ತು.

ವಾರ್ಡ್‌ವಾರು ಮತದಾರರ ಪಟ್ಟಿ ತಯಾರಿಸಲು ಮತದಾರರ ನೋಂದಣಾಧಿಕಾರಿ (ಎಆರ್‌ಒ), ಸಹಾಯಕ ಮತದಾರರ ನೋಂದಣಾಧಿಕಾರಿಗಳನ್ನು (ಎಇಆರ್‌ಒ) ನೇಮಕ ಮಾಡಬೇಕಿದ್ದು, ಅದನ್ನು ಜಿಲ್ಲಾ ಚುನಾವಣಾಧಿಕಾರಿಗಳು ನಿರ್ವಹಿಸಬೇಕು ಎಂದು ತಿಳಿಸಲಾಗಿದೆ.

ಬೆಂಗಳೂರು ಕೇಂದ್ರ, ದಕ್ಷಿಣ, ಉತ್ತರ, ಪೂರ್ವ ಮತ್ತು ಪಶ್ಚಿಮ ನಗರ ಪಾಲಿಕೆಗಳ ಒಟ್ಟು 368 ವಾರ್ಡ್‌ವಾರು ಮತದಾರರ ಪಟ್ಟಿಯನ್ನು ಜಿಬಿಎ ನಿಯಮ-2025ರಂತೆ ವಿಧಾನಸಭೆ ಕ್ಷೇತ್ರದ ಮತದಾರರ ಪಟ್ಟಿಯನ್ನು ಅಳವಡಿಸಿಕೊಂಡು ತಯಾರಿಸಬೇಕು.

2025ರ ಜನವರಿ 1ರಂದು ಪ್ರಕಟವಾಗಿರುವ ವಿಧಾನಸಭೆ ಕ್ಷೇತ್ರಗಳ ಮೂಲ ಮತದಾರರ ಪಟ್ಟಿ, ನಂತರ ಪ್ರಕಟವಾಗಿರುವ ಪೂರಕ ಪಟ್ಟಿಯನ್ನು ಅಳವಡಿಸಿಕೊಂಡು, ವಾರ್ಡ್‌ವಾರು ಮತದಾರರ ಕರಡು ಪಟ್ಟಿ ತಯಾರಿಸಬೇಕು. ವಾರ್ಡ್ ವ್ಯಾಪ್ತಿಯಲ್ಲಿ ವಿಭಜನೆಯಾಗಿರುವ ವಿಧಾನಸಭೆ ಕ್ಷೇತ್ರದ ಮತದಾರರ ಪಟ್ಟಿಯ ಭಾಗಗಳನ್ನು ಹಾಗೆಯೇ ಉಳಿಸಿಕೊಂಡು ವಾರ್ಡಿನ ಮತದಾರರ ಪಟ್ಟಿಯನ್ನು ತಯಾರಿಸಬೇಕು. ಮತದಾರರ ಪಟ್ಟಿಯ ಪ್ರತಿ ಭಾಗದಲ್ಲಿ, ಅಂದರೆ ಪ್ರತಿ ಮತಗಟ್ಟೆಯಲ್ಲಿ ಮತದಾರರ ಸಂಖ್ಯೆ ಗರಿಷ್ಠ 1,500 ಮೀರದಂತೆ ಎಚ್ಚರ ವಹಿಸಬೇಕು. ಮತದಾರರ ಪಟ್ಟಿಗೆ ಬರುವ ಆಕ್ಷೇಪಣೆಗಳನ್ನು ನಿಯಮಾನುಸಾರ ಇತ್ಯರ್ಥಪಡಿಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಫೆಬ್ರುವರಿಯಲ್ಲಿ ಚುನಾವಣೆ: ಜಿಬಿಎ



ಐದು ನಗರ ಪಾಲಿಕೆಗಳ ಚುನಾವಣೆಗೆ ಮತದಾರರ ಪಟ್ಟಿಗಳನ್ನು ಸಿದ್ಧಪಡಿಸಲು, ವಾರ್ಡ್ ಮರುವಿಂಗಡಣೆ ಅಂತಿಮಗೊಳಿಸಲು ಸಮಯ ನಿಗದಿ ಮಾಡಿರುವ ಕಾರ್ಯಸೂಚಿಗೆ ಅ.10ರಂದು ನಡೆದಿದ್ದ ಜಿಬಿಎ ಮೊದಲ ಸಭೆಯಲ್ಲಿ ಅನುಮೋದನೆ ನೀಡಲಾಗಿತ್ತು. ಅದರಂತೆ ರಾಜ್ಯ ಚುನಾವಣಾ ಆಯೋಗ, ಆದೇಶ ಹೊರಡಿಸಿದೆ.

ನವೆಂಬರ್ ಆರಂಭದೊಳಗೆ ನಗರ ಪಾಲಿಕೆಗಳ ವಾರ್ಡ್ ಮರು ವಿಂಗಡಣೆ ಅಂತಿಮ ಅಧಿಸೂಚನೆಯಾಗಲಿದೆ. ನವೆಂಬರ್ 30ರಂದು ರಾಜ್ಯ ಚುನಾವಣಾ ಆಯೋಗವು ಮತದಾರರ ಪಟ್ಟಿಗಳ ತಯಾರಿಕೆಯನ್ನು ಆರಂಭಿಸುತ್ತದೆ. 2026ರ ಫೆಬ್ರುವರಿ ಮಧ್ಯಭಾಗದಲ್ಲಿ ರಾಜ್ಯ ಚುನಾವಣಾ ಆಯೋಗ ನಗರ ಪಾಲಿಕೆಗಳ ಚುನಾವಣೆಗೆ ಅಧಿಸೂಚನೆ ಹೊರಡಿಸುವ ನಿರೀಕ್ಷೆ ಇದೆ ಎಂದು ಜಿಬಿಎ ಮೊದಲ ಸಭೆಯ ಕಾರ್ಯಸೂಚಿಯಲ್ಲಿ ನಮೂದಾಗಿತ್ತು.

ಮತದಾರರ ಪಟ್ಟಿ ತಯಾರಿಸುವ ವೇಳಾಪಟ್ಟಿ

ನ.1ರಿಂದ 3	ಇಆರ್‌ಒ, ಎಇಆರ್‌ಒ, ಬಿಎಲ್‌ಒಗಳಿಗೆ ತರಬೇತಿ (ಪ್ರತಿ ನಗರ ಪಾಲಿಕೆವಾರು)
ನ.4ರಿಂದ 8	ವಾರ್ಡ್ ಗಡಿಯಲ್ಲಿನ ಮನೆಗಳಿಗೆ ಭೇಟಿ ನೀಡಿ ವಿಧಾನಸಭೆ ಕ್ಷೇತ್ರವಾರು ಮತದಾರರ ಪಟ್ಟಿ ಪರಿಶೀಲನೆ
ನ.9ರಿಂದ 11	ಮಾಹಿತಿಗಳನ್ನು ಗಣಕೀಕರಣಗೊಳಿಸುವುದು
ನ.12ರಿಂದ 21	ಮೊದಲ ಚೆಕ್‌ಲಿಸ್ಟ್ ಮುದ್ರಣ
ನ.22ರಿಂದ 23	ಬಿಟ್ಟುಹೋದ- ಪುನರಾವರ್ತನೆಯಾದ ಮತದಾರರ ಪರಿಶೀಲನೆ
ನ.24	ಪಾರ್ಟ್‌ಗಳನ್ನು (ಭಾಗ) ಮರು ವಿಂಗಡಿಸಿ ಧೃಢೀಕರಿಸುವುದು
ನ.25ರಿಂದ 29	ವಾರ್ಡ್‌ವಾರು ಮತದಾರರ ನೂತನ ಚೆಕ್‌ಲಿಸ್ಟ್ ತಯಾರಿ
ನ.30ರಿಂದ ಡಿ.2	ವಾರ್ಡ್‌ವಾರು ಮತದಾರರ ನೂತನ ಚೆಕ್‌ಲಿಸ್ಟ್ ಪರಿಶೀಲನೆ
ಡಿ.3ರಿಂದ 7	ವಾರ್ಡ್‌ವಾರು ಮತದಾರರ ಪಟ್ಟಿ ಸಮಗ್ರ ಮುದ್ರಣ
ಡಿ.8	ವಾರ್ಡ್‌ವಾರು ಮತದಾರರ ಪಟ್ಟಿಯ ಕರಡು ಪ್ರತಿ
ಡಿ.9ರಿಂದ 23	ಮನೆ ಮನೆಗೆ ಭೇಟಿ ನೀಡಿ ಪರಿಶೀಲನೆ, ಆಕ್ಷೇಪಣೆ ಸ್ವೀಕಾರ
ಡಿ.24ರಿಂದ ಜ.7	ಆಕ್ಷೇಪಣೆ ಪರಿಶೀಲನೆ
ಜ.8ರಿಂದ 15	ವಾರ್ಡ್‌ವಾರು ಮತದಾರರ ಪಟ್ಟಿಯ ಅಂತಿಮ ಚೆಕ್‌ಲಿಸ್ಟ್
ಜ.16ರಿಂದ 19	ಅಂತಿಮ ಚೆಕ್‌ಲಿಸ್ಟ್ ಪರಿಶೀಲನೆ
ಜ.20ರಿಂದ 28	ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಸಮಗ್ರ ಮುದ್ರಣ
ಜ.29	ವಾರ್ಡ್‌ವಾರು ಮತದಾರರ ಅಂತಿಮ ಪಟ್ಟಿ ಪ್ರಕಟಣೆ

ಮಿಸ್ಸಿಂಗ್ ಕೇಸ್ ಮುಕ್ತಾಯ: ಹೈಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಪತ್ತೆಯಾದವರನ್ನು ಸರಿಯಾಗಿ ಹುಡುಕದೇ ಮಿಸ್ಸಿಂಗ್ ಕೇಸ್ ಮುಕ್ತಾಯಗೊಳಿಸಲಾಗುತ್ತಿದೆ' ಎಂಬ ಆಕ್ಷೇಪವನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ಈ ಕುರಿತು ಪೊಲೀಸ್ ಇಲಾಖೆಯಿಂದ ವಿವರಣೆ ಪಡೆದು ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ನಾಪತ್ತೆ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಪೊಲೀಸರ ಕ್ರಮವನ್ನು ಪ್ರಶ್ನಿಸಿ ನಗರದ ಹಿರಿಯ ನಾಗರಿಕ ಮಹೇಶ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಕುಮಾರ್ ಎಂಬುವರು ನಾಪತ್ತೆಯಾಗಿದ್ದಾರೆ ಎಂದು ಮಹೇಶ್ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಆದರೆ, ಪೊಲೀಸರು ನಾಪತ್ತೆಯಾದವರನ್ನು ಹುಡುಕದೇ ಮಿಸ್ಸಿಂಗ್ ಕೇಸ್ ಮುಕ್ತಾಯಗೊಳಿಸಿದ್ದಾರೆ. ಇದು ಪೊಲೀಸರ ಕಾರ್ಯವೈಖರಿಗೆ ಒಂದು ಉದಾಹರಣೆಯಷ್ಟೇ' ಎಂದರು.

'ಇದೇ ರೀತಿ ಬಹುತೇಕ ನಾಪತ್ತೆ ಪ್ರಕರಣಗಳನ್ನು ಪೊಲೀಸರು ಮುಕ್ತಾಯ ಮಾಡುತ್ತಿದ್ದಾರೆ. ಅಂಕಿಅಂಶಗಳ ಪ್ರಕಾರ ಪ್ರತಿ 8 ನಿಮಿಷಕ್ಕೆ ಒಬ್ಬರು ನಾಪತ್ತೆಯಾಗುತ್ತಿದ್ದಾರೆ ಎಂಬ ವರದಿಗಳಿವೆ. ಆದರೆ, ಪೊಲೀಸರು ಅಂತಹ ಪ್ರಕರಣಗಳಲ್ಲಿ ಯಾವುದೇ ರೀತಿಯ ಸಮಗ್ರ ತನಿಖೆ ಕೈಗೊಳ್ಳುತ್ತಿಲ್ಲ. ನ್ಯಾಯಾಲಯಗಳಿಗೆ ಸರಿಯಾದ ವರದಿಗಳನ್ನು ಸಲ್ಲಿಸುತ್ತಿಲ್ಲ' ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕಾಣೆಯಾದವರನ್ನು ಹುಡುಕದೇ ಪೊಲೀಸರು ಕೇಸ್ ಮುಕ್ತಾಯಗೊಳಿಸುತ್ತಿರುವುದೇಕೆ' ಎಂದು ರಾಜ್ಯ ಸರ್ಕಾರವನ್ನು ಪ್ರಶ್ನಿಸಿತಲ್ಲದೇ, ವಿವರಣೆ ಕೋರಿ ವಿಚಾರಣೆಯನ್ನು ನವೆಂಬರ್ 3ಕ್ಕೆ ಮುಂದೂಡಿತು.

ಸಾವಿರಾರು ಕೋಟಿ ಸೆಸ್ ಸಂಗ್ರಹ– ನಿಲ್ಲದ ಭಿಕ್ಷಾಟನೆ: ಅತೃಪ್ತಿ



'ಕಳೆದ 4 ವರ್ಷಗಳ ಅವಧಿಯಲ್ಲಿ ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳಿಂದ ಸುಮಾರು ₹7,093 ಕೋಟಿ ಮೊತ್ತವನ್ನು ಭಿಕ್ಷುಕರ ಸೆಸ್ ರೂಪದಲ್ಲಿ ಸಂಗ್ರಹ ಮಾಡಿದೆ. ಆದರೂ ರಸ್ತೆಗಳಲ್ಲಿ ಮಕ್ಕಳ ಭಿಕ್ಷಾಟನೆ ಮುಂದುವರಿದಿದೆ' ಎಂದು ಹೈಕೋರ್ಟ್ ತೀವ್ರ ಕಳವಳ ವ್ಯಕ್ತಪಡಿಸಿದೆ.

ಈ ಸಂಬಂಧ, 'ಲೆಟ್ಸ್ ಕಿಟ್ ಫೌಂಡೇಷನ್' ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ, 'ಇದು ಎಲ್ಲವೂ ಸರಿಯಿಲ್ಲ ಎಂಬುದನ್ನು ಸೂಚಿಸುತ್ತದೆ' ಎಂದು ಸರ್ಕಾರದ ಕಾರ್ಯವೈಖರಿಗೆ ಅತೃಪ್ತಿ ವ್ಯಕ್ತಪಡಿಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪುತ್ತಿಗೆ ಆರ್.ರಮೇಶ್, 'ಸರ್ಕಾರ ನೀಡಿರುವ ಮಾಹಿತಿಯ ಅನುಸಾರ 2021-22ರಿಂದ 2024-25ರವರೆಗೆ 4 ವರ್ಷಗಳ ಅವಧಿಯಲ್ಲಿ ಒಟ್ಟು ₹7,093 ಕೋಟಿ ಸೆಸ್ ಸಂಗ್ರಹ ಮಾಡಲಾಗಿದೆ. ಅದರಲ್ಲಿ ₹3,453 ಕೋಟಿಯಷ್ಟು ಖರ್ಚು ಮಾಡಲಾಗಿದೆ. ಆದರೂ ಮಕ್ಕಳ ಭಿಕ್ಷಾಟನೆ ನಿಂತಿಲ್ಲ' ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಎಷ್ಟು ಸೆಸ್ ಸಂಗ್ರಹ ಮಾಡಲಾಗಿದೆ, ಎಷ್ಟು ಖರ್ಚು ಮಾಡಲಾಗಿದೆ ಹಾಗೂ ಬಾಕಿ ಹಣದ ಲೆಕ್ಕ ನೀಡಿ' ಎಂದು ಸರ್ಕಾರಕ್ಕೆ ಸೂಚಿಸಿತು. ಅಂತೆಯೇ, ಸೆಸ್ ಸಂಗ್ರಹದ ಕುರಿತು ಎಲ್ಲಾ ಅಂಕಿ ಅಂಶ ಸಂಗ್ರಹಿಸಲು ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ನಿರ್ದೇಶಿಸಿತು.

'ಸ್ಥಳೀಯ ಸಂಸ್ಥೆಗಳು ಸಂಗ್ರಹಿಸಿರುವ ಭಿಕ್ಷುಕರ ಸೆಸ್ ಅನ್ನು ರಿಕವರಿ ಮಾಡಿಕೊಳ್ಳಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ಎಂಬ ಬಗ್ಗೆ ಮುಂದಿನ ವಿಚಾರಣೆ ವೇಳೆ ಮಾಹಿತಿ ನೀಡಿ' ಎಂದು ಸರ್ಕಾರಕ್ಕೆ ನಿರ್ದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು 8 ವಾರಗಳ ಕಾಲ ಮುಂದೂಡಿದೆ.

ಅರ್ಜಿಯಲ್ಲಿ ಏನಿದೆ?: 'ಬೆಂಗಳೂರಿನ ಬೀದಿಗಳಲ್ಲಿ ಪ್ರಮುಖವಾಗಿ ಸಂಚಾರಿ ಸಿಗ್ನಲ್‌ಗಳಲ್ಲಿ ಪೆನ್, ಆಟಿಕೆಗಳು, ಇಯರ್ ಬಡ್ ಮತ್ತಿತರ ವಸ್ತುಗಳನ್ನು ಮಾರಾಟ ಮಾಡಲು ಹಾಗೂ ಭಿಕ್ಷಾಟನೆಗೆ ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ. ಇದು ಬಾಲ ನ್ಯಾಯ ಕಾಯ್ದೆ ಹಾಗೂ ಸಂವಿಧಾನದ 21ನೇ ವಿಧಿಯ ಉಲ್ಲಂಘನೆ. ಆದ್ದರಿಂದ, ಮಕ್ಕಳನ್ನು ಮಾರಾಟದ ಕೆಲಸಕ್ಕೆ ಬಳಸಿಕೊಳ್ಳದಂತೆ ಹಾಗೂ ಅವರನ್ನು ಶಾಲೆಗಳಿಗೆ ದಾಖಲಿಸಲು ಅಗತ್ಯ ಕ್ರಮ ಜರುಗಿಸುವಂತೆ ರಾಜ್ಯ ಸರ್ಕಾರ, ಬಿಬಿಎಂಪಿ ಮತ್ತು ಶಿಕ್ಷಣ ಸಂಸ್ಥೆಗಳಿಗೆ ನಿರ್ದೇಶಿಸಬೇಕು' ಎಂಬುದು ಅರ್ಜಿದಾರರ ಕೋರಿಕೆ.



ವಾಲ್ಮೀಕಿ ಸಮುದಾಯವನ್ನು ನಿಂದಿಸಿರುವ ಮಾಜಿ ಸಂಸದ ರಮೇಶ ಕತ್ತಿ ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ವಾಲ್ಮೀಕಿ ನಾಯಕ ಮಹಾಸಭಾ (ಯುವ ಘಟಕ)ದ ಸದಸ್ಯರು ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು–ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

'ನಿನ್ನೊಲುಮೆಯಿಂದಲೇ' ಕೆ.ಎಸ್. ನರಸಿಂಹಸ್ವಾಮಿ ಅವರ ಭಾವಗೀತೆಗಳ ಗಾಯನ: ಉದ್ಘಾಟನೆ: ಮೇಖಲಾ ವೆಂಕಟೇಶ್, ಅಧ್ಯಕ್ಷತೆ: ಝೈಬಾ ನಿಷತ್ ಬಾನು, ಅತಿಥಿ: ಅಮೃತ ಚಂದ್ರಶೇಖರ್, ಆಯೋಜನೆ: ವಿಜಯ ಕಾಲೇಜು, ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಸಮಿತಿ, ಸ್ಥಳ: ವಿಜಯ ಕಾಲೇಜು ಸಭಾಂಗಣ, ಬಸವನಗುಡಿ, ಬೆಳಿಗ್ಗೆ 10

ನೇರ ಮಾರುಕಟ್ಟೆ–ರೈತರನ್ನು ಸಬಲೀಕರಣಗೊಳಿಸುವ ಪ್ರಬಲ ಉಪಕರಣ–ತರಬೇತಿ: ಉದ್ಘಾಟನೆ: ಎಸ್.ವಿ. ಸುರೇಶ, ಅಧ್ಯಕ್ಷತೆ: ವೈ.ಎನ್. ಶಿವಲಿಂಗಯ್ಯ, ಅತಿಥಿಗಳು: ಸಿ.ನಾರಾಯಣಸ್ವಾಮಿ, ಬಸವಪ್ರಭು ಜಿರ್ಲಿ, ಆಯೋಜನೆ: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ, ಸ್ಥಳ: ರೈತ ತರಬೇತಿ ಸಂಸ್ಥೆ, ಜಿಕೆವಿಕೆ, ಹೆಬ್ಬಾಳ, ಬೆಳಿಗ್ಗೆ 10

108 ಸುಹಾಸಿನಿಯರಿಂದ ಲಲಿತಾ ಸಹಸ್ರನಾಮ ಪಾರಾಯಣ: ಸ್ಥಳ: ತಿರುಮಲಗಿರಿ ಲಕ್ಷ್ಮೀವೆಂಕಟೇಶ್ವರ ಸ್ವಾಮಿ ದೇವಸ್ಥಾನ, ಜೆ.ಪಿ. ನಗರ 2ನೇ ಹಂತ, ಬೆಳಿಗ್ಗೆ 10

ತ್ರಿಭಾಷಾ ನೀತಿ ಸಾಕು; ಎರಡು ನುಡಿ ಕಲಿಕೆ ಬೇಕು–ವಿಚಾರಸಂಕಿರಣ: ಆಯೋಜನೆ: ಬನವಾಸಿ ಬಳಗ, ಸ್ಥಳ: ಗಾಂಧಿಭವನ, ಕುಮಾರಪಾರ್ಕ್ ರಸ್ತೆ, ಬೆಳಿಗ್ಗೆ 10.30

ಪೊಲೀಸ್ ಸಿಬ್ಬಂದಿಯ ಪೀಕ್–ಕ್ಯಾಪ್ ಪರಿಚಯ–ವಿತರಣೆ, ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ ಉದ್ಘಾಟನೆ, ಸನ್ಮಿತ್ರ ಕೈಪಿಡಿ ಬಿಡುಗಡೆ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಬಸವರಾಜ ಎಸ್. ಹೊರಟ್ಟಿ, ಡಿ.ಕೆ. ಶಿವಕುಮಾರ್, ಯು.ಟಿ. ಖಾದರ್, ಅಧ್ಯಕ್ಷತೆ: ಜಿ. ಪರಮೇಶ್ವರ, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ಬಹುಭಾಷಾ ಸಂಗೀತ ಸ್ಪರ್ಧೆ: ಉದ್ಘಾಟನೆ: ಟಿ.ಡಿ. ನಂದಕುಮಾರ್, ಅಧ್ಯಕ್ಷತೆ: ಜಗದೀಶ್ ಕುಮಾರ್, ಆಯೋಜನೆ ಮತ್ತು ಸ್ಥಳ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತ ಕಲಾ ಸಂಘ, ಜಾಲಹಳ್ಳಿ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

'ನಮ್ಮನ್ನು ಅರ್ಥಮಾಡಿಕೊಂಡರೆ ಗಾಂಧಿ ಅರಿಯಲು ಸಾಧ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೊದಲು ನಮ್ಮನ್ನು ಅರ್ಥ ಮಾಡಿಕೊಂಡರೆ ಮಾತ್ರ ಗಾಂಧೀಜಿ ಅವರನ್ನು ಅರಿಯಲು ಸಾಧ್ಯ. ಇದರೊಂದಿಗೆ ಸಮಾಜವನ್ನು ಅರ್ಥ ಮಾಡಿಕೊಳ್ಳಬಹುದು ಎಂದು ದೈಹಿಕ ಶಿಕ್ಷಣ ನಿರ್ದೇಶಕಿ ಅಬಿದಾ ಬೇಗಂ ಅಭಿಪ್ರಾಯಪಟ್ಟರು.

ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕ-1 ರ ವತಿಯಿಂದ ಸೋಮವಾರ ರಾಷ್ಟ್ರೀಯ ಸೇವಾ ಯೋಜನೆ ದಿನಾಚರಣೆ ಪ್ರಯುಕ್ತ ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ 'ಗಾಂಧಿ ಮತ್ತು ಯುವಜನತೆ ಕುರಿತು ಮಾತನಾಡಿದರು.

'ವಾಸ್ತವವನ್ನು ಅರ್ಥ ಮಾಡಿಕೊಂಡು ಸರಳ ಜೀವನವನ್ನು ಮೈಗೂಡಿಸಿಕೊಂಡಾಗ ಸೇವಾ ಮನೋಭಾವ ಮೂಡುತ್ತದೆ. ಗಾಂಧೀಜಿ ಅವರ ಕಲ್ಪನೆಯ ಕೂಸು ರಾಷ್ಟ್ರೀಯ ಸೇವಾ ಯೋಜನೆ. ಯುವ ಜನರು ಗ್ರಾಮಗಳ ಕಡೆ ತೆರಳಬೇಕು' ಎಂದರು. ವಾಣಿಜ್ಯ ಶಾಸ್ತ್ರ ವಿಭಾಗದ ಅಧ್ಯಾಪಕ ಸತೀಶ್ ಅವರು 'ರಾಷ್ಟ್ರೀಯ ಸೇವಾ ಯೋಜನೆ ಕುರಿತು ಮಾತನಾಡಿದರು. ಪ್ರಾಂಶುಪಾಲೆ ಡಾ. ಶುಭ ಅಧ್ಯಕ್ಷತೆ ವಹಿಸಿದ್ದರು. ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಎಸ್.ಜಿ.ರಾಘವೇಂದ್ರ ಇದ್ದರು.

ಬೆಸ್ಕಾಂ: ದೂರು ದಾಖಲಿಸಲು ಸಹಾಯವಾಣಿ

ಬೆಂಗಳೂರು: ವಿದ್ಯುತ್ ಸಂಬಂಧಿತ ಕುಂದು-ಕೊರತೆಗಳ ಶೀಘ್ರ ಪರಿಹಾರಕ್ಕೆ ಸಹಾಯವಾಣಿ ಸಂಖ್ಯೆ 1912 ಹಾಗೂ ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ 'ವಾಟ್ಸ್‌ಆ್ಯಪ್ ಸಹಾಯವಾಣಿ' ಸಂಖ್ಯೆಗಳಿಗೆ ದೂರು ದಾಖಲಿಸಲು ಬೆಸ್ಕಾಂ ಮನವಿ ಮಾಡಿದೆ.

ಒಂದು ವೇಳೆ 1912 ಸಹಾಯವಾಣಿ ಸಂಖ್ಯೆ ಲಭ್ಯವಾಗದಿದ್ದಲ್ಲಿ ರೈತರು ತಮ್ಮ ಜಿಲ್ಲೆಗೆ ಸಂಬಂಧಿಸಿದ 'ವಾಟ್ಸ್ ಆ್ಯಪ್' ಸಹಾಯವಾಣಿ ಸಂಖ್ಯೆಗಳಿಗೆ ದೂರುಗಳನ್ನು ನೀಡಬಹುದು. ಬೆಸ್ಕಾಂನ ಬೆಂಗಳೂರು ನಗರ ಜಿಲ್ಲೆಯ ದಕ್ಷಿಣ, ಉತ್ತರ, ಪೂರ್ವ ಹಾಗೂ ಪಶ್ಚಿಮ ವೃತ್ತಗಳಿಗೆ 4 ವಾಟ್ಸ್ ಆ್ಯಪ್ ಸಹಾಯವಾಣಿ ಸಂಖ್ಯೆಗಳು ಹಾಗೂ ದಾವಣಗೆರೆ, ಚಿತ್ರದುರ್ಗ, ತುಮಕೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳ ವೃತ್ತಗಳಿಗೆ ತಲಾ ಒಂದು 'ವಾಟ್ಸ್ ಆ್ಯಪ್ ಸಹಾಯವಾಣಿ ಸಂಖ್ಯೆಗಳನ್ನು ನೀಡಲಾಗಿದೆ.

ಸಹಾಯವಾಣಿ ಕೇಂದ್ರದ ಗ್ರಾಹಕ ಸೇವಾ ಪ್ರತಿನಿಧಿಗಳು ದೂರುಗಳನ್ನು ಅಥವಾ ಸಂದೇಶಗಳನ್ನು ಸಂಬಂಧಿಸಿದ ಉಪ ವಿಭಾಗಗಳಿಗೆ ರವಾನಿಸಿ ಶೀಘ್ರ ಪರಿಹಾರಕ್ಕೆ ಕ್ರಮ ಕೈಗೊಳ್ಳಲಿದ್ದಾರೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಾಟ್ಸ್‌ಆ್ಯಪ್ ಸಂಖ್ಯೆಗಳ ವಿವರ

ಬೆಂಗಳೂರು ನಗರ ಜಿಲ್ಲೆ	
ದಕ್ಷಿಣ ವೃತ್ತ	8277884011
ಪಶ್ಚಿಮ ವೃತ್ತ	8277884012
ಪೂರ್ವ ವೃತ್ತ	8277884013
ಉತ್ತರ ವೃತ್ತ	8277884014
ಕೋಲಾರ ಜಿಲ್ಲೆ	8277884015
ಚಿಕ್ಕಬಳ್ಳಾಪುರ ಜಿಲ್ಲೆ	8277884016
ಬೆಂಗಳೂರು ಗ್ರಾಮಾಂತರ ಜಿಲ್ಲೆ	8277884017
ರಾಮನಗರ ಜಿಲ್ಲೆ	8277884018



ಕರೋನರಿ ಬೈಪಾಸ್ ಶಸ್ತ್ರಚಿಕಿತ್ಸೆ
ಹೃದಯಕ್ಕೆ ಮರುಜೀವ

• ಡಾ. ಕಿರಣ್ ವಿ. ಎಸ್.

ರಕ್ತವು ಬದುಕಿನ ಮೂಲಾಧಾರ. ಶರೀರದ ಯಾವುದೇ ಜೀವಕೋಶ ಸ್ವಸ್ಥವಾಗಿ ಕೆಲಸ ಮಾಡಿಕೊಂಡಿರಲು ಬೇಕಾದ ಆಮ್ಲಜನಕ ಮತ್ತು ಪೋಷಕಾಂಶಗಳನ್ನು ಅದಕ್ಕೆ ತಲುಪಿಸುವುದು ರಕ್ತ. ಶರೀರದಲ್ಲಿ ರಕ್ತದ ಅಗತ್ಯ ಇಲ್ಲದ ಜೀವಕೋಶಗಳು ತೀರಾ ವಿರಳ. ರಕ್ತವು ಜೀವಕೋಶಗಳಿಗೆ ತಲುಪುವುದು ಇಡೀ ಶರೀರದ ಆದ್ಯಂತವಾಗಿ ಹರಡಿರುವ ರಕ್ತನಾಳಗಳಿಂದ. ಅವುಗಳ ಒಳಗೆ ನಿರಂತರವಾಗಿ ರಕ್ತವನ್ನು ಹರಿಯುವಂತೆ ಮಾಡುವುದು ಹೃದಯ. ಭ್ರೂಣದ 22ನೆಯ ದಿನದಿಂದ ಬಡಿಯಲು ಆರಂಭಿಸಿ, ಜೀವನ ಮುಗಿಯುವವರೆಗೆ ನಿರಂತರವಾಗಿ ಕೆಲಸ ಮಾಡುವುದು ಹೃದಯವೇ. ಒಂದು ವೇಳೆ ಹೃದಯ ಕೆಲಸ ಮಾಡುವುದು ನಿಂತರೆ ಮರಣ ಕೆಲವೇ ನಿಮಿಷಗಳ ದೂರ.

ಹೀಗೆ ಒಂದೇ ಸಮನೆ ಕೆಲಸ ಮಾಡುವ ಹೃದಯದ ಸ್ನಾಯುಗಳಿಗೂ ಪೋಷಣೆ ಬೇಕಾಗುತ್ತದೆ. ತನ್ನ ಒಡಲಲ್ಲಿ ಎಷ್ಟೇ ಪ್ರಮಾಣದ ರಕ್ತ ಇದ್ದರೂ ಹೃದಯ ಅದನ್ನು ನೇರವಾಗಿ ಬಳಸಿಕೊಳ್ಳಲಾಗದು. ಸರಳವಾದ ಉದಾಹರಣೆ ಎಂದರೆ, ಬ್ಯಾಂಕಿನಲ್ಲಿ ಕೋಟಿಗಟ್ಟಲೇ ಹಣದ ನಿರ್ವಹಣೆ ಮಾಡುವ ಕ್ಯಾಶಿಯರ್, ಅದನ್ನು ತಮ್ಮ ಕುಟುಂಬದ ನಿರ್ವಹಣೆಗೆ ಬಳಸಲಾಗುವುದಿಲ್ಲ. ಬದಲಿಗೆ ಆ ಕೆಲಸಕ್ಕೆ ಅವರಿಗೆ ವೇತನ ದೊರೆಯುತ್ತದೆ. ಅಂತೆಯೇ ಹೃದಯವೂ ತನ್ನ ಕೆಲಸದ ನಿರ್ವಹಣೆಗೆ ಮೂರು ಪ್ರಮುಖ ರಕ್ತನಾಳಗಳನ್ನು ಹೊಂದಿದೆ. ಹೃದಯದ ಶಿರಸ್ಸಿನ ಭಾಗದಿಂದ ಹೊರಡುವ ಮಹಾಧಮನಿಯಿಂದ ಇಳಿದು ಹೃದಯದ ಹೊರ ಆವರಣದ ಮೇಲೆ ಕಿರೀಟದ ರೀತಿಯಲ್ಲಿ ಹರಡುವ ಇವನ್ನು 'ಕರೋನರಿ ರಕ್ತನಾಳಗಳು' ಎನ್ನುತ್ತಾರೆ.

ದೈಹಿಕ ವ್ಯಾಯಾಮದ ಕೊರತೆ, ಹೆಚ್ಚು ಕೊಬ್ಬಿನ ಆಹಾರಸೇವನೆ, ಧೂಮಪಾನ, ಒತ್ತಡದ ಜೀವನಶೈಲಿ, ಅಧಿಕ ರಕ್ತದೊತ್ತಡ, ಮಧುಮೇಹ, ವಂಶಪಾರಂಪರ್ಯ ಆರೋಗ್ಯಸಮಸ್ಯೆಗಳು ಮೊದಲಾದ ಕಾರಣಗಳಿಂದ ಕರೋನರಿ ರಕ್ತನಾಳಗಳ ಒಳಭಾಗದಲ್ಲಿ ಕೊಬ್ಬಿನ ಅಂಶ (ಪ್ಲಾಕ್) ಜಮೆಯಾಗುತ್ತದೆ. ಕಾಲಕ್ರಮೇಣ ಈ 'ಪ್ಲಾಕ್' ಕಠಿಣವಾಗಿ, ಕರೋನರಿ ರಕ್ತನಾಳದ ಆಂತರಿಕ ವ್ಯಾಸವನ್ನು ಕಿರಿದಾಗಿಸುತ್ತದೆ. ಇದರಿಂದ ರಕ್ತದ ಹರಿಯುವಿಕೆ ತಗ್ಗಿ, ಹೃದಯದ ಕಾರ್ಯಕ್ಷಮತೆ ಇಳಿದು, ಎದೆನೋವು, ಉಬ್ಬಸ, ಸುಸ್ತು, ನಿಶ್ಶಕ್ತಿ ಮೊದಲಾದ ಲಕ್ಷಣಗಳು ಕಾಣುತ್ತವೆ. ಪ್ಲಾಕ್ ಜಮಾವಣೆ ಹೆಚ್ಚುತ್ತಾ ಕರೋನರಿ ರಕ್ತನಾಳವು ಪೂರ್ಣವಾಗಿ ಮುಚ್ಚಿದರೆ ಹೃದಯದ ನಿಶ್ಚಿತ ಭಾಗಕ್ಕೆ ರಕ್ತದ ಸರಬರಾಜು ನಿಂತುಹೋಗಿ, ಆ ಭಾಗ ತೀವ್ರ ಹಾನಿಗೊಳಗಾಗುತ್ತದೆ. ಅಂತಹ ಸಂದರ್ಭದಲ್ಲಿ ರಕ್ತದ ಹರಿವನ್ನು ಮರಳಿ ಸರಾಗಗೊಳಿಸಲು ಲಭ್ಯವಿರುವ ಚಿಕಿತ್ಸೆಗಳಲ್ಲಿ ಪ್ರಮುಖ ಹಾಗೂ ಪರಿಣಾಮಕಾರಿಯಾದದ್ದು ಕರೋನರಿ ಬೈಪಾಸ್ ಶಸ್ತ್ರಚಿಕಿತ್ಸೆ. ಜನಸಾಮಾನ್ಯರು ಇದನ್ನು 'ಹೃದಯ ಬೈಪಾಸ್ ಸರ್ಜರಿ' ಎನ್ನುತ್ತಾರೆ.

'ಬೈಪಾಸ್' ಎಂದರೆ ಒಂದು ಮುಖ್ಯ ಮಾರ್ಗದಲ್ಲಿ ಇರುವ ಅಡಚಣೆಯನ್ನು ದಾಟಿ ಹೋಗಲು ನಿರ್ಮಾಣವಾಗುವ ಪರ್ಯಾಯ ರಸ್ತೆ. ಹೆದ್ದಾರಿಗಳ ನಡುವೆ ಇರುವ ಊರುಗಳ ಒಳಗೆ ಬೃಹತ್ ವಾಹನಗಳು ಪ್ರವೇಶಿಸುವುದನ್ನು ತಪ್ಪಿಸಲು ಊರಿನ ಹೊರಭಾಗದಲ್ಲಿ ನಿರ್ಮಿಸುವ ಬೈಪಾಸ್ ರಸ್ತೆಯ ರೀತಿಯಲ್ಲೇ ಈ ಶಸ್ತ್ರಚಿಕಿತ್ಸೆ ಕೂಡ ಕೆಲಸ ಮಾಡುತ್ತದೆ.

ಹೃದಯದ ಆ್ಯಂಜಿಯೋಗ್ರಾಂ ಪರೀಕ್ಷೆಯ ಮೂಲಕ ರಕ್ತನಾಳದ ಯಾವ ಭಾಗದಲ್ಲಿ ರಕ್ತಸಂಚಾರಕ್ಕೆ ತಡೆ ಉಂಟಾಗಿದೆ ಎಂಬುದನ್ನು ತಿಳಿಯಬಹುದು. ಅಡಚಣೆ ಇರುವ ಭಾಗದ ಮುನ್ನ ಮತ್ತು ಅದರ ನಂತರದ ರಕ್ತನಾಳ ಆರೋಗ್ಯವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ನಂತರ, ರಕ್ತನಾಳದ ಆರೋಗ್ಯಕರ ಭಾಗಗಳನ್ನು ಪರಸ್ಪರ ಜೋಡಿಸುವ ಮತ್ತೊಂದು ಪರ್ಯಾಯ ರಕ್ತನಾಳವನ್ನು ಬೆಸೆಯಬಹುದು. ಕಾಲಿನ ಕೆಲವು ಧಮನಿಗಳು, ಅಂಗೈ ಸಮೀಪದ ಕೆಲವು ಸಿರೆಗಳು, ಎದೆಯೊಳಗಿನ ಕೆಲವು ರಕ್ತನಾಳಗಳನ್ನು ಈ ಕೆಲಸಕ್ಕೆ ಬಳಸಬಹುದು. ಕೈ-ಕಾಲಿನಲ್ಲಿ, ಎದೆಯಲ್ಲಿ ಇರುವ ಇಂತಹ ರಕ್ತನಾಳಗಳಿಗೆ ಅನೇಕ ಬದಲಿ ಧಮನಿಗಳು ಇರುತ್ತವೆ. ಅಲ್ಲಿಂದ ನಿಶ್ಚಿತ ರಕ್ತನಾಳವನ್ನು ತೆಗೆದುಹಾಕಿದರೂ ಸಮಸ್ಯೆ ಆಗದಂತೆ ಇತರ ಧಮನಿಗಳು ಕೆಲಸವನ್ನು ನಿರ್ವಹಿಸುತ್ತವೆ.

ಹೃದಯದ ಬೈಪಾಸ್ ಶಸ್ತ್ರಚಿಕಿತ್ಸೆಯ ಆಧುನಿಕ ವಿಧಾನಗಳು ಇಡೀ ಪ್ರಕ್ರಿಯೆಯನ್ನು ಸರಳಗೊಳಿಸಿ, ಸುರಕ್ಷಿತವಾಗಿಸಿ, ಶಸ್ತ್ರಚಿಕಿತ್ಸೆಯ ನೋವನ್ನು ಕಡಿಮೆಯಾಗಿಸಿ, ಚೇತರಿಕೆಯ ವೇಗವನ್ನು ಅಗಾಧವಾಗಿ ಹೆಚ್ಚಿಸಿವೆ. ಎದೆಯ ಮೂಳೆಯನ್ನು ಕತ್ತರಿಸಿ ಮಾಡುತ್ತಿದ್ದ ಸಾಂಪ್ರದಾಯಿಕ ಬೈಪಾಸ್ ಬದಲಿಗೆ ಈಗ ಪಕ್ಕೆಲುಬುಗಳ ನಡುವೆ ಸಣ್ಣ ಛೇದನಗಳನ್ನು ಮಾಡಿ, ಕ್ಯಾಮೆರಾ ಹೊಂದಿರುವ ದುರ್ಬೀನುಗಳ ಮೂಲಕ ರಕ್ತನಾಳದ ಕಸಿ ಚಿಕಿತ್ಸೆ ಸಾಧ್ಯ. ಇದರಿಂದ ಶಸ್ತ್ರಚಿಕಿತ್ಸೆಯ ವೇಳೆಯ ರಕ್ತಸ್ರಾವ ಕಡಿಮೆಯಾಗುತ್ತದೆ; ಸೋಂಕಿನ ಸಾಧ್ಯತೆ ತಗ್ಗುತ್ತದೆ; ಗಾಯದ ಗುರುತು ಹೆಚ್ಚು ಇಲ್ಲದಂತಾಗಿ ರೋಗಿಯ ಆತ್ಮವಿಶ್ವಾಸ ವೃದ್ಧಿಸುತ್ತದೆ.

ಸಾಂಪ್ರದಾಯಿಕ ಬೈಪಾಸ್ ಶಸ್ತ್ರಚಿಕಿತ್ಸೆಯಲ್ಲಿ ಹೃದಯದ ಕೆಲಸವನ್ನು ಬೇರೊಂದು ಯಂತ್ರಕ್ಕೆ ವರ್ಗಾಯಿಸಲಾಗುತ್ತದೆ. ಇದರಲ್ಲಿ ಅಡ್ಡಪರಿಣಾಮಗಳು ಅಧಿಕ. ಆದರೆ ಆಧುನಿಕಯಂತ್ರಗಳ ನೆರವಿನಿಂದ, ಬಡಿಯುತ್ತಿರುವ ಹೃದಯದ ಚಲನೆಯನ್ನು ಸ್ಥಿರಗೊಳಿಸಿ, ಹೃದಯ ತನ್ನ ಪಾಡಿಗೆ ಕೆಲಸ ಮಾಡುತ್ತಿರುವಂತೆಯೇ ಬೈಪಾಸ್ ಚಿಕಿತ್ಸೆ ಮಾಡಬಹುದಾಗಿದೆ. ಸುರಕ್ಷತೆಯ ದೃಷ್ಟಿಯಿಂದ ಇದು ಉತ್ತಮ ಮಾದರಿ. ಪ್ರಸ್ತುತ ರೊಬೋಟಿಕ್ ವಿಧಾನದಲ್ಲಿ ಯಾಂತ್ರಿಕ ತೋಳುಗಳನ್ನು ಬಳಸಿ ಅತ್ಯಂತ ಸೂಕ್ಷ್ಮ ಹಾಗೂ ನಿಖರ ವಿಧಾನದಲ್ಲಿ ಶಸ್ತ್ರಚಿಕಿತ್ಸೆಯನ್ನು ನೆರವೇರಿಸಬಹುದು. ಇದರೊಂದಿಗೆ ಹೃದಯದ ಮೂರು ಆಯಾಮದ ಚಿತ್ರಗಳ ಜೋಡಣೆ, ಹೈಬ್ರಿಡ್ ವಿಧಾನಗಳು ರೋಗಿಗಳ ಪಾಲಿಗೆ ವರದಾನವಾಗಿವೆ. ಆಯಾ ರೋಗಿಗೆ ಅತ್ಯಂತ ಸೂಕ್ತ ವಿಧಾನ ಯಾವುದು ಎಂಬುದನ್ನು ತಜ್ಞರು ನಿರ್ಧರಿಸುತ್ತಾರೆ.

ಚಿಕಿತ್ಸೆ ಎಷ್ಟೇ ಪರಿಣಾಮಕಾರಿಯಾದರೂ, ಕಾಯಿಲೆ ಬಾರದಂತೆ ಕಾಪಾಡಿಕೊಳ್ಳುವುದೇ ಅತ್ಯುತ್ತಮ. ಆರೋಗ್ಯಕರ ಜೀವನಶೈಲಿ, ನಿಯಮಿತ ವ್ಯಾಯಾಮ, ಆಹಾರದಲ್ಲಿ ಶಿಸ್ತು, ಸಾಕಷ್ಟು ನಿದ್ರೆ, ಕಾಯಿಲೆಗಳ ನಿಯಂತ್ರಣ, ಮನಸ್ಸಿನ ಶಾಂತಿ, ಸಮಾಧಾನ, ನೆಮ್ಮದಿ ನೀಡುವ ಹವ್ಯಾಸಗಳು, ಬಂಧು-ಮಿತ್ರರ ಒಡನಾಟ - ಇವು ಆರೋಗ್ಯಕರ ಬದುಕಿನ ಅತ್ಯಂತ ಪರಿಣಾಮಕಾರಿ ವಿಧಾನಗಳು. ❖

ಆರೋಗ್ಯದ ಹಾದಿಯಲ್ಲಿ ಹತ್ತು ಸಾವಿರ ಹೆಜ್ಜೆಗಳು!

ಬೆಳಿಗ್ಗೆ ಅಥವಾ ಸಂಜೆ ವ್ಯಾಯಾಮಕ್ಕೆಂದೇ ಪ್ರತ್ಯೇಕ ಸಮಯ ಮೀಸಲಿಡದೆಯೂ ನೀವು ಕ್ಯಾಲೊರಿಗಳನ್ನು ಕರಗಿಸಬಹುದು, ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು. ವ್ಯಾಯಾಮವಿಲ್ಲದೆಯೂ ನಡಿಗೆಯಲ್ಲಿ ತೊಡಗಿಸಿಕೊಂಡು ದಿನದಲ್ಲಿ ಹತ್ತು ಸಾವಿರ ಹೆಜ್ಜೆಗಳನ್ನಿಟ್ಟು ಶರೀರ–ಮನಸ್ಸುಗಳ ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಬಹುದು.

• ಡಾ. ಶಿವಶಂಕರ್ ಎಂ.



'ಡಾಕ್ಟ್ರೆ, ದಿನಾ ಹತ್ತು ಸಾವಿರ ಹೆಜ್ಜೆಗಳನ್ನಿಡುವಷ್ಟಾದರೂ ನಡೆಯಬೇಕು ಎಂದಿದ್ದಿರಿ. ಆದರೆ ಬೆಳಿಗ್ಗೆ ಎದ್ದು ಮನೆಕೆಲಸಗಳನ್ನು ಮುಗಿಸಿ, ಆಫೀಸ್‌ಗೆ ಹೋಗಿ ಬರೋದಿಕ್ಕೇ ದಿನದ ಇಪ್ಪತ್ನಾಲ್ಕು ಗಂಟೆಗಳು ಸಾಕಾಗ್ತಿಲ್ಲ, ಇನ್ನು ಅದೆಲ್ಲ ಹೇಗೆ ಸಾಧ್ಯ ಹೇಳಿ?' ಇದು ವೈದ್ಯರ ಬಳಿ ಬರುವ ಹಲವು ರೋಗಿಗಳ ದೂರು.

ನಿಜ, ಜೀವನಶೈಲಿಯ ಕಾಯಿಲೆಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ತಮ್ಮಲ್ಲಿ ಬರುವ ಪ್ರತಿಯೊಬ್ಬ ರೋಗಿಗೂ ವೈದ್ಯರು ನೀಡುವ ಸಲಹೆಗಳಲ್ಲಿ ಇದೂ ಒಂದು.

ಅಧಿಕ ರಕ್ತದೊತ್ತಡ, ಮಧುಮೇಹ, ಪಿಸಿಒಡಿ ಕಾಯಿಲೆಗಳ ನಿಯಂತ್ರಣದ ವಿಷಯಕ್ಕೆ ಬಂದಾಗ, 'ಚಲನೆಯೇ ಆರೋಗ್ಯ, ಜಡತೆಯೇ ಅನಾರೋಗ್ಯ' ಎಂಬ ಮಾತು ಹೆಚ್ಚು ಮಹತ್ವದ್ದು ಎನ್ನಿಸುತ್ತದೆ. ಹೆಚ್ಚು ಸಮಯ ಕುಳಿತೇ ಇರುವುದು ಅನಾರೋಗ್ಯಕ್ಕೆ ಆಹ್ವಾನ ಕೊಟ್ಟಂತೆಯೇ ಸರಿ – ಎಂದು ಅಧ್ಯಯನಗಳು ತಿಳಿಸುತ್ತಿವೆ. ಹಾಗಾಗಿಯೇ ಈ ದಿನಗಳಲ್ಲಿ ದಿನನಿತ್ಯದ ವ್ಯಾಯಾಮ ಕಡ್ಡಾಯವಾಗಿ ಎಲ್ಲರ ಬದುಕಿನ ಭಾಗವಾಗಬೇಕಾಗಿದೆ. ಒಂದು ಪಕ್ಷ ವ್ಯಾಯಾಮದ ರೂಢಿ ಕಷ್ಟವೆನಿಸಿದರೆ ಆರೋಗ್ಯಕ್ಕಾಗಿ ನಿತ್ಯವೂ ಕನಿಷ್ಠ ಹತ್ತು ಸಾವಿರ ಹೆಜ್ಜೆಗಳನ್ನಿಡುವಷ್ಟು ದೂರವಾದರೂ ನಡೆಯಿರಿ ಎನ್ನುವುದು ಎಲ್ಲ ತಜ್ಞವೈದ್ಯರ ಅಭಿಮತ. ಆದರೆ ಪ್ರಾಯೋಗಿಕವಾಗಿ ಹತ್ತು ಸಾವಿರ ಹೆಜ್ಜೆಗಳು ಎಂದರೆ ಸುಮಾರು ಏಳರಿಂದ ಎಂಟು ಕಿಲೋಮೀಟರ್ ನಡಿಗೆ ಎಂದರ್ಥ. ಅದಕ್ಕೆ ಕನಿಷ್ಠ ಒಂದೂವರೆ ತಾಸುಗಳಾದರೂ ಬೇಕಾಗುತ್ತದೆ. ಅನೇಕರಿಗೆ ಒಂದು ತಾಸು ಮನೆಯಿಂದ ಹೊರಗೆ ಹೋಗಿ ನಡೆಯುವುದು ಕಷ್ಟಸಾಧ್ಯ ಎನ್ನಿಸಬಹುದು. ಮನೆಯಿಂದ ಹೊರಗೆ ಹೋಗಿ ನಡೆದರಷ್ಟೇ ಅಂತಹ ನಡಿಗೆ ಸಾಧ್ಯ ಎಂದೇ ಹಲವರು ಯೋಚಿಸುವುದಿದೆ. ಕಚೇರಿಯಲ್ಲಿಯೇ ಆರರಿಂದ ಎಂಟು ತಾಸುಗಳು ಕಳೆಯುವವರಂತೂ ಇವೆಲ್ಲ ನಮ್ಮಿಂದ ಸಾಧ್ಯವಿಲ್ಲದ ಕೆಲಸ ಎಂದು ಕುಗ್ಗಿ ಹೋಗುವುದಿದೆ. ಆದರೆ ಆ ರೀತಿ ಬೇಸರಿಸುವ ಅಗತ್ಯವಿಲ್ಲ.

ಮನಸ್ಸಿದ್ದರೆ ಮಾರ್ಗ – ಎನ್ನುವಂತೆ, ಮನಸ್ಸು ಮಾಡಿದರೆ ವ್ಯಾಯಾಮವಿಲ್ಲದೆಯೂ ನಡಿಗೆಯಲ್ಲಿ ತೊಡಗಿಸಿಕೊಂಡು ದಿನದಲ್ಲಿ ಹತ್ತು ಸಾವಿರ ಹೆಜ್ಜೆಗಳನ್ನು ಹಾಕಿ ಪೂರೈಸಬಹುದು.

ಮನೆಯಲ್ಲಿಯೇ ನಡೆಯುವುದೇ?

ವ್ಯಾಯಾಮವಿಲ್ಲದೆಯೇ ದಿನವೊಂದರಲ್ಲಿ ಹತ್ತು ಸಾವಿರ ಹೆಜ್ಜೆಗಳನ್ನಿಡಬಹುದು ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಆದರೆ ಇದು ಖಂಡಿತ ಸಾಧ್ಯ. ಇದನ್ನು 'ಎನ್.ಇ.ಎ.ಟಿ.', ಅಂದರೆ 'ನಾನ್ ಎಕ್ಸರ್ಸೈಸ್ ಆಕ್ಟಿವಿಟಿ ಥರ್ಮೋಜೆನೆಸಿಸ್' ಎನ್ನುತ್ತಾರೆ. ಅಂದರೆ ವ್ಯಾಯಾಮವನ್ನು ಹೊರತುಪಡಿಸಿಯೂ ನಾವು ಇದನ್ನು ಸಾಧಿಸಬಹುದು ಎಂದರ್ಥ.

ನೀವು ಮನೆಯಲ್ಲಿಯೇ ಇರುವವರಾದರೆ, ಯಾವುದೇ ಕಾರಣಕ್ಕೂ 40 ನಿಮಿಷಗಳವರೆಗೆ ಒಂದೇ ಜಾಗದಲ್ಲಿ ಕುಳಿತಿರಬೇಡಿ. ಪ್ರತಿ ನಲವತ್ತು ನಿಮಿಷಗಳಿಗೊಮ್ಮೆ ಎದ್ದು ಅಡುಗೆಮನೆಗೆ ಹೋಗಿ ಒಂದು ಸಣ್ಣ ಲೋಟದಷ್ಟು ನೀರನ್ನು ಕುಡಿಯಿರಿ, ಇಲ್ಲವೇ ದೇವರ ಮನೆಗೆ ಹೋಗಿ ಪ್ರಾರ್ಥನೆಯನ್ನು ಸಲ್ಲಿಸಿ ಅಥವಾ ಹೊರಗಿನ ಹೂದೋಟದಲ್ಲಿ ಒಂದು ಸುತ್ತು ಹಾಕಿ ಅಥವಾ ಶೌಚಾಲಯಕ್ಕೆ ತೆರಳಿ ಮೂತ್ರವಿಸರ್ಜನೆಯನ್ನು ಮಾಡಿ ಬನ್ನಿ. ನಿಮ್ಮ ಈ ಚಟುವಟಿಕೆಯಲ್ಲಿ ಸುಮಾರು ನೂರರಿಂದ ನೂರೈವತ್ತು ಹೆಜ್ಜೆಗಳನ್ನಾದರೂ ಕ್ರಮಿಸಿರುತ್ತೀರಿ. ಮನೆಗೆ ಅಗತ್ಯವಾದ ಹಾಲು, ತರಕಾರಿ, ದಿನಸಿ ಸಾಮಗ್ರಿಗಳನ್ನು ಮನೆ ಹತ್ತಿರದ ಅಂಗಡಿಗೆ ತೆರಳಿ ನೀವೇ ತರುವ ರೂಢಿ ಮಾಡಿಕೊಳ್ಳಿ. ಯಾವುದೇ ಕಾರಣಕ್ಕೂ ಈ ಸಣ್ಣ ಕೆಲಸಗಳಿಗೆ ವಾಹನ ಬಳಸಬೇಡಿ. ಬೆಳಗಿನ ಉಪಾಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟವಾದ ಬಳಿಕ ಕಡ್ಡಾಯವಾಗಿ ಐದರಿಂದ ಹತ್ತು ನಿಮಿಷಗಳ ನಡಿಗೆಯನ್ನು ಅಭ್ಯಾಸ ಮಾಡಿಕೊಳ್ಳಿ. ಇದು ನಿಮಗೆ ಆರೋಗ್ಯದ ದೃಷ್ಟಿಯಿಂದಲೂ ಉತ್ತಮ. ಊಟದ ನಂತರದ ನಡಿಗೆ ನಿಮ್ಮನ್ನು ಬೊಜ್ಜು ಮತ್ತು ಅಧಿಕ ದೇಹತೂಕದ ಸಮಸ್ಯೆಯಿಂದ ದೂರವಿಡಬಲ್ಲದು. ನಿಮ್ಮ ಮನೆಯಲ್ಲಿ ಮೊದಲ ಮಹಡಿಯಿದ್ದು, ಮೆಟ್ಟಿಲುಗಳಿದ್ದರೆ ದಿನದಲ್ಲಿ ನಾಲ್ಕೈದು ಬಾರಿ ಹತ್ತಿ ಇಳಿಯುವ ರೂಢಿ ಕೂಡ ನಿಮ್ಮ ಹತ್ತು ಸಾವಿರ ಹೆಜ್ಜೆಗಳ ಲೆಕ್ಕಕ್ಕೆ ಸೇರ್ಪಡೆಯಾಗಬಲ್ಲದು.

ನಗರ ಸಾರಿಗೆ ಬಸ್ಸುಗಳನ್ನು ಬಳಸುವವರು ವಾರದಲ್ಲಿ ಕೆಲವು ದಿನಗಳಾದರೂ, ನಿಮ್ಮ ಮನೆಯ ಹಿಂದಿನ ನಿಲ್ದಾಣದಲ್ಲಿ ಇಳಿದು ಮನೆಗೆ ನಡೆದು ಹೋಗಲು ಪ್ರಯತ್ನಿಸಿ. ಕಚೇರಿಗಳಿಗೆ ಸ್ವಂತ ವಾಹನದಲ್ಲಿ ತೆರಳುವವರು ಸ್ವಲ್ಪ ಅಂತರದಲ್ಲಿ ವಾಹನವನ್ನು ನಿಲ್ಲಿಸಿ, ನಡೆದು ಕಚೇರಿಯನ್ನು ತಲುಪುವ ಅಭ್ಯಾಸ ಮಾಡಿಕೊಳ್ಳಿ. ಕಚೇರಿಯ ಆರು ಗಂಟೆಗಳ ಕೆಲಸದ ಮಧ್ಯೆ ನಾಲ್ಕು ಬಾರಿ ನಿಮ್ಮ ಕೊಠಡಿಯಿಂದ ಎದ್ದು ಅಲ್ಲಿ ಸಮೀಪದಲ್ಲಿರುವ ಮೆಟ್ಟಿಲುಗಳನ್ನು ಹತ್ತಿ ಇಳಿಯುವುದನ್ನು ರೂಢಿಸಿಕೊಳ್ಳಿ. ಮೊಬೈಲ್‌ನಲ್ಲಿ ಮಾತನಾಡುವಾಗ ಒಂದೆಡೆ ಕುಳಿತುಕೊಳ್ಳದೆ, ಎದ್ದು ನಡೆದಾಡುತ್ತಾ ಮಾತನ್ನು ಮುಂದುವರಿಸಿ. ಆತ್ಮೀಯರೊಡನೆ ದೀರ್ಘಕಾಲದವರೆಗೆ ಮೊಬೈಲ್‌ನಲ್ಲಿ ಮಾತನಾಡುವಾಗ, ಕಡ್ಡಾಯವಾಗಿ ನಡೆದಾಡುತ್ತಾ ಮಾತನಾಡುವ ಅಭ್ಯಾಸ ಮಾಡಿಕೊಳ್ಳಿ. ಮೊದಮೊದಲು ಕಷ್ಟವೆನಿಸಿದರೂ ಒಂದೇ ಸಮಯದಲ್ಲಿ ಮನಸ್ಸು ಮತ್ತು ದೇಹಕ್ಕೆ ಆಹ್ಲಾದ ಕೊಡುವ ಈ ಏಕೈಕ ಕೆಲಸ ನಿಮಗೆ ಅತಿ ಶೀಘ್ರದಲ್ಲಿ ಕರಗತವಾಗುತ್ತದೆ.

ದೂರದರ್ಶನದಲ್ಲಿ ಧಾರಾವಾಹಿ ಅಥವಾ ಚಲನಚಿತ್ರವನ್ನು ವೀಕ್ಷಿಸುವ ಸಂದರ್ಭಗಳಲ್ಲಿ ಗಟ್ಟಿಯಾಗಿ ಒಂದೆಡೆ ಕುಳಿತು ಬಿಡಬೇಡಿ. ಮಧ್ಯದಲ್ಲಿ ಜಾಹೀರಾತು ಪ್ರಸಾರವಾಗುವಾಗ ಎದ್ದು ಕೆಲವು ನಿಮಿಷಗಳ ಕಾಲವಾದರೂ ಅತ್ತಿಂದಿತ್ತ ನಡೆದಾಡಿ. ಮೊಬೈಲ್‌ನಲ್ಲಿ ನಿಮ್ಮ ನೆಚ್ಚಿನ ಕಾರ್ಯಕ್ರಮ ವೀಕ್ಷಿಸುವಾಗ, ಮೂವತ್ತರಿಂದ ನಲವತ್ತು ನಿಮಿಷಗಳಾಗುತ್ತಲೂ ಎದ್ದು ನಡೆದಾಡಿ, ಆ ಸಮಯದಲ್ಲಿ ನಿಮಗಿಷ್ಟವಾದ ಹಾಡುಗಳನ್ನು ಕೇಳುವ ಪ್ರಯತ್ನವನ್ನೂ ಮಾಡಬಹುದು. ಇಂತಹ ಸಣ್ಣಪುಟ್ಟ ದೈನಂದಿನ ಬದಲಾವಣೆಗಳು ಜಡತ್ವವನ್ನು ದೂರಮಾಡಿ, ನಿಮ್ಮನ್ನು ಸದಾ ಚಟುವಟಿಕೆಯಿಂದ ಇರಲು ನೆರವಾಗುತ್ತವೆ.

ಬೆಳಿಗ್ಗೆ ಅಥವಾ ಸಂಜೆ ವ್ಯಾಯಾಮಕ್ಕೆಂದೇ ಪ್ರತ್ಯೇಕ ಸಮಯ ಮೀಸಲಿಡದೆಯೂ ನೀವು ಕ್ಯಾಲೊರಿಗಳನ್ನು ಕರಗಿಸಬಹುದು, ಫಿಟ್‌ನೆಸ್ ಅನ್ನು ಕಾಪಾಡಿಕೊಳ್ಳಬಹುದು. ಇದರೊಂದಿಗೆ ಆಹಾರಕ್ರಮದಲ್ಲಿಯೂ ಕೊಂಚ ಕಾಳಜಿಯನ್ನು ವಹಿಸಿದರೆ ನೀವು ಹಲವು ಆರೋಗ್ಯ ಸಮಸ್ಯೆಗಳನ್ನು ದೂರವಿಡುವುದು ಖಂಡಿತ ಸಾಧ್ಯ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ–ಪಿಯುಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಸಮಾಜ ವಿಜ್ಞಾನ : ಇತಿಹಾಸ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಉತ್ತರಗಳಿಂದ ಭರ್ತಿಮಾಡಿ.

12.................ಕಾಯ್ದೆ ಪ್ರಕಾರ 'ನಿರ್ದೇಶನ' ಮಂಡಳಿಯ (Court of Directors) ಜಾಗದಲ್ಲಿ ನಿಯಂತ್ರಣ ಮಂಡಳಿ (Board of Control) ಹುಟ್ಟಿಕೊಂಡಿತು.
ಉತ್ತರ:– 1784ರ ಪಿಟ್ಸ್ ಇಂಡಿಯಾ

13. ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಕಾರ್ನ್‌ವಾಲೀಸನು ಕಲ್ಕತ್ತಾದಲ್ಲಿ ....ಕಾಲೇಜನ್ನು ಸ್ಥಾಪಿಸಿದನು.
ಉತ್ತರ:– ಫೋರ್ಟ್ ವಿಲಿಯಂ

14...................ಕಾಯ್ದೆಯ ಪ್ರಕಾರ ಚರ್ಚ್‌ಗಳಿಗೆ ಭಾರತಕ್ಕೆ ಪ್ರವೇಶಿಸುವ ಅಧಿಕೃತ ಅವಕಾಶವನ್ನು ನೀಡಲಾಯಿತು.
ಉತ್ತರ:– 1813ರ ಚಾರ್ಟರ್

15 ....ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಂನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು
ಉತ್ತರ:– 1764ರ ಬಕ್ಸಾರ್

16. ಇಂಗ್ಲೆಂಡಿನ ....ಸದಸ್ಯನಾದ ಎಡ್ಮಂಡ್ ಬರ್ಕನು ವಾರ್ಷಿಕವಾಗಿ ಈಸ್ಟ್ ಇಂಡಿಯಾ ಕಂಪನಿಯಿಂದ ಬ್ರಿಟಿಷ್ ಸರ್ಕಾರ ಪಡೆಯುತ್ತಿದ್ದ ತೆರಿಗೆ ಹಣವನ್ನು 'ಅಪರಾಧ ತೆರಿಗೆ' ಎಂದು ತೀಕ್ಷ್ಣವಾಗಿಯೇ ಟೀಕಿಸಿದನು.
ಉತ್ತರ:– ಶಾಸನ ಸಭೆಯ

17................ ವರ್ಷದ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು
ಉತ್ತರ:– 1853ರ

18. ಭಾರತ ಸರ್ಕಾರದ ಕಾಯ್ದೆ – 1858ರ ಪ್ರಕಾರ ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ "ವೈಸ್‌ರಾಯ್" ಎಂಬ ಪದನಾಮವನ್ನು ನೀಡಿಲಾಯಿತು.. ವೈಸರಾಯ್ ಆಗಿ ....ನೇಮಕಗೊಂಡರು.
ಉತ್ತರ :– ಲಾರ್ಡ್ ಕ್ಯಾನಿಂಗ್

19. ಮೊಟ್ಟಮೊದಲ ಭಾರಿಗೆ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದನು ....
ಉತ್ತರ:– ಲಾರ್ಡ್ ಕಾರ್ನ್ ವಾಲೀಸ್

20) 1909 ಭಾರತೀಯ ಪರಿಷತ್ ಕಾಯ್ದೆ ಪ್ರಕಾರ ಕೇಂದ್ರ ಶಾಸನ ಸಭೆಯ ಸದಸ್ಯರ ಸಂಖ್ಯೆಯನ್ನು 16ರಿಂದ ....ಕ್ಕೆ ಹೆಚ್ಚಿಸಲಾಯಿತು.
ಉತ್ತರ:– 60

21. 1770ರ ದಶಕದಲ್ಲಿ ....ಭೀತಿಯಿಂದ ಕಾನೂನು ಸುವ್ಯವಸ್ಥೆಯ ಸಮಸ್ಯೆ ವಿಷಮಗೊಳ್ಳತೊಡಗಿತು. ಹೀಗಾಗಿ ಅದನ್ನು ಎದುರಿಸಲು ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು.
ಉತ್ತರ:– ಭೀಕರ ಕ್ಷಾಮ

22. 1919 ಭಾರತೀಯ ಪರಿಷತ್ ಕಾಯ್ದೆ ಪ್ರಕಾರ ಕೇಂದ್ರದಲ್ಲಿ .... ರಚನೆಗೆ ಅವಕಾಶ ನೀಡಲಾಯಿತು.
ಉತ್ತರ:– ದ್ವಿಸದನ ಶಾಸಕಾಂಗ (Bi-Cameral)

23. ಕ್ರಿಮಿನಲ್ ನ್ಯಾಯಾಲಯದಲ್ಲಿ ಎಲ್ಲರಿಗೂ .... ಕಾನೂನು ಅನುಸಾರ ವಿಚಾರಣೆ ನಡೆಸಲಾಗುತಿತ್ತು
ಉತ್ತರ:– ಇಸ್ಲಾಂ ಕಾನೂನುಗಳ

24. .... ಕಾಯ್ದೆಯ ಪ್ರಕಾರ ಭಾರತದಲ್ಲಿ "ಫೆಡರಲ್ ಕೋರ್ಟ್" ಸ್ಥಾಪನೆಗೆ ಅವಕಾಶ ನೀಡಲಾಯಿತು.
ಉತ್ತರ:– 1935ರ ಭಾರತ ಸರ್ಕಾರ

25. 1857ರ ಘಟನೆಯ ನಂತರ ಪೀಲ್ ಸಮಿತಿ ಶಿಫಾರಸ್ಸುಗಳ ಆಧಾರದ ಮೇಲೆ............ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲಾಯಿತು
ಉತ್ತರ:– ಸೈನಿಕ

26. 1835ರಲ್ಲಿ ಇಂಗ್ಲಿಷ್ ಶಿಕ್ಷಣಕ್ಕೆ ಸಂಬಂಧಿಸಿದಂತೆ .... ಕೊಟ್ಟ ವರದಿಯ ಗುರಿಯು "ರಕ್ತ ಮಾಂಸಗಳಲ್ಲಿ ಭಾರತೀಯರಾಗಿಯೂ ಅಭಿರುಚಿ, ಅಭಿಪ್ರಾಯ, ನೀತಿ ಮತ್ತು ಬುದ್ಧಿವಂತಿಕೆಯಲ್ಲಿ ಇಂಗ್ಲಿಷರಾಗುವ" ಹೊಸ ಭಾರತೀಯ ವಿದ್ಯಾವಂತ ವರ್ಗವನ್ನು ಸೃಷ್ಟಿ ಮಾಡುವುದು.
ಉತ್ತರ:– ಮೆಕಾಲೆಯು

27. ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ .... ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು.
ಉತ್ತರ:– ಬಂಗಾಳ ಮತ್ತು ಬಿಹಾರ

28. ಭಾರತದಲ್ಲಿ ಮಹಲ್ವಾರಿ ಪದ್ಧತಿ ಪ್ರಯೋಗಿಸಿದವರು ....
ಉತ್ತರ:– ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

29. ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ....ಪ್ರಾಂತ್ಯದಲ್ಲಿ 1792ರಲ್ಲಿ ಅಲೆಕ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು.
ಉತ್ತರ:– ಬಾರಮಹಲ್

30. ರೈತುವಾರಿ ಪದ್ಧತಿಯನ್ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ.............ನು ಜಾರಿಗೊಳಿಸಿದನು
ಉತ್ತರ:– ಥಾಮಸ್ ಮನ್ರೊ

31. 1773ರ ರೆಗ್ಯುಲೇಟಿಂಗ್ ಕಾಯ್ದೆಯ ಪ್ರಕಾರ ಕೇಂದ್ರ ನ್ಯಾಯಾಲಯದಲ್ಲಿ ಒಬ್ಬರು ಮುಖ್ಯ ನ್ಯಾಯಾಧೀಶರು ಮತ್ತು....... ಜನ ಸಾಮಾನ್ಯ ನ್ಯಾಯಾಧೀಶರು ಕಾರ್ಯ ನಿರ್ವಹಿಸುತ್ತಿದ್ದರು
ಉತ್ತರ:– ಮೂರು

32. .... ಪದ್ಧತಿಯಲ್ಲಿ ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯಮಾಡಿತು.
ಉತ್ತರ:– ರೈತವಾರಿ

33. ಬ್ರಿಟಿಷ್ ವ್ಯಕ್ತಿಯು 1792ರಲ್ಲಿ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜನ್ನು ಪ್ರಾರಂಭಿಸಿದನು.........................
ಉತ್ತರ:– ಜೊನಾಥನ್ ಡಂಕನ್

34. ಬ್ರಿಟಿಷರು ಸಾರ್ವಜನಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನೇಮಕವಾದ ಸಮಿತಿಗೆ..................ನನ್ನು ಅಧ್ಯಕ್ಷನನ್ನಾಗಿ ನೇಮಕ ಮಾಡಲಾಗಿತ್ತು
ಉತ್ತರ:– ಮೆಕಾಲೆ

35. ....ಆಯೋಗದ ಶಿಫಾರಸ್ಸುಗಳ ಆಧಾರದ ಮೇಲೆ ಅಂದಿನ ಗವರ್ನರ್ ಜನರಲ್ ಆದ ಲಾರ್ಡ್ ಡಾಲ್‌ಹೌಸಿಯು ಕಲ್ಕತ್ತಾ, ಬಾಂಬೆ ಮತ್ತು ಮದರಾಸುಗಳಲ್ಲಿ ನೂತನ ವಿಶ್ವವಿದ್ಯಾನಿಲಯಗಳನ್ನು 1857ರಲ್ಲಿ ಸ್ಥಾಪಿಸಿದನು
ಉತ್ತರ:– ಸರ್ ಚಾರ್ಲ್ಸ್ ವುಡ್ಸ್ ಆಯೋಗ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

Inverse trigonometric functions

19. Show that $\tan^{-1}x+\cot^{-1}x=\frac{\pi}{2}$; for $-\infty < x < \infty$

Soln :– Proof : Let, $\tan^{-1}x=\theta$;

when, $-\frac{\pi}{2}<\theta<\frac{\pi}{2}$ & $-\infty<x<\infty$

$\therefore \tan\theta = x \Rightarrow \cot\left(\frac{\pi}{2}-\theta\right)=x$

$\left(\because \cot\left(\frac{\pi}{2}-\theta\right)=\tan\theta\right)$

$\Rightarrow \frac{\pi}{2}-\theta=\cot^{-1}x \quad \left(\because 0\le\left(\frac{\pi}{2}-\theta\right)\le\pi\right)$

$\Rightarrow \frac{\pi}{2}-\tan^{-1}x=\cot^{-1}x \quad (\because \tan^{-1}x=\theta)$

$\Rightarrow \frac{\pi}{2}=\tan^{-1}x+\cot^{-1}x$; Hence proved.

20. Show that $\sin^{-1}x+\cos^{-1}x=\frac{\pi}{2}$; for $-1\le x\le 1$

Soln :– Let, $\theta=\sin^{-1}x$;

when $-\frac{\pi}{2}\le\theta\le\frac{\pi}{2}$ & $-1\le x\le 1$

$\therefore \sin\theta = x$;

$\Rightarrow \cos\left(\frac{\pi}{2}-\theta\right)=x \quad \left(\because \sin\theta=\cos\left(\frac{\pi}{2}-\theta\right)\right)$

$\Rightarrow \frac{\pi}{2}-\theta=\cos^{-1}x \quad \left(\because 0\le\left(\frac{\pi}{2}-\theta\right)\le\pi\right)$

$\Rightarrow \frac{\pi}{2}-\sin^{-1}x=\cos^{-1}x \quad (\because \theta=\sin^{-1}x)$


$\Rightarrow \frac{\pi}{2}=\sin^{-1}x+\cos^{-1}x$

Hence, $\cos^{-1}x+\sin^{-1}x=\frac{\pi}{2}$

21. Evaluate $\tan\left[\sin^{-1}\left(-\frac{1}{\sqrt{5}}\right)\right]$

Soln :– Let $\sin^{-1}\left(-\frac{1}{\sqrt{5}}\right)=\theta$

$\therefore \sin\theta=-\frac{1}{\sqrt{5}}$ & $-\frac{\pi}{2}<\theta<0$



But $\sin\theta=\frac{MP}{OP}=-\frac{1}{\sqrt{5}}$

hence, $MP=-1$ and $OP=\sqrt{5}$

$\therefore OM=\sqrt{OP^2-MP^2}=\sqrt{5-1}=2$

Hence, $\tan\theta=\frac{MP}{OM}=-\frac{1}{2}$

$\therefore \tan\left[\sin^{-1}\left(-\frac{1}{\sqrt{5}}\right)\right]=-\frac{1}{2}$


22. Evaluate $\cos\left[\tan^{-1}\frac{15}{8}-\sin^{-1}\frac{12}{13}\right]$


Soln :– Let, $\tan^{-1}\frac{15}{8}=\alpha$,

$\sin^{-1}\frac{12}{13}=\beta$

$\therefore \tan\alpha=\frac{15}{8}$, $\sin\beta=\frac{12}{13}$

Both α and β lie between 0 and $\frac{\pi}{2}$





From the above fig; we find that

$\therefore \cos\alpha=\frac{8}{17}$, $\sin\alpha=\frac{15}{17}$ & $\cos\beta=\frac{15}{13}$

Now consider,

$\cos\left[\tan^{-1}\frac{15}{8}-\sin^{-1}\frac{12}{13}\right]=\cos(\alpha-\beta)$

$\Rightarrow \cos\alpha\cos\beta+\sin\alpha\sin\beta$

$\Rightarrow \frac{8}{17}\cdot\frac{15}{13}+\frac{15}{17}\cdot\frac{12}{13}=\frac{220}{221}$


23. Prove that


$$\sin^{-1}\frac{3}{5}+\cos^{-1}\frac{12}{13}=\cos^{-1}\frac{33}{65}$$

Soln :– Let $\sin^{-1}\frac{3}{5}=\alpha$,

so that $\sin\alpha=\frac{3}{5}$ and $\cos^{-1}\frac{12}{13}=\beta$,

so that $\cos\beta=\frac{12}{13}$





ವರದಿ ಸಲ್ಲಿಸಿ: ಎಸ್ಐಟಿಗೆ ಸೂಚನೆ

ಧರ್ಮಸ್ಥಳ ಪ್ರಕರಣ: 31ರೊಳಗೆ ಸಲ್ಲಿಸುವ ಸಾಧ್ಯತೆ– ಗೃಹ ಸಚಿವ ಪರಮೇಶ್ವರ

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಧರ್ಮಸ್ಥಳದ ಪ್ರಕರಣದ ತನಿಖೆಗೆ ಸಂಬಂಧಿಸಿದಂತೆ ಅಂತಿಮ ವರದಿಯನ್ನು ಸಲ್ಲಿಸುವಂತೆ ವಿಶೇಷ ತನಿಖಾ ತಂಡಕ್ಕೆ (ಎಸ್ಐಟಿ) ಸೂಚಿಸಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಅಕ್ಟೋಬರ್ ತಿಂಗಳಲ್ಲಿ ವರದಿ ಕೊಡುವುದಾಗಿ ಎಸ್ಐಟಿಯವರು ಹೇಳಿದ್ದರು. 31ರೊಳಗೆ ಕೊಡಬಹುದು ಅಥವಾ ಒಂದೆರಡು ದಿನ ವಿಳಂಬ ಆಗಬಹುದು' ಎಂದರು.

'ಅಂತಿಮ ವರದಿ ಕೊಡುವಂತೆ ಹೇಳಿದ್ದೇವೆ. ಪತ್ತೆಯಾಗಿರುವ ಮೂಳೆಗಳ ಎಫ್ಎಸ್ಎಲ್ ವರದಿ, ರಾಸಾಯನಿಕ ವಿಶ್ಲೇಷಣಾ ವರದಿಗಳನ್ನು ವಿಶ್ಲೇಷಣೆ ಮಾಡಿ ವರದಿ ಕೊಡುತ್ತೇವೆ ಎಂದು ಎಸ್ಐಟಿ ಅಧಿಕಾರಿಗಳು ತಿಳಿಸಿದ್ದಾರೆ' ಎಂದರು.

ತನಿಖೆಯಲ್ಲಿ ಹಸ್ತಕ್ಷೇಪ ಇಲ್ಲ

ಮಂಗಳೂರು: 'ಧರ್ಮಸ್ಥಳ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್ಐಟಿ ತಿಂಗಳಾಂತ್ಯಕ್ಕೆ ವರದಿ ಕೊಡಬಹುದು ಎಂದು ಗೃಹ ಸಚಿವರು ಹೇಳಿದ್ದಾರೆ. ತನಿಖೆ ವಿಷಯದಲ್ಲಿ ನಾನು ಹಸ್ತಕ್ಷೇಪ ಮಾಡಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ಹೇಳಿದರು.

'ಎಸ್ಐಟಿ ತಿಂಗಳಾಂತ್ಯಕ್ಕೆ ವರದಿ ಕೊಡಬಹುದು, ಕೊಡದೇ ಇರಬಹುದು' ಎಂದೂ ಅವರು ಪ್ರತಿಕ್ರಿಯಿಸಿದರು.

'ದ್ವೇಷ ಭಾಷಣ ಮಾಡಿದರೆ ಕ್ರಮ'

ಯಾರೇ ದ್ವೇಷ ಭಾಷಣ ಮಾಡಿದರೂ ಅವರ ವಿರುದ್ಧ ಎಫ್ಐಆರ್ ದಾಖಲಿಸಲಾಗುತ್ತದೆ. ದ್ವೇಷ–ಅಸೂಯೆ ಹುಟ್ಟುಹಾಕಲು ಅವಕಾಶವಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಆರ್ಎಸ್ಎಸ್ ಮುಖಂಡ ಕಲ್ಲಡ್ಕ ಪ್ರಭಾಕರ್ ಭಟ್ ಮಹಿಳೆಯರ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಾರೆ. ಹೀಗಾಗಿ ಅವರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಸುಜಾತಾ ಭಟ್ ವಿಚಾರಣೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ನಡೆದಿದೆ ಎನ್ನಲಾದ ಅಪರಾಧ ಕೃತ್ಯಗಳ ತನಿಖೆ ನಡೆಸುತ್ತಿರುವ ಎಸ್ಐಟಿ ಬೆಳ್ತಂಗಡಿ ಕಚೇರಿಗೆ ಸುಜಾತಾ ಭಟ್ ಸೋಮವಾರ ವಿಚಾರಣೆಗೆ ಹಾಜರಾದರು.

ಮಗಳು ಧರ್ಮಸ್ಥಳಕ್ಕೆ ಭೇಟಿ ನೀಡಿದ್ದಾಗ ಕಾಣೆಯಾಗಿದ್ದಳು ಎಂದು ಸುಜಾತಾ ಭಟ್ ಎಸ್ಐಟಿಗೆ ದೂರು ನೀಡಿದ್ದರು. ಅದು ಸುಳ್ಳು ಎಂದು ವಿಚಾರಣೆ ವೇಳೆ ತಿಳಿದುಬಂದಿತ್ತು. ಈ ಬಗ್ಗೆ ಹೆಚ್ಚಿನ ವಿಚಾರಣೆ ಸಲುವಾಗಿ ಕಚೇರಿಗೆ ಹಾಜರಾಗುವಂತೆ ಎಸ್ಐಟಿ ಅಧಿಕಾರಿಗಳು ಸುಜಾತಾ ಭಟ್ ಅವರಿಗೆ ನೋಟಿಸ್ ಜಾರಿ ಮಾಡಿದ್ದರು.

ಸಾಕ್ಷಿ ದೂರುದಾರನಿಗೆ ಆಶ್ರಯ ನೀಡಿದ್ದ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ ಮಟ್ಟೆಣ್ಣವರ, ಜಯಂತ್ ಟಿ. ಹಾಗೂ ವಿಠಲ ಗೌಡ ಅವರಿಗೂ ಎಸ್ಐಟಿ ನೋಟಿಸ್ ಜಾರಿ ಮಾಡಿತ್ತು. ಈ ನಾಲ್ವರು ಸೋಮವಾರ ವಿಚಾರಣೆಗೆ ಹಾಜರಾಗಲಿಲ್ಲ. ಅವರ ಪರವಾಗಿ ವಕೀಲರೊಬ್ಬರು ಎಸ್ಐಟಿ ಕಚೇರಿಗೆ ಭೇಟಿ ನೀಡಿದರು.

'ನೋಟಿಸ್ ಪಡೆದ ನಾಲ್ವರು ವಿಚಾರಣೆಗೆ ಹಾಜರಾಗಲು ಸಮಯಾವಕಾಶ ನೀಡಬೇಕು ಎಂದು ಅವರ ವಕೀಲರು ಕೋರಿದ್ದಾರೆ. ಅವರಿಗೆ ಕಾಲಾವಕಾಶ ನೀಡುತ್ತೇವೆ. ಆ ಬಳಿಕವೂ ಅವರು ವಿಚಾರಣೆಗೆ ಹಾಜರಾಗದಿದ್ದರೆ ಮತ್ತೆ ನೋಟಿಸ್ ಜಾರಿ ಮಾಡುತ್ತೇವೆ. ಐವರಿಂದ ಖುದ್ದಾಗಿ ಹೇಳಿಕೆ ಪಡೆಯಬೇಕಿದೆ. ಎಸ್ಐಟಿ ಈಚೆಗೆ ಕಲೆ ಹಾಕಿರುವ ಹೆಚ್ಚುವರಿ ಪುರಾವೆಗಳನ್ನು ಖಾತರಿಪಡಿಸಿಕೊಳ್ಳುವ ಹಾಗೂ ಅವರು ಪ್ರಕರಣದಲ್ಲಿ ಎಷ್ಟರಮಟ್ಟಿಗೆ ಶಾಮೀಲಾಗಿದ್ದಾರೆ ಎಂಬುದನ್ನು ತಿಳಿಯುವ ದೃಷ್ಟಿಯಿಂದಲೂ ತುಂಬಾ ಮಹತ್ವದ್ದು' ಎಂದು ಮೂಲಗಳು ತಿಳಿಸಿವೆ.

ಪ್ರಕರಣ ಸಂಬಂಧ, ನ್ಯಾಯಾಲಯಕ್ಕೆ ಸಲ್ಲಿಸಲಿರುವ ಆರಂಭಿಕ ತನಿಖಾ ವರದಿಯನ್ನು ಸಿದ್ಧಪಡಿಸುವ ಪ್ರಕ್ರಿಯೆ ಅಂತಿಮ ಹಂತವನ್ನು ತಲುಪಿದೆ ಎಂದು ಮೂಲಗಳು ಹೇಳಿವೆ.

ಮನವಿಯೊಂದಿಗೆ ಬಂದವರು ವಶಕ್ಕೆ

ಬೆಳ್ತಂಗಡಿ (ದಕ್ಷಿಣ ಕನ್ನಡ): ಸೌಜನ್ಯಾ ಪರ ಹೋರಾಟಗಾರರ ಮೇಲೆ ಸುಳ್ಳು ಪ್ರಕರಣ ದಾಖಲಿಸಿ ದಮನ ಮಾಡುವ ಕಾರ್ಯ ನಡೆಯುತ್ತಿದೆ ಎಂದು ಆರೋಪಿಸಿ ಮನವಿ ನೀಡಲು ಬಂದಿದ್ದ ರಾಷ್ಟ್ರೀಯ ಹಿಂದೂ ಜಾಗರಣ ವೇದಿಕೆಯ ಕಾರ್ಯಕರ್ತರು ಮತ್ತು ಹೋರಾಟಗಾರರನ್ನು ಸೋಮವಾರ ಇಲ್ಲಿ ವಶಕ್ಕೆ ಪಡೆದ ಪೊಲೀಸರು ನಂತರ ಬಿಡುಗಡೆ ಮಾಡಿದರು. ಹೋರಾಟಗಾರರು ಪ್ರತಿಭಟನೆಗೆ ಅನುಮತಿ ಕೋರಿದ್ದರು. 'ಬೆಳ್ತಂಗಡಿ ತಾಲ್ಲೂಕು ಕಚೇರಿ ಮುಂದೆ ಪ್ರತಿಭಟನೆಗೆ ಅವಕಾಶವಿಲ್ಲ. ಆದೇಶ ಮೀರಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಎಸ್‌ಪಿ ಹೇಳಿದ್ದರು. ಹೀಗಾಗಿ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ಆಟೊ ಜಾಥಾ

ಪ್ರಜಾವಾಣಿ ಚಿತ್ರ



ಹಂಪಿಯಲ್ಲಿ ಬಾಡಿಗೆ ಬೈಕ್ ಸೇವೆ ನೀಡುವುದಕ್ಕೆ ಅನುಮತಿ ನೀಡಬಾರದು ಎಂದು ಆಗ್ರಹಿಸಿ ನೂರಾರು ಆಟೊರಿಕ್ಷಾ ಚಾಲಕರು ಹಂಪಿಯಿಂದ ಹೊಸಪೇಟೆಯವರೆಗೆ ಸೋಮವಾರ ಪ್ರತಿಭಟನಾ ಜಾಥಾ ನಡೆಸಿದರು

'ಸುಪ್ರೀಂ': ಮತ್ತೊಬ್ಬ ಕನ್ನಡಿಗನಿಗೆ ಕೊಕ್

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕ ಸರ್ಕಾರದ ಪರವಾಗಿ ವಾದ ಮಂಡಿಸುತ್ತಿದ್ದ ವಕೀಲರ ತಂಡದಿಂದ ಮತ್ತೊಬ್ಬ ಕನ್ನಡಿಗನನ್ನು ಕೈಬಿಡಲಾಗಿದೆ.

2023ರ ಸೆಪ್ಟೆಂಬರ್‌ನಿಂದ ಎಒಆರ್ ಆಗಿ ಕಾರ್ಯನಿರ್ವಹಿಸುತ್ತಿದ್ದ ಡಿ.ಎಲ್.ಚಿದಾನಂದ ಅವರನ್ನು ಜವಾಬ್ದಾರಿಯಿಂದ ಮುಕ್ತಗೊಳಿಸಿ ಕಾನೂನು ಇಲಾಖೆ ಆದೇಶ ಹೊರಡಿಸಿದೆ. ಮೂರು ತಿಂಗಳ ಹಿಂದೆ ವಿ.ಎನ್.ರಘುಪತಿ ಅವರನ್ನು ಕೈಬಿಡಲಾಗಿತ್ತು. ಅವರು 2009ರಿಂದ ವಕೀಲರ ತಂಡದಲ್ಲಿದ್ದರು.

ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರವನ್ನು ಆರು ಹೆಚ್ಚುವರಿ ಅಡ್ವೊಕೇಟ್ ಜನರಲ್‌ಗಳು ಪ್ರತಿನಿಧಿಸುತ್ತಿದ್ದು, ನಿಶಾಂತ್ ಪಾಟೀಲ ಬಿಟ್ಟು ಉಳಿದವರೆಲ್ಲ ಉತ್ತರ ಭಾರತದವರು.

ಅತ್ಯಾಚಾರ ಆರೋಪ: ಪ್ರಕರಣ ರದ್ದು

ಬೆಂಗಳೂರಿನ ಓಯೋ ಪ್ರಣಯಗಾಥೆ • ರಿಟ್ ಅರ್ಜಿ ಪುರಸ್ಕರಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಪರಸ್ಪರ ಅನ್ಯೋನ್ಯತೆ ದೈಹಿಕ ವಾಂಛೆಯಲ್ಲಿ ಚಿಗುರೊಡೆದು ಕೊನೆಗೊಂದು ದಿನ ಅತ್ಯಾಚಾರದ ಆರೋಪ ಹೊತ್ತುಕೊಂಡರೆ ಅಂತಹ ಪ್ರಕರಣಗಳನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಬೇಕು' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ಅತ್ಯಾಚಾರದ ಆರೋಪ ಹೊರಿಸಿ ನನ್ನ ವಿರುದ್ಧ ತರುಣಿ (21) ದಾಖಲಿಸಿರುವ ಎಫ್ಐಆರ್ ರದ್ದುಪಡಿಸಬೇಕು' ಎಂದು ಕೋರಿ ನಗರದ ತರುಣನೊಬ್ಬ (23) ಸಲ್ಲಿಸಿದ್ದ ರಿಟ್ ಅರ್ಜಿ ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ತರುಣನ ವಿರುದ್ಧ ತರುಣಿ ದಾಖಲಿಸಿದ್ದ ಅತ್ಯಾಚಾರದ ದೂರನ್ನು ರದ್ದುಪಡಿಸಿದೆ.

'ಒಪ್ಪಂದದ ಅನ್ಯೋನ್ಯತೆ ಮತ್ತು ಅತ್ಯಾಚಾರದ ಗಂಭೀರ ಆರೋಪದ ನಡುವಿನ ಸೂಕ್ಷ್ಮ ವ್ಯತ್ಯಾಸವನ್ನು ಸುಪ್ರೀಂ ಕೋರ್ಟ್ ಈ ಹಿಂದೆ ಹಲವು ಬಾರಿ ಸ್ಪಷ್ಟವಾಗಿ ಗುರುತಿಸಿದೆ' ಎಂದು ಪುನರುಚ್ಚರಿಸಿರುವ ನ್ಯಾಯಪೀಠ, 'ಪರಸ್ಪರ ಇಚ್ಛೆಯಿಂದ ಜನಿಸುವ ಸಂಬಂಧಗಳು ಕೆಲವೊಮ್ಮೆ ನಿರಾಶೆಯಲ್ಲಿ ಕೊನೆಗೊಂಡಾಗ ಭೂತಕಾಲದ ಅನ್ಯೋನ್ಯತೆಯನ್ನು ಒರೆಗೆ ಹಚ್ಚುವ ಅಗತ್ಯವಿದೆ' ಎಂದು ನುಡಿದಿದೆ.

'ಇಂತಹ ಆರೋಪಗಳನ್ನು ಹೊತ್ತು ನ್ಯಾಯಾಲಯದ ಮೆಟ್ಟಿಲೇರುವ ಪ್ರಕರಣಗಳಲ್ಲಿ ಕೆಲವೊಂದು ಸ್ಪಷ್ಟ ಪ್ರಕರಣಗಳನ್ನು ಹೊರತುಪಡಿಸಿ, ಎಲ್ಲವನ್ನೂ ಸಾರಾಸಗಟಾಗಿ ಕ್ರಿಮಿನಲ್ ಕಾನೂನಿನಡಿಯಲ್ಲಿ ಅಪರಾಧವಾಗಿ ಪರಿವರ್ತಿಸಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ತೀರ್ಪಿನಲ್ಲಿ ವಿವರಿಸಿದೆ.

ರಾಜ್ಯ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದ್ದ ಹೆಚ್ಚುವರಿ ರಾಜ್ಯ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, 'ದೂರುದಾರಳ ಮೇಲೆ ಅರ್ಜಿದಾರರು ಲೈಂಗಿಕ ದೌರ್ಜನ್ಯ ಎಸಗಿದ್ದಾರೆ. ಅದನ್ನು ಸಮ್ಮತಿಯುಕ್ತ ಲೈಂಗಿಕ ಕ್ರಿಯೆ ಎಂದು ಪರಿಗಣಿಸಲಾಗದು. ಮದುವೆಯಾಗುವುದಾಗಿ ಭರವಸೆ ನೀಡಿ ಲೈಂಗಿಕ ಕ್ರಿಯೆ ನಡೆಸುವುದೂ ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್ಎಸ್) ಅಡಿಯಲ್ಲಿ ಅಪರಾಧವಾಗುತ್ತದೆ. ಇದು ಅಂತಹ ಪ್ರಕರಣ ಅಲ್ಲದಿದ್ದರೂ, ಸಮ್ಮತಿಯುಕ್ತ ಲೈಂಗಿಕ ಕ್ರಿಯೆ ನಡೆದಿದೆಯೇ ಅಥವಾ ಇಲ್ಲವೇ ಎಂಬುದು ವಿಚಾರಣೆಯ ಮೂಲಕವೇ ತೀರ್ಮಾನವಾಗಬೇಕಿದೆ. ಆದ್ದರಿಂದ, ಅರ್ಜಿಯನ್ನು ವಜಾಗೊಳಿಸಬಾರದು' ಎಂದು ಕೋರಿದ್ದರು.

ಆದರೆ, ಇದನ್ನು ತಳ್ಳಿಹಾಕಿರುವ ನ್ಯಾಯಪೀಠ, ಪ್ರಕರಣಕ್ಕೆ ಸಂಬಂಧಿಸಿದಂತೆ ತರುಣಿ ದಾಖಲಿಸಿದ್ದ ದೂರು, ತನಿಖೆ ನಡೆಸಿ ಪೊಲೀಸರು ಸಲ್ಲಿಸಿರುವ ದೋಷಾರೋಪ ಪಟ್ಟಿ ಮತ್ತು ದೂರುದಾರರು ಮತ್ತು ಆರೋಪಿಗಳ ನಡುವಿನ ಸಂದೇಶದ (ಚಾಟ್) ವಿವರಗಳನ್ನು ಉಲ್ಲೇಖಿಸಿ, 'ಆರೋಪಿ ಮತ್ತು ದೂರುದಾರಳ ನಡುವೆ ಮೊಬೈಲ್ ಫೋನ್‌ನಲ್ಲಿ ಹಂಚಿಕೊಂಡಿರುವ ಸಂದೇಶಗಳು ಉತ್ತಮ ಅಭಿರುಚಿಯಿಂದ ಕೂಡಿಲ್ಲ' ಎಂದು ವಿವರಿಸಿದೆ. ಅರ್ಜಿದಾರ ತರುಣನ ಪರ ಹೈಕೋರ್ಟ್ ವಕೀಲ ಆತ್ರೇಯ ಸಿ.ಶೇಖರ್ ವಾದ ಮಂಡಿಸಿದ್ದರು.

ಸಂಧಿಸಲು ನೆರವಾದ 'ಬಂಬಲ್' ಆ್ಯಪ್

ಡೇಟಿಂಗ್ ಆ್ಯಪ್ 'ಬಂಬಲ್' ಮೂಲಕ ಪರಿಚಿತರಾಗಿ ಆತ್ಮೀಯತೆ ಬೆಳೆಸಿಕೊಂಡಿದ್ದ ತರುಣ ಮತ್ತು ತರುಣಿ ಓಯೋ ರೂಮ್ ಬುಕ್ ಮಾಡಿ ಸಂಧಿಸಿದ್ದರು.

'ನಾವಿಬ್ಬರೂ ಹೋಟೆಲ್ ರೂಂನಲ್ಲಿ ಸೇರಿದ್ದಾಗ, ತರುಣ ನನ್ನ ಒಪ್ಪಿಗೆ ಇಲ್ಲದೆ ನನ್ನ ಇಚ್ಛೆಗೆ ವಿರುದ್ಧವಾಗಿ ಸಂಭೋಗ ನಡೆಸಿದ್ದಾನೆ' ಎಂದು ಆರೋಪಿಸಿ ತರುಣಿ ಅತ್ಯಾಚಾರದ ಆರೋಪ ಹೊರಿಸಿ ದೂರು ನೀಡಿದ್ದರು.

ದೂರು ಆಧರಿಸಿ ಎಫ್ಐಆರ್ ದಾಖಲಿಸಿಕೊಂಡಿದ್ದ ಪೊಲೀಸರು, ಬಿಎನ್ಎಸ್ ಕಲಂ 64ರ ಅಡಿಯಲ್ಲಿ ತನಿಖೆ ನಡೆಸಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

> ಇಬ್ಬರ ನಡುವಿನ ಕ್ರಿಯೆಗಳು ಸಮ್ಮತಿಯಿಂದ ಕೂಡಿವೆ ಎಂಬುದು ಢಾಳಾಗಿ ಗೋಚರಿಸುತ್ತದೆ. ಹೀಗಾಗಿ, ಅರ್ಜಿದಾರ ತರುಣನ ವಿರುದ್ಧ ನ್ಯಾಯಿಕ ವಿಚಾರಣೆಗೆ ಅವಕಾಶ ನೀಡಿದ್ದೇ ಆದರೆ ಅದು ಕಾನೂನು ಪ್ರಕ್ರಿಯೆಯ ದುರುಪಯೋಗ ಆದಂತಾಗುತ್ತದೆ
>
> **ನ್ಯಾ. ಎಂ.ನಾಗಪ್ರಸನ್ನ**

330 ಪ್ರಕರಣಗಳ ವಿಚಾರಣೆ

ಸದ್ಯ ಧಾರವಾಡ ಪೀಠದಲ್ಲಿ ಕಾರ್ಯ ನಿರ್ವಹಿಸುತ್ತಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಸೋಮವಾರ ಒಟ್ಟು 330 ಪ್ರಕರಣಗಳ ವಿಚಾರಣೆ ನಡೆಸಿ ಅವುಗಳಲ್ಲಿ 90 ಪ್ರಕರಣಗಳನ್ನು ವಿಲೇವಾರಿ ಮಾಡಿ ತಮ್ಮ ದಾಖಲೆಯನ್ನು ಮುಂದುವರಿಸಿದರು.

ಬೆಳಿಗ್ಗೆ 10 ಗಂಟೆಗೇ ಪೀಠಾಸೀನರಾದ ನ್ಯಾ.ನಾಗಪ್ರಸನ್ನ ಅವರು ಸಂಜೆ 5.15ಕ್ಕೆಲ್ಲಾ 330 ಪ್ರಕರಣಗಳ ವಿಚಾರಣೆ ಪೂರೈಸಿದರು. ಅವುಗಳಲ್ಲಿ, ಸುಮಾರು 30ಕ್ಕೂ ಹೆಚ್ಚು ಪ್ರಕರಣಗಳು ವಿವಿಧ ವರ್ಗಗಳ ರಿಟ್ ವ್ಯಾಪ್ತಿಯ ಪ್ರಕರಣಗಳಾಗಿದ್ದು, ಸದ್ಯ ಕರ್ನಾಟಕ ಹೈಕೋರ್ಟ್‌ನಲ್ಲಿ ಪ್ರಕರಣಗಳ ಕ್ಷಿಪ್ರ ವಿಲೇವಾರಿಯ ಅಗ್ರೇಸರ ಎಂಬ ಪಟ್ಟವನ್ನು ಕಾಯ್ದುಕೊಂಡಿದ್ದಾರೆ.

'ಪಶು ವೈದ್ಯಾಧಿಕಾರಿ ಹುದ್ದೆ: ಸಂದರ್ಶನ ಇಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಶು ವೈದ್ಯಾಧಿಕಾರಿಗಳ 400 ಹುದ್ದೆಗಳ ಭರ್ತಿಗೆ ಸಂದರ್ಶನ ಇಲ್ಲದೆ, ಕೇವಲ ಅಂಕಗಳ ಆಧಾರದಲ್ಲಿ ನೇಮಕಾತಿ ಪ್ರಕ್ರಿಯೆ ನಡೆಸಬೇಕು' ಎಂದು ಕೆಪಿಎಸ್‌ಸಿ ಕಾರ್ಯದರ್ಶಿಗೆ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಕಾರ್ಯದರ್ಶಿ ಸೂಚನೆ ನೀಡಿದ್ದಾರೆ.

ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿನ ಪಶು ವೈದ್ಯಾಧಿಕಾರಿ ಹುದ್ದೆಗಳು ಗ್ರೂಪ್ 'ಎ' ವರ್ಗದ ಹುದ್ದೆಗಳಾಗಿರುವುದರಿಂದ ಈ ಹುದ್ದೆಗಳಿಗೆ ವ್ಯಕ್ತಿತ್ವ ಪರೀಕ್ಷೆಯ (ಸಂದರ್ಶನ) ಸಹಿತ ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವುದು ಸೂಕ್ತ ಎಂದು ಆಯೋಗ ತೀರ್ಮಾನಿಸಿದೆ. ಹೀಗಾಗಿ, ಈ ಹುದ್ದೆಗಳನ್ನು ಸ್ಪರ್ಧಾತ್ಮಕ ಪರೀಕ್ಷೆ ಮತ್ತು ಸಂದರ್ಶನದ ಮೂಲಕ ಭರ್ತಿ ಮಾಡುವ ಕುರಿತು ಪ್ರಸ್ತಾವವನ್ನು ಮತ್ತೊಮ್ಮೆ ಸಲ್ಲಿಸುವಂತೆ ಕೆಪಿಎಸ್‌ಸಿ 2023ರ ಆಗಸ್ಟ್ 4ರಂದು ಇಲಾಖೆಗೆ ಪತ್ರ ಬರೆದಿತ್ತು.

ಇಲಾಖೆಯು ಈ ಪತ್ರದಲ್ಲಿನ ಅಂಶಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ (ಡಿಪಿಎಆರ್) ಅಭಿಪ್ರಾಯ ಕೋರಿತ್ತು. ಅದಕ್ಕೆ ಪ್ರತಿಕ್ರಿಯಿಸಿರುವ ಡಿಪಿಎಆರ್ (ಸೇವಾ ನಿಯಮಗಳು), '2020–21ರ ನೇರ ನೇಮಕಾತಿ ನಿಯಮಗಳ ನಿಯಮ 5ರಲ್ಲಿ ವಿವರಿಸಿರುವ ಆಯ್ಕೆ ವಿಧಾನಗಳ ಅನ್ವಯ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಶೇಕಡವಾರು ಪ್ರಮಾಣದ ಆಧಾರದಲ್ಲಿ ಮಾತ್ರ ಹುದ್ದೆಗಳ ಆಯ್ಕೆ ಕೈಗೊಳ್ಳಬೇಕು' ಎಂದು ತಿಳಿಸಿದೆ.

ಡಿಪಿಎಆರ್ ನೀಡಿದ್ದ ಈ ಅಭಿಪ್ರಾಯ ಉಲ್ಲೇಖಿಸಿ ಕೆಪಿಎಸ್‌ಸಿಗೆ ಪತ್ರ ಬರೆದಿರುವ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಯ ಕಾರ್ಯದರ್ಶಿ, '400 ಪಶು ವೈದ್ಯಾಧಿಕಾರಿ ಹುದ್ದೆಗಳ ಭರ್ತಿಗೆ ಸಂದರ್ಶನವಿಲ್ಲದೆ ನೇರ ನೇಮಕಾತಿ ಮೂಲಕ ಆಯ್ಕೆ ಮಾಡಬೇಕು' ಎಂದು ವಿವರಿಸಿದ್ದಾರೆ.

₹1 ಲಕ್ಷ ಲಂಚ: ಎಂಜಿನಿಯರ್ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಸ್ವಾಧೀನ ಮಾಡಿಕೊಂಡಿದ್ದ ಜಮೀನಿಗೆ ಪರಿಹಾರದ ಚೆಕ್ ನೀಡಲು ₹1 ಲಕ್ಷ ಲಂಚ ಕೇಳಿದ್ದ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯನಿರ್ವಾಹಕ ಎಂಜಿನಿಯರ್ ಅಶೋಕ ಶಿರೂರ ಅವರನ್ನು ಲೋಕಾಯುಕ್ತ ಅಧಿಕಾರಿಗಳು ಸೋಮವಾರ ಬಂಧಿಸಿದ್ದಾರೆ.

ಮುಗಳಕೋಡ ಮತ್ತು ಹಾರೂಗೇರಿ ಪಟ್ಟಣಗಳಿಗೆ ಅಮೃತ ಯೋಜನೆಯಡಿ ಕುಡಿಯುವ ನೀರು ಸರಬರಾಜು ಯೋಜನೆಗೆ ರಾಯಬಾಗ ತಾಲ್ಲೂಕಿನ ಖೇಮಲಾಪುರ ಗ್ರಾಮದ ರೈತ ಯಾಸಿನ್ ಪೇಂಢಾರಿ ಎಂಬವರ 14 ಗುಂಟೆ ಜಮೀನು ಸ್ವಾಧೀನ ಮಾಡಿಕೊಳ್ಳಲಾಗಿತ್ತು. ಪರಿಹಾರವಾಗಿ ಸರ್ಕಾರದಿಂದ ₹18 ಲಕ್ಷ ಮಂಜೂರಾಗಿತ್ತು. ಇದರ ಚೆಕ್ ನೀಡಲು ಅಶೋಕ ಅವರು ₹1 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಇದರ ಬಗ್ಗೆ ಲೋಕಾಯುಕ್ತ ಠಾಣೆಯಲ್ಲಿ ದೂರು ದಾಖಲಾಗಿತ್ತು.

‘ಸಿಬಿಐಗೆ ತನಿಖೆ ವಹಿಸುತ್ತೇವೆ’

ಕೇಂದ್ರಾಡಳಿತ ಪ್ರದೇಶಗಳು ಮತ್ತು ರಾಜ್ಯಗಳಿಗೆ ‘ಸುಪ್ರೀಂ’ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಜನರಿಂದ ಹಣ ದೋಚುವ ‘ಡಿಜಿಟಲ್ ಅರೆಸ್ಟ್’ ಹೆಸರಿನ ವಂಚನೆಯು ದೇಶದಾದ್ಯಂತ ಹಬ್ಬಿಕೊಂಡಿದೆ. ಇಂತಹ ಪ್ರಕರಣಗಳ ತನಿಖೆಯಲ್ಲಿ ಏಕರೂಪತೆ ಬೇಕಿದೆ. ಆದ್ದರಿಂದ ಈ ಎಲ್ಲ ಪ್ರಕರಣಗಳ ತನಿಖೆಯನ್ನು ನಾವು ಸಿಬಿಐಗೆ ವಹಿಸಲು ಬಯಸಿದ್ದೇವೆ’ ಎಂದು ಸುಪ್ರೀಂ ಕೋರ್ಟ್ ಸೋಮವಾರ ಹೇಳಿತು.

‘ಕೇಂದ್ರಾಡಳಿತ ಪ್ರದೇಶಗಳು ಮತ್ತು ರಾಜ್ಯಗಳು ‘ಡಿಜಿಟಲ್ ಅರೆಸ್ಟ್’ ಸಂಬಂಧ ದಾಖಲಾಗಿರುವ ಎಫ್‌ಐಆರ್‌ಗಳ ಮಾಹಿತಿ ನೀಡಬೇಕು’ ಎಂದಿರುವ ನ್ಯಾಯಾಲಯವು ಈ ಬಗ್ಗೆ ನೋಟಿಸ್ ಜಾರಿ ಮಾಡಿದೆ. ನ್ಯಾಯಮೂರ್ತಿಗಳಾದ ಸೂರ್ಯಕಾಂತ್ ಮತ್ತು ಜಾಯ್‌ಮಾಲ್ಯಾ ಬಾಗ್ಚಿ ಅವರ ಪೀಠ ವಿಚಾರಣೆ ನಡೆಸಿತು.

‘ಇಂಥ ಕೆಲವು ಪ್ರಕರಣಗಳ ಬಗ್ಗೆ ಸಿಬಿಐ ಈಗಾಗಲೇ ತನಿಖೆ ನಡೆಸುತ್ತಿದೆ’ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಬಾಗ್ಚಿ, ‘ಎಲ್ಲ ಪ್ರಕರಣಗಳ ತನಿಖೆ ನಡೆಸಲು ಸಿಬಿಐ ಬಳಿ ಅಗತ್ಯ ಸಂಪನ್ಮೂಲಗಳಿವೆಯೇ? ಸೈಬರ್ ತಜ್ಞರ ಸಹಕಾರ ಬೇಕಿದ್ದರೆ ತಿಳಿಸಿ’ ಎಂದರು.

ಇಂಥ ಪ್ರಕರಣಗಳ ತನಿಖೆಯನ್ನು ಹೇಗೆ ನಡೆಸಬೇಕು ಎನ್ನುವ ಬಗ್ಗೆ ನೀವು (ಸಿಬಿಐ) ಯೋಜನೆ ರೂಪಿಸಿ
ಸುಪ್ರೀಂ ಕೋರ್ಟ್



‘ಗೃಹ ಇಲಾಖೆಯಲ್ಲಿರುವ ಸೈಬರ್ ತಜ್ಞರ ಸಹಕಾರವನ್ನು ಸಿಬಿಐ ಪಡೆದುಕೊಳ್ಳುತ್ತಿದೆ’ ಎಂದು ಮೆಹ್ತಾ ಪೀಠಕ್ಕೆ ತಿಳಿಸಿದರು.

‘ಪೊಲೀಸ್ ಇಲಾಖೆಯಲ್ಲಿ ಇಲ್ಲದ, ಹೊರಗಿನ ಸೈಬರ್ ತಜ್ಞರ ಸಹಕಾರ ಬೇಕಿದ್ದರೆ ತಿಳಿಸಿ. ಇಲ್ಲಿ ತನಿಖೆಯ ವ್ಯಾಪ್ತಿ ದೊಡ್ಡದಿದೆ. ಇದೇ ಸಮಸ್ಯೆ. ಇಷ್ಟೊಂದು ದೊಡ್ಡ ಮಟ್ಟದ ತನಿಖೆ ನಡೆಸಲು ಸಿಬಿಐ ತಯಾರಿದೆಯೇ? ಆದ್ದರಿಂದ ಅವರಿಗೆ ಹೆಚ್ಚಿನ ಸಹಕಾರದ ಅಗತ್ಯ ಬೀಳಬಹುದು’ ಎಂದು ನ್ಯಾಯಮೂರ್ತಿ ಬಾಗ್ಚಿ ಅಭಿಪ್ರಾಯಪಟ್ಟರು.

ಏನಿದು ಪ್ರಕರಣ?

ಡಿಜಿಟಲ್ ಅರೆಸ್ಟ್‌ನಲ್ಲಿ ತಾವು ₹1.5 ಕೋಟಿ ಕಳೆದುಕೊಂಡ ಬಗ್ಗೆ ಹರಿಯಾಣದ ವೃದ್ಧ ದಂಪತಿ ಸುಪ್ರೀಂ ಕೋರ್ಟ್‌ಗೆ ಇತ್ತೀಚೆಗೆ ಪತ್ರ ಬರೆದಿದ್ದರು. ಈ ಸಂಬಂಧ ಸುಪ್ರೀಂ ಕೋರ್ಟ್ ಅ.17ರಂದು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡು ವಿಚಾರಣೆ ಆರಂಭಿಸಿತ್ತು ಮತ್ತು ಈ ಕುರಿತು ಪ್ರತಿಕ್ರಿಯಿಸುವಂತೆ ಕೇಂದ್ರ ಸರ್ಕಾರ ಹಾಗೂ ಸಿಬಿಐಗೆ ನೋಟಿಸ್ ನೀಡಿತ್ತು.

ಸೆ.1ರಿಂದ ಸೆ.16ರವರೆಗೆ ದಂಪತಿಯನ್ನು ‘ಡಿಜಿಟಲ್ ಅರೆಸ್ಟ್’ನಲ್ಲಿ ಇರಿಸಲಾಗಿತ್ತು. ವಂಚಕರು ತಾವು ಸಿಬಿಐ ಮತ್ತು ನ್ಯಾಯಾಲಯದ ಅಧಿಕಾರಿಗಳು ಎಂದು ಹೇಳಿಕೊಂಡಿದ್ದರು. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ನಕಲಿ ಸಹಿ ಇದ್ದ ಸುಳ್ಳು ಆದೇಶ ಪತ್ರವೊಂದನ್ನು ತೋರಿಸಿದ್ದ ವಂಚಕರು, ಹಣ ನೀಡದಿದ್ದರೆ ಬಂಧಿಸಲಾಗುವುದು ಎಂದು ಬೆದರಿಕೆ ಹಾಕಿದ್ದರು.

‘ವಿದೇಶಿ ನೆಲದಲ್ಲಿ ನಿರ್ವಹಣೆ’

‘ಸೈಬರ್ ಅಪರಾಧಗಳು ಮತ್ತು ‘ಡಿಜಿಟಲ್ ಅರೆಸ್ಟ್’ನಂಥ ಪ್ರಕರಣಗಳು ಭಾರತದಲ್ಲಿ ನಿರ್ವಹಣೆಯಾಗುತ್ತಿಲ್ಲ. ಈ ಜಾಲದ ಮೂಲ ಮ್ಯಾನ್ಮಾರ್ ಮತ್ತು ಥಾಯ್ಲೆಂಡ್ ದೇಶಗಳಲ್ಲಿದೆ’ ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ಪೀಠಕ್ಕೆ ತಿಳಿಸಿದರು. ‘ಇದೊಂದು ಅಂತರರಾಷ್ಟ್ರೀಯ ವಿಚಾರ’ ಎಂದು ಪೀಠ ಹೇಳಿತು.

‘ಕೆಲವೊಮ್ಮೆ ವಿದೇಶಗಳಲ್ಲಿ ಉದ್ಯೋಗ ಕೊಡಿಸುವ ಆಸೆ ತೋರಿಸಿ ಜನರನ್ನು ಮರುಳು ಮಾಡಲಾಗುತ್ತದೆ. ಜನರು ಆ ದೇಶಗಳಿಗೆ ತಲುಪಿದ ಬಳಿಕ ಸತ್ಯ ಬಯಲಾಗುತ್ತದೆ. ‘ನಿಮ್ಮ ಮೇಲೆ ಹಣ ಸುರಿಯಲಾಗಿದೆ. ಆದ್ದರಿಂದ ನೀವು ಈ ಹಣವನ್ನು ನಮಗೆ ವಾಪಸು ನೀಡಬೇಕು. ಇದಕ್ಕಾಗಿ ಆನ್‌ಲೈನ್ ಮೂಲಕ ಹಣ ಸಂಗ್ರಹಿಸಿ’ ಎನ್ನಲಾಗುತ್ತದೆ. ಜನರ ಪಾಸ್‌ಪೋರ್ಟ್‌ಗಳನ್ನು ತಮ್ಮ ವಶದಲ್ಲಿ ಇಟ್ಟುಕೊಳ್ಳಲಾಗುತ್ತದೆ ಮತ್ತು ಅವರನ್ನು ಗುಲಾಮರನ್ನಾಗಿ ಇರಿಸಿಕೊಳ್ಳಲಾಗುತ್ತದೆ’ ಎಂದು ತುಷಾರ್ ಮೆಹ್ತಾ ಹೇಳಿದರು.

‘8 ವಾರಗಳಲ್ಲಿ ಪ್ರಮಾಣಪತ್ರ ಸಲ್ಲಿಸಿ’

ನವದೆಹಲಿ (ಪಿಟಿಐ): ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಆತ್ಮಹತ್ಯೆ ಪ್ರಕರಣ ಹಾಗೂ ಮಾನಸಿಕ ಆರೋಗ್ಯ ಸಮಸ್ಯೆಗಳನ್ನು ತಡೆಗಟ್ಟಲು ಹೊರಡಿಸಿರುವ ಮಾರ್ಗಸೂಚಿಗಳ ಅನುಷ್ಠಾನದ ಬಗ್ಗೆ ಎಂಟು ವಾರಗಳಲ್ಲಿ ಪ್ರಮಾಣಪತ್ರ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸೋಮವಾರ ಸೂಚಿಸಿದೆ.

ನ್ಯಾಯಮೂರ್ತಿಗಳಾದ ವಿಕ್ರಮನಾಥ್ ಮತ್ತು ಸಂದೀಪ್ ಮೆಹ್ತಾ ಅವರಿದ್ದ ಪೀಠವು, ‘ಈ ಬಗ್ಗೆ ಮಾರ್ಗಸೂಚಿಗಳನ್ನು ಜಾರಿಗೆ ತರಲು ತೆಗೆದುಕೊಂಡ ಕ್ರಮಗಳನ್ನು ವಿವರಿಸುವ ಅನುಸರಣಾ ಪ್ರಮಾಣ ಪತ್ರವನ್ನು ಕೇಂದ್ರವು ಕೋರ್ಟ್‌ಗೆ ಸಲ್ಲಿಸಬೇಕು ಎಂದು ಸೂಚಿಸಿದೆ,

‘ನ್ಯಾಯಾಂಗ ನಿಂದನೆ ಬೇಡ’

ಸಿಜೆಐ ಗವಾಯಿ ಅವರತ್ತ ಶೂ ಎಸೆತ ಯತ್ನ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಬಿ.ಆರ್.ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ಹಿರಿಯ ವಕೀಲ ರಾಕೇಶ್ ಕಿಶೋರ್ ಅವರಿಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಲು ಸುಪ್ರೀಂಕೋರ್ಟ್ ಒಲವು ವ್ಯಕ್ತಪಡಿಸಿಲ್ಲ. ಈ ವಿಚಾರದಲ್ಲಿ ಸಿಜೆಐ ಅವರೇ ಮುಂದುವರಿಯಲು ನಿರಾಕರಿಸಿದ್ದನ್ನು ಉಲ್ಲೇಖಿಸಿದೆ.

‘ನ್ಯಾಯಾಲಯದಲ್ಲಿ ಘೋಷಣೆ ಹಾಕುವುದು ಮತ್ತು ಶೂ ಎಸೆಯುವುದು ಸ್ಪಷ್ಟವಾಗಿ ನ್ಯಾಯಾಂಗದ ನಿಂದನೆಯ ಪ್ರಕರಣಗಳಾಗಿವೆ. ಆದರೆ, ಕ್ರಮಕೈಗೊಳ್ಳುವುದು ನ್ಯಾಯಮೂರ್ತಿ ಅವರ ವಿವೇಚನೆಗೆ ಸಹ ಸಂಬಂಧಿಸಿದ್ದಾಗಿದೆ. ನ್ಯಾಯಮೂರ್ತಿ ಅವರು ಈ ವಿಚಾರದಲ್ಲಿ ಕಾನೂನಿನ ಅಡಿಯಲ್ಲಿ ಮುಂದುವರಿಯಬೇಕೆ ಅಥವಾ ಬೇಡವೇ ಎನ್ನುವ ಬಗ್ಗೆ ನಿರ್ಧಾರ ಕೈಗೊಳ್ಳುತ್ತಾರೆ’ ಎಂದು ನ್ಯಾಯಮೂರ್ತಿಗಳಾದ ಸೂರ್ಯಕಾಂತ ಮತ್ತು ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠವು ತಿಳಿಸಿದೆ.



‘ಇಂಥ ಘಟನೆಗಳು ನಡೆಯದಂತೆ ತಡೆಗಟ್ಟುವ ಕ್ರಮಗಳ ಕುರಿತು ಪರಿಶೀಲನೆ ನಡೆಸಲಾಗುವುದು’ ನ್ಯಾಯಪೀಠ ತಿಳಿಸಿದೆ.

ಅಕ್ಟೋಬರ್ 6ರಂದು ಶೂ ಎಸೆದ ವಕೀಲ ರಾಕೇಶ್ ಕಿಶೋರ್ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಬೇಕು ಎಂದು ಕೋರಿ ಸುಪ್ರೀಂ ಕೋರ್ಟ್‌ನ ವಕೀಲ ಸಂಘ (ಎಸ್‌ಸಿಬಿಎ) ಅರ್ಜಿ ಸಲ್ಲಿಸಿತ್ತು.

‘ಶೂ ಎಸೆದ ವಕೀಲರಿಗೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿ ಮಾಡಿದರೆ, ಅವರಿಗೆ ಅನಗತ್ಯ ಪ್ರಾಮುಖ್ಯ ನೀಡಿದಂತಾಗುತ್ತದೆ. ಪ್ರಕರಣದ ಅವಧಿಯೂ ಹೆಚ್ಚಾಗುತ್ತದೆ. ಅದರ ಪಾಡಿಗೆ ಸಹಜವಾಗಿ ಸಾಯಲು ಬಿಡಬೇಕು’ ಎಂದು ನ್ಯಾಯಪೀಠ ತಿಳಿಸಿದೆ.



ಕೇಂದ್ರ ಸರ್ಕಾರ ಪ್ರಾಯೋಜಿತ ‘ಪಿ.ಎಂ.ಶ್ರೀ ಶಾಲಾ ಯೋಜನೆ’ಗೆ ಸೇರ್ಪಡೆಯಾಗಲು ಕೇರಳ ಸರ್ಕಾರ ಒಪ್ಪಿಕೊಂಡಿದ್ದನ್ನು ವಿರೋಧಿಸಿ ತಿರುವನಂತಪುರದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಆಲ್ ಇಂಡಿಯಾ ಡೆಮಾಕ್ರಟಿಕ್ ಯೂತ್ ಆರ್ಗನೈಜೇಷನ್ ಕಾರ್ಯಕರ್ತರನ್ನು ಚದುರಿಸಲು ಪೊಲೀಸರು ಜಲ ಫಿರಂಗಿ ಪ್ರಯೋಗಿಸಿದರು —ಪಿಟಿಐ ಚಿತ್ರ

‘ಯುದ್ಧಕ್ಕೆ ಸಿದ್ಧರಾಗಿರಬೇಕು’

ನವದೆಹಲಿ (ಪಿಟಿಐ): ಭಾರತ ಯಾವಾಗಲೂ ಯುದ್ಧಕ್ಕೆ ಸಿದ್ಧವಾಗಿರಬೇಕು. ಗಡಿಯಲ್ಲಿ ಯಾವಾಗ, ಏನು ಬೇಕಾದರೂ ನಡೆಯಬಹುದು ಎನ್ನುವುದಕ್ಕೆ ಪಾಕಿಸ್ತಾನದೊಂದಿಗಿನ ಸಂಘರ್ಷ ನಿದರ್ಶನವಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಸೋಮವಾರ ಹೇಳಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ಆಪರೇಷನ್ ಸಿಂಧೂರ’ದಲ್ಲಿ ಭಾರತವು ಪಾಕಿಸ್ತಾನಕ್ಕೆ ದಿಟ್ಟ ಉತ್ತರ ನೀಡಿದೆ. ರಾಷ್ಟ್ರೀಯ ಭದ್ರತಾ ಸವಾಲುಗಳನ್ನು ಎದುರಿಸಲು ಭವಿಷ್ಯದಲ್ಲಿ ಯೋಜನೆ ರೂಪಿಸಲು ಇದೊಂದು ಅಧ್ಯಯನ ಯೋಗ್ಯ ವಿಚಾರವಾಗಿದೆ’ ಎಂದು ತಿಳಿಸಿದರು.

ಮುಸ್ಲಿಮರಿಗೆ ದೊರೆಯದ ಪ್ರಾತಿನಿಧ್ಯ

ಪ್ರಜಾವಾಣಿ ವಾರ್ತೆ

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

ನವದೆಹಲಿ: ಇಂದಿರಾ ಗಾಂಧಿ ಹತ್ಯೆಯ ನಂತರ ಬಿಹಾರ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಅಧಿಕ ಸಂಖ್ಯೆಯ ಮುಸ್ಲಿಂ ಶಾಸಕರು ಆಯ್ಕೆಯಾಗಿ ಬಂದಿದ್ದರು. ಆಗ ಕಾಂಗ್ರೆಸ್ ಪಕ್ಷವು ಮೂರನೇ ಎರಡರಷ್ಟು ಬಹುಮತ ಗಳಿಸಿತ್ತು. 2005ರ ಅಕ್ಟೋಬರ್‌ನಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ–ಜೆಡಿಯು ಮೈತ್ರಿಕೂಟವು ಸರ್ಕಾರ ರಚಿಸಿತ್ತು. ಆಗ ಕಡಿಮೆ ಸಂಖ್ಯೆಯ ಮುಸ್ಲಿಂ ಶಾಸಕರು ಆಯ್ಕೆಯಾಗಿದ್ದರು.


2011ರ ಜನಗಣತಿಯ ಪ್ರಕಾರ, ರಾಜ್ಯದಲ್ಲಿ ಮುಸ್ಲಿಮರ ಜನಸಂಖ್ಯೆ ಶೇ 16.9ರಷ್ಟಿದೆ. 2023ರಲ್ಲಿ ಬಿಹಾರ ಸರ್ಕಾರ ನಡೆಸಿದ ಜಾತಿ ಸಮೀಕ್ಷೆ ಪ್ರಕಾರ, ಮುಸ್ಲಿಮರ ಜನಸಂಖ್ಯೆಯಲ್ಲಿ ಭಾರಿ ಬದಲಾವಣೆ ಆಗಿಲ್ಲ.

1972ರ ವರೆಗೆ ಬಿಹಾರ ವಿಧಾನಸಭೆಯಲ್ಲಿ 239 ಸದಸ್ಯರು ಇದ್ದರು. ಅವಿಭಜಿತ ಬಿಹಾರ ವಿಧಾನಸಭೆಯು 324 ಸದಸ್ಯರನ್ನು ಹೊಂದಿತ್ತು. 2000ರಲ್ಲಿ ಜಾರ್ಖಂಡ್ ಪ್ರತ್ಯೇಕ ರಾಜ್ಯವಾಯಿತು. ಪ್ರಸ್ತುತ ವಿಧಾನಸಭೆಯ ಸದಸ್ಯರ ಸಂಖ್ಯೆ 243. ವಿಧಾನಸಭೆಯಲ್ಲಿ ಮುಸ್ಲಿಂ ಶಾಸಕರ ಪಾಲು ಕನಿಷ್ಠ ಶೇ 6ರಿಂದ ಗರಿಷ್ಠ ಶೇ 11.5ರಷ್ಟಿದೆ.

ರಾಜ್ಯದಾದ್ಯಂತ ಮುಸ್ಲಿಮರ ಜನಸಂಖ್ಯೆ ಏಕರೂಪವಾಗಿ ಹಂಚಿಕೆ ಆಗಿಲ್ಲ. 2011ರ ಜನಗಣತಿಯ ಪ್ರಕಾರ, ಶೇ 40ರಷ್ಟು ಮುಸ್ಲಿಮರು ಆರು ಜಿಲ್ಲೆಗಳಲ್ಲೇ ಇದ್ದಾರೆ. ರಾಜ್ಯದಲ್ಲಿ ಏಳು ಉಪವಿಭಾಗಗಳಿವೆ. ಸೀಮಾಂಚಲದ ಪುರ್ನಿಯಾ, ಕಿಶನ್‌ಗಂಜ್ ಸೇರಿದಂತೆ ನಾಲ್ಕು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯ ಮುಸ್ಲಿಮರು ಇದ್ದಾರೆ. ರಾಜ್ಯದಲ್ಲಿ ಈವರೆಗೆ 312 ಮುಸ್ಲಿಂ ಶಾಸಕರು ಆಯ್ಕೆಯಾಗಿದ್ದಾರೆ. ಕಾಂಗ್ರೆಸ್‌ನಿಂದ 130 ಹಾಗೂ ಆರ್‌ಜೆಡಿಯಿಂದ 57 ಮಂದಿ ಚುನಾಯಿತರಾಗಿದ್ದಾರೆ. ಬಿಜೆಪಿಯಿಂದ ಆಯ್ಕೆಯಾಗಿರುವವರು ಬೆರಳೆಣಿಕೆ ಜನ.

ಪಕ್ಷವಾರು ಪ್ರಾತಿನಿಧ್ಯ (ಶೇ)	
ಆರ್‌ಜೆಡಿ	1.57
ಕಾಂಗ್ರೆಸ್	1.51
ಎಡಪಕ್ಷಗಳು	0.97
ಎಲ್‌ಜೆಪಿ	0.78
ಸಿಪಿಐ	0.68
ಜೆಡಿಯು	0.60
ಬಿಜೆಪಿ	0.03

ಮುಸ್ಲಿಂ ಶಾಸಕರು



*ಫೆಬ್ರುವರಿ ** ಅಕ್ಟೋಬರ್

ಅಮೆರಿಕದಿಂದ ಗಡಿಪಾರಾದ ಭಾರತೀಯರ ನೋವು

‘25 ತಾಸು ಕೈಗೆ ಕೋಳ ಹಾಕಿ ಕೂರಿಸಿದ್ದರು’

ಅಂಬಾಲಾ/ಕುರುಕ್ಷೇತ್ರ (ಪಿಟಿಐ): ‘ನನ್ನ ಕಾಲುಗಳು ಊದಿಕೊಂಡಿವೆ. ವಿಮಾನದಲ್ಲಿ 25 ತಾಸು ಕೈಗೆ ಕೋಳ ಹಾಕಿ ಕೂರಿಸಿದ್ದರು’ ಎಂದು ಅಮೆರಿಕದಿಂದ ಗಡಿಪಾರಾಗಿರುವ 45 ವರ್ಷದ ಹರ್ಜಿಂದರ್ ಸಿಂಗ್ ಅಳಲು ತೋಡಿಕೊಂಡರು.

ಅಮೆರಿಕ ಗಡಿಪಾರು ಮಾಡಿರುವ ಅಕ್ರಮ ವಲಸಿಗರನ್ನು ಹೊತ್ತ ವಿಮಾನವು ಶನಿವಾರ ರಾತ್ರಿ ದೆಹಲಿಗೆ ಬಂದಿಳಿಯಿತು.

‘ಅಕ್ರಮ ವಲಸಿಗರಲ್ಲಿ ಹರಿಯಾಣದ ಕೈಥಾಲ್, ಕರ್ನಲ್, ಕುರುಕ್ಷೇತ್ರ, ಅಂಬಾಲಾ, ಯಮುನಾ ನಗರ, ಜಿಂದ್ ಮತ್ತು ಪಾಣಿಪತ್ ಜಿಲ್ಲೆಯ 50 ಮಂದಿ ಸೇರಿದ್ದಾರೆ’ ಎಂದು ಅಧಿಕಾರಿಗಳು ತಿಳಿಸಿದರು.

‘ಗಡಿಪಾರು ಮಾಡಿರುವುದು ತುಂಬಾ ನೋವು ತಂದಿದೆ. ಉತ್ತಮ



ಜೀವನಕ್ಕಾಗಿ ಅಮೆರಿಕಕ್ಕೆ ವಲಸೆ ಹೋಗಲು ₹35 ಲಕ್ಷ ಖರ್ಚು ಮಾಡಿದ್ದೆ. ಅದೆಲ್ಲವೂ ಈಗ ವ್ಯರ್ಥವಾಗಿದೆ’ ಎಂದು ಹರ್ಜಿಂದರ್ ಸಿಂಗ್ ಹೇಳಿದರು.

‘ಅಡುಗೆ ಕಲಿತು ಫ್ಲಾರಿಡಾದಲ್ಲಿ ನೆಲಸಿದ್ದೆ. ಅಲ್ಲಿನ ಉದ್ಯೋಗ ಚೆನ್ನಾಗಿಯೇ ಇತ್ತು. ಆದರೆ, ಟ್ರಂಪ್ ಆಡಳಿತವು ಸೆರೆಹಿಡಿದು ಭಾರತಕ್ಕೆ ವಾಪಸ್ ಕಳುಹಿಸಿತು’ ಎಂದು ಸುದ್ದಿಗಾರರಿಗೆ ತಿಳಿಸಿದರು.

ಹರೀಶ್ ಎಂಬುವವರು, ‘ಕಳೆದ ವರ್ಷ ಆಗಸ್ಟ್‌ನಲ್ಲಿ ಕೆನಡಾದಿಂದ ಅಮೆರಿಕಕ್ಕೆ ತೆರಳಿ, ಅಂಗಡಿಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದೆ. ಅಮೆರಿಕದ ಅಧಿಕಾರಿಗಳು ಫೆಬ್ರುವರಿಯಲ್ಲಿ ಬಂಧಿಸಿದರು’ ಎಂದು ತಿಳಿಸಿದರು.

ನರೇಶ್ ಕುಮಾರ್ ಎಂಬುವವರು, ‘₹42 ಲಕ್ಷ ನೀಡಿದರೆ ಅಮೆರಿಕಕ್ಕೆ ಕಳುಹಿಸುವುದಾಗಿ ಏಜೆಂಟ್ ಒಬ್ಬರು ಭರವಸೆ ನೀಡಿದ್ದರು. ಅಂತಿಮವಾಗಿ ₹57 ಲಕ್ಷ ತೆಗೆದುಕೊಂಡರು. ಇದಕ್ಕಾಗಿ ಒಂದು ಎಕರೆ ಜಮೀನನ್ನು ₹42 ಲಕ್ಷಕ್ಕೆ ಮಾರಾಟ ಮಾಡಿದೆ. ಅದೂ ಸಾಲದೆ ₹6 ಲಕ್ಷ ಸಾಲ ಮಾಡಿದೆ. ಸಹೋದರ ತನ್ನ ಬಳಿ ಇದ್ದ ಜಮೀನು ಮಾರಾಟ ಮಾಡಿ ₹6.5 ಲಕ್ಷ ನೀಡಿದ. ಸಂಬಂಧಿಗಳು ₹2.85 ಲಕ್ಷ ನೀಡಿದರು’ ಎಂದು ತಮ್ಮ ಸಂಕಟವನ್ನು ವಿವರಿಸಿದರು.

ಭಾರತಕ್ಕೆ ವಾಪಸಾಗುವ ಮೊದಲು 14 ತಿಂಗಳು ಅಮೆರಿಕದಲ್ಲಿ ಸೆರೆವಾಸ ಅನುಭವಿಸಿದೆ ಎಂದು ಹೇಳಿದರು.

ಭಾರತಕ್ಕೆ ವಾಪಸಾಗಿರುವವರ ಪೈಕಿ ಬಹುತೇಕರು 25–40 ವರ್ಷ ವಯಸ್ಸಿನವರಾಗಿದ್ದು, ಅಮೆರಿಕಕ್ಕೆ ವಲಸೆ ಹೋಗುವ ಸಲುವಾಗಿ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ, ಸಂಬಂಧಿಗಳಿಂದ ಸಾಲ ಮಾಡಿದ್ದಾರೆ, ಅಲ್ಪಸ್ವಲ್ಪ ಉಳಿತಾಯದ ಹಣವನ್ನೂ ಆ ಕನಸಿಗಾಗಿ ಖರ್ಚು ಮಾಡಿದ್ದಾರೆ.

ಇವರಲ್ಲಿ ಬಹುತೇಕರು ‘ಡಂಕಿ’ ಮಾರ್ಗದ ಮೂಲಕ ಅಮೆರಿಕವನ್ನು ಪ್ರವೇಶಿಸಿದ್ದರು. ‘ಡಂಕಿ ಮಾರ್ಗ’ ಎಂಬುದು ಅಕ್ರಮ ವಲಸೆಯ ವಿಧಾನವಾಗಿದೆ. ಸಾಮಾನ್ಯವಾಗಿ ಅಮೆರಿಕ ಅಥವಾ ಬ್ರಿಟನ್ ದೇಶದಲ್ಲಿ ಅಕ್ರಮವಾಗಿ ನೆಲಸಲು ಬಯಸುವವರು ಈ ಮಾರ್ಗ ಅನುಸರಿಸುತ್ತಾರೆ.

ಗೋವಿಂದ ಭಟ್ಟರ ದತ್ತಿ ಪ್ರಶಸ್ತಿಗೆ ಶ್ರೀಹರಿ ಖೋಡೆ ಆಯ್ಕೆ



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹೊಸದಾಗಿ ಸ್ಥಾಪಿಸಿರುವ 'ಸಂತ ಶಿಶುನಾಳ ಶರೀಫ ಮತ್ತು ಅವರ ಗುರುಗಳಾದ ಕಳಸದ ಗೋವಿಂದ ಭಟ್ಟರ ದತ್ತಿ' ಪುರಸ್ಕಾರಕ್ಕೆ ಯಜಮಾನ್ ಎಂಟರ್‌ಪ್ರೈಸಸ್ ಸಂಸ್ಥೆಯ ದಿವಂಗತ ಶ್ರೀಹರಿ ಖೋಡೆ ಅವರನ್ನು ಆಯ್ಕೆ ಮಾಡಲಾಗಿದೆ.

ಶ್ರೀಹರಿ ಖೋಡೆ ಅವರು ಸಾವಿರಕ್ಕೂ ಹೆಚ್ಚು ಗೀತೆಗಳನ್ನು ಬರೆದಿದ್ದರು. ಕಾವೇರಿ ದಂಡೆಯಲ್ಲಿ ಅವರು ಜೀರ್ಣೋದ್ಧಾರಗೊಳಿಸಿದ ವೇಣುಗೋಪಾಲ ಸ್ವಾಮಿ ದೇಗುಲ ಉತ್ತಮ ವಾಸ್ತುಶಿಲ್ಪ ಎನ್ನಿಸಿಕೊಂಡಿದೆ.

'ಮೈಸೂರು ಮಲ್ಲಿಗೆ', 'ನಾಗಮಂಡಲ' ಚಿತ್ರಗಳನ್ನು ನಿರ್ಮಿಸಿರುವ ಅವರು, 2016ರಲ್ಲಿ ನಿಧನರಾದರು. ಅವರ ಪರಂಪರೆಯನ್ನು 'ಯಜಮಾನ್ ಎಂಟರ್‌ಪ್ರೈಸಸ್' ಮುಂದುವರಿಸುತ್ತಿದೆ. ಹೀಗಾಗಿ ಅವರದ್ದೇ ಆದ ಈ ಸಂಸ್ಥೆ, ಅವರ ಹೆಸರು ಎರಡನ್ನೂ ಸೇರಿಸಿ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದೆ.

ಇನ್‌ಸ್ಪೆಕ್ಟರ್, ಎಎಸ್‌ಐ ಅಮಾನತು

ಮಹಿಳೆ ಮೇಲೆ ಅತ್ಯಾಚಾರ, ಲೈಂಗಿಕ ದೌರ್ಜನ್ಯ ಪ್ರಕರಣ

ಪ್ರಜಾವಾಣಿ ವಾರ್ತೆ



ಸುನಿಲ್

ಬೆಂಗಳೂರು: ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಆರೋಪದಡಿ ದೇವರ ಜೀವನಹಳ್ಳಿ (ಡಿಜೆ ಹಳ್ಳಿ) ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸುನಿಲ್ ಮತ್ತು ಸಹಾಯಕ ಸಬ್ ಇನ್‌ಸ್ಪೆಕ್ಟರ್ ಪ್ರಕಾಶ್ ಅವರನ್ನು ಅಮಾನತುಗೊಳಿಸಿ, ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಅವರು ಸೋಮವಾರ ಆದೇಶಿಸಿದ್ದಾರೆ.

ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ 36 ವರ್ಷದ ಮಹಿಳೆಯೊಬ್ಬರು ರಾಜ್ಯ ಪೊಲೀಸ್ ಮಹಾ ನಿರ್ದೇಶಕರಿಗೆ ಲಿಖಿತ ದೂರು ನೀಡಿದ್ದರು. ಈ ಸಂಬಂಧ ಗೋವಿಂದಪುರ ಠಾಣೆಯಲ್ಲಿ ಇಬ್ಬರು ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಾಗಿತ್ತು. ಇದರ ಬೆನ್ನಲ್ಲೇ ಇಬ್ಬರು ಅಧಿಕಾರಿಗಳನ್ನು ಅಮಾನತುಗೊಳಿಸಿ ಆದೇಶಿಸಲಾಗಿದೆ.

'ಉಪನೋಂದಣಾಧಿಕಾರಿ ಕಚೇರಿಯಲ್ಲಿ ಮದುವೆ ಆಗುವುದಾಗಿ ಸುನಿಲ್ ಅವರು ನಂಬಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದರು. ಫೋಟೊ ಹಾಗೂ ವಿಡಿಯೊ ಇಟ್ಟುಕೊಂಡು ಹೆದರಿಸುತ್ತಿದ್ದು, ವಿಷಯ ಬಹಿರಂಗಪಡಿಸಿದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕುತ್ತಿದ್ದಾರೆ' ಎಂದು ಆರೋಪಿಸಿ ಮಹಿಳೆ ದೂರು ನೀಡಿದ್ದರು.

'ಮನೆ ಕೊಡಿಸುತ್ತೇನೆ, ಬ್ಯೂಟಿ ಪಾರ್ಲರ್ ನಿರ್ಮಿಸಿ ಕೊಡುತ್ತೇನೆ ಎಂದು ಹೇಳಿ ಎಂಟನೇ ಮೈಲಿಯಲ್ಲಿರುವ ಮನೆ ಹಾಗೂ ಹೋಟೆಲ್‌ಗೆ ಕರೆದೊಯ್ದು ದೈಹಿಕ ಸಂಪರ್ಕ ಬೆಳೆಸಿದ್ದರು' ಎಂದೂ ದೂರಿನಲ್ಲಿ ಉಲ್ಲೇಖಿಸಿದ್ದರು.

'ಪ್ರತಿ ಬಾರಿ ಫೋನ್ ಮಾಡಿದಾಗಲೂ ವಿಡಿಯೊ ಕಾಲ್ ಮಾಡಿ ನಗ್ನಗೊಳ್ಳುವಂತೆ ಒತ್ತಾಯಿಸಿದ್ದರು. ಈ ವಿಚಾರ ತಿಳಿದ ಅದೇ ಠಾಣೆಯ ಎಎಸ್‌ಐ ಪ್ರಕಾಶ್ ಅವರು, 'ಸುನಿಲ್‌ಗೆ ಸಹಕಾರ ನೀಡಿದ್ದೀಯಾ. ನನಗೆ ಏಕೆ ಸಹಕಾರ ನೀಡುವುದಿಲ್ಲ' ಎಂದು ಬೆದರಿಸಿ ಲೈಂಗಿಕ ಕಿರುಕುಳ ನೀಡಿದ್ದರು' ಎಂದು ಸಂತ್ರಸ್ತೆ ಆರೋಪಿಸಿ ಗೋವಿಂದಪುರ ಠಾಣೆಯಲ್ಲಿ ದೂರು ನೀಡಿದ್ದರು. ವಾಟ್ಸ್‌ಆ್ಯಪ್ ಸಂದೇಶಗಳನ್ನೂ ಮಹಿಳೆ ಬಹಿರಂಗಪಡಿಸಿದ್ದರು ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ನಾಲ್ಕು ಜೀವಂತ ಗುಂಡು, ಪಿಸ್ತೂಲ್ ಜಪ್ತಿ



ರೋಷನ್



ಪಿಸ್ತೂಲ್, 4 ಜೀವಂತ ಗುಂಡುಗಳು

ಪಿಸ್ತೂಲ್ ಹಾಗೂ ಜೀವಂತ ಗುಂಡುಗಳನ್ನು ಇಟ್ಟುಕೊಂಡು ತನ್ನ ವಿರೋಧಿಗಳನ್ನು ಬೆದರಿಸುತ್ತಿದ್ದ ಆರೋಪಿಯನ್ನು ಸಿಸಿಬಿಯ ಸಂಘಟಿತ ಅಪರಾಧ ದಳದ (ಪೂರ್ವ) ಸಿಬ್ಬಂದಿ ಸೋಮವಾರ ಬಂಧಿಸಿದ್ದಾರೆ.

ರೋಷನ್ ಅಹಮದ್ ಅಲಿಯಾಸ್ ಬಾಬನ್ ಬಂಧಿತ.

ಆರೋಪಿಯಿಂದ ಪಿಸ್ತೂಲ್ ಹಾಗೂ ನಾಲ್ಕು ಜೀವಂತ ಗುಂಡು ಜಪ್ತಿ ಮಾಡಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದರು.

ಆರೋಪಿ ಪಿಸ್ತೂಲ್ ಇಟ್ಟುಕೊಂಡು ದುಷ್ಕೃತ್ಯ ಎಸಗಲು ಸಂಚು ರೂಪಿಸಿದ್ದ ಬಗ್ಗೆ ಪೊಲೀಸ್ ಬಾತ್ಮೀದಾರರಿಂದ ಖಚಿತ ಮಾಹಿತಿ ಬಂದಿತ್ತು. ಆ ಮಾಹಿತಿ ಆಧರಿಸಿ ಸುದ್ದಗುಂಟೆಪಾಳ್ಯದ ಇಂಡಿಯನ್ ಆಯಿಲ್ ಪೆಟ್ರೋಲ್ ಬಂಕ್ ಬಳಿಯಿರುವ ಖಾಲಿ ಜಾಗದಲ್ಲಿ ಆರೋಪಿ ಇರುವುದು ಗೊತ್ತಾಗಿತ್ತು. ಆ ಸಂದರ್ಭದಲ್ಲಿ ಕಾರ್ಯಾಚರಣೆ ನಡೆಸಿ, ಆರೋಪಿಯನ್ನು ಬಂಧಿಸಲಾಯಿತು ಎಂದು ಅವರು ಹೇಳಿದರು.

'ಮಧ್ಯಪ್ರದೇಶದಲ್ಲಿ ಪರಿಚಯವಿದ್ದ ವ್ಯಕ್ತಿಯಿಂದ ಪಿಸ್ತೂಲ್ ತರಿಸಿಕೊಂಡಿದ್ದೆ. ಪಿಸ್ತೂಲ್ ಇಟ್ಟುಕೊಂಡು ತನ್ನ ವಿರೋಧಿಗಳನ್ನು ಹೆದರಿಸುತ್ತಿದ್ದೆ. ಅಲ್ಲದೇ ಅಪರಾಧ ಕೃತ್ಯ ಎಸಗಲು ಪಿಸ್ತೂಲ್ ಬಳಕೆ ಮಾಡಿಕೊಳ್ಳುತ್ತಿದ್ದೆ ಎಂಬುದಾಗಿ ಆರೋಪಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿದ್ದಾನೆ' ಎಂದು ಅವರು ಮಾಹಿತಿ ನೀಡಿದರು.

'ಡ್ರಗ್ಸ್ ಮಾರಾಟ ಪ್ರಕರಣದಲ್ಲಿ ಈ ಹಿಂದೆ ಆರೋಪಿಯನ್ನು ಮೈಕೊ ಲೇಔಟ್ ಠಾಣೆಯ ಪೊಲೀಸರು ಬಂಧಿಸಿದ್ದರು' ಎಂದು ಮೂಲಗಳು ಹೇಳಿವೆ.

ಯುವತಿ ಆತ್ಮಹತ್ಯೆ

ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯ ಕೃಷ್ಣಗಾರ್ಡನ್ ಒಂದನೇ ಕ್ರಾಸ್ ನಿವಾಸಿ ಅರ್ಪಿತಾ (24) ಅವರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಕಾಡುಕೊತ್ತನಹಳ್ಳಿಯ ಪರಮೇಶ್ ಪುತ್ರಿ ಅರ್ಪಿತಾ ಅವರು ಚಿಕ್ಕಪ್ಪ ಬಸವರಾಜ್ ಮನೆಯಲ್ಲಿ ವಾಸವಿದ್ದರು. ವೈದ್ಯಕೀಯ ಕಾಲೇಜೊಂದರಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

'ಮಾರುಕಟ್ಟೆಗೆ ಹೋಗಲು ಭಾನುವಾರ ಮಧ್ಯಾಹ್ನ ಅರ್ಪಿತಾ ಅವರನ್ನು ಚಿಕ್ಕಮ್ಮ ಕರೆದಿದ್ದರು. ಆಗ ನನಗೆ ಆರೋಗ್ಯ ಸರಿಯಿಲ್ಲ. ಮನೆಯಲ್ಲೇ ಇರುವುದಾಗಿ ಯುವತಿ ಹೇಳಿದ್ದರು' ಎಂದು ಮೂಲಗಳು ಹೇಳಿದರು.

'ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಕಬ್ಬಿಣದ ಕೊಂಡಿಗೆ ದುಪ್ಪಟ್ಟದಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು. 'ಅರ್ಪಿತಾ ಅವರು ಖಿನ್ನತೆಗೆ ಒಳಗಾಗಿದ್ದರು. ಅದೇ ಕಾರಣದಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದು' ಎಂದು ಶಂಕಿಸಲಾಗಿದೆ.

ಕೆಂಗೇರಿ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಸುದ್ದಿ 2 ನಿಮಿಷ

ವಿದೇಶಿ ಮಹಿಳೆಗೆ ಕಿರುಕುಳ ಫುಡ್ ಡೆಲಿವರಿ ಹುಡುಗನ ಸೆರೆ

ಬೆಂಗಳೂರು: ಬ್ರೆಜಿಲ್ ದೇಶದ ಮಹಿಳೆಗೆ ಲೈಂಗಿಕ ಕಿರುಕುಳ ನೀಡಿದ್ದ ಆರೋಪದಡಿ ಫುಡ್ ಡೆಲಿವರಿ ಹುಡುಗನನ್ನು ಆರ್.ಟಿ.ನಗರ ಪೊಲೀಸರು ಬಂಧಿಸಿದ್ದಾರೆ.

ಕುಮಾರ್ (22) ಬಂಧಿತ ಆರೋಪಿ.ಕಿರುಕುಳಕ್ಕೆ ಒಳಗಾದ ವಿದೇಶಿ ಮಹಿಳೆ ಕೆಲಸ ಮಾಡುತ್ತಿದ್ದ ಕಂಪನಿಯ ಸಹೋದ್ಯೋಗಿ ಕಾರ್ತಿಕ್ ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಉದ್ಯೋಗ ವೀಸಾದ ಅಡಿ ಎರಡು ತಿಂಗಳ ಹಿಂದೆ ಸಂತ್ರಸ್ತೆ ನಗರಕ್ಕೆ ಬಂದಿದ್ದರು. ಅ.17ರಂದು ಸಂತ್ರಸ್ತೆ ತಮ್ಮ ಮೊಬೈಲ್‌ನಲ್ಲಿ ದಿನಸಿ ವಸ್ತುಗಳಿಗೆ ಆರ್ಡರ್ ಮಾಡಿದ್ದರು. ಅದೇ ದಿನ ಸಂಜೆ ಬುಕ್ ಮಾಡಲಾಗಿದ್ದ ದಿನಸಿ ವಸ್ತುವನ್ನು ಆರೋಪಿ ಡೆಲಿವರಿಗಾಗಿ ಮನೆಯ ಬಾಗಿಲಿಗೆ ಬಂದಿದ್ದ. ಡೆಲಿವರಿ ನೀಡುವಾಗ ಮಹಿಳೆಯೊಂದಿಗೆ ಅನುಚಿತವಾಗಿ ವರ್ತಿಸಿ ದೇಹದ ಭಾಗಗಳನ್ನು ಸ್ಪರ್ಶಿಸಿ ಲೈಂಗಿಕ ಕಿರುಕುಳ ನೀಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.



ನಾಯಿ ಸಾವು: ದಂಪತಿ ವಿರುದ್ಧ ಪ್ರಕರಣ ದಾಖಲು

ಬೆಂಗಳೂರು: ದತ್ತು ಪಡೆದ ನಾಯಿಗೆ ಚಿತ್ರ ಹಿಂಸೆ ನೀಡಿ ಸಾಯಿಸಿದ ಆರೋಪಕ್ಕೆ ಸಂಬಂಧಿಸಿದಂತೆ ದಂಪತಿ ವಿರುದ್ಧ ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಾಮಾಜಿಕ ಕಾರ್ಯಕರ್ತ ಎ.ಎಸ್.ಶರತ್ ಲಾಲ್ ಅವರ ದೂರಿನ ಮೇರೆಗೆ ಅನುಭವ ಕಬರ ಮತ್ತು ಅವರ ಪತ್ನಿ ಕೃತಿ ಲಬ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

2021ರಲ್ಲಿ ಸ್ವರ್ಣಿಮಾ ನಿಶಾಂತ್ ಅವರಿಂದ ಅನುಭವ ಮತ್ತು ಕೃತಿ ಅವರು ಬೊಂಗೊ ಹೆಸರಿನ ನಾಯಿಯನ್ನು ದತ್ತು ಪಡೆದು, ಅದರ ಪಾಲನೆಯ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದರು. ಅಕ್ಟೋಬರ್ 23ರಂದು ಸ್ವರ್ಣಿಮಾ ಅವರು ಅನುಭವ ಅವರಿಗೆ ಕರೆ ಮಾಡಿ ನಾಯಿ ಬಗ್ಗೆ ವಿಚಾರಿಸಿದಾಗ, ಅದನ್ನು ಬೀದಿಗೆ ಬಿಟ್ಟು, ಹಿಂಸೆ ನೀಡಿ ಸಾಯಿಸಿರುವ ವಿಚಾರ ಗೊತ್ತಾಗಿದೆ ಎಂದು ಶರತ್ ದೂರಿನಲ್ಲಿ ತಿಳಿಸಿದ್ದಾರೆ.

ನಾಯಿಗೆ ಹಿಂಸೆ ನೀಡಿದ್ದಲ್ಲದೇ, ಅದನ್ನು ಬಿಸಾಡಿದ ಜಾಗದಲ್ಲಿನ ಜನರಿಗೂ ತೊಂದರೆ ಉಂಟು ಮಾಡಿದ್ದಾರೆ. ಈ ಬಗ್ಗೆ ಸೂಕ್ತ ತನಿಖೆ ನಡೆಸಿ, ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದಾರೆ. ಶರತ್ ದೂರಿನ ಮೇರೆಗೆ ವಿಚಾರಣೆಗೆ ಬರುವಂತೆ ದಂಪತಿಗೆ ನೋಟಿಸ್ ನೀಡಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ.

ದಲಿತ ಸಂಘಟನೆಗಳ ಸ್ವಾಭಿಮಾನಿ ಒಕ್ಕೂಟದಿಂದ ಪ್ರತಿಭಟನೆ

ಶೂ ಎಸೆಯಲು ಯತ್ನ: ಬಂಧನಕ್ಕೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ಶೂ ಎಸೆಯಲು ಯತ್ನಿಸಿದ ವಕೀಲ ರಾಕೇಶ್ ಕಿಶೋರ್ ಅವರನ್ನು ಬಂಧಿಸಿ, ಶಿಕ್ಷೆ ವಿಧಿಸಬೇಕು ಎಂದು ಆಗ್ರಹಿಸಿ ದಲಿತ ಸಂಘಟನೆಗಳ ಸ್ವಾಭಿಮಾನಿ ಒಕ್ಕೂಟ ಸೋಮವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲು ಹಂಚಿಕೆ ಮಾಡಿ ಈಗಾಗಲೇ ಹೊರಡಿಸಿರುವ ಆದೇಶಕ್ಕೆ ಪೂರಕವಾಗಿ ಮೂಲ ಜಾತಿ, ಪ್ರವರ್ಗದಡಿ ಜಾತಿ ಪ್ರಮಾಣಪತ್ರ ಪಡೆಯಲು ಅವಕಾಶ ಕಲ್ಪಿಸಿ ಸರ್ಕಾರ ಸುತ್ತೋಲೆ ಹೊರಡಿಸಿದೆ. ಇದರೊಂದಿಗೆ ಒಳಮೀಸಲು ಸಮೀಕ್ಷೆಯಲ್ಲಿ ಮೂಲ ಜಾತಿ ತಿಳಿಸದವರಿಗೂ ಜಾತಿ ಪ್ರಮಾಣ ಪತ್ರ ಪಡೆಯಲು ಇರುವ ಅಡ್ಡಿ, ಆತಂಕಗಳನ್ನು ನಿವಾರಿಸಲಾಗಿದೆ. ಬ್ಯಾಕ್‌ಲಾಗ್ ಹುದ್ದೆ ಭರ್ತಿಗೆ ಕ್ರಮ ಕೈಗೊಳ್ಳದ ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಎಚ್.ಸಿ. ಮಹದೇವಪ್ಪ ರಾಜೀನಾಮೆ ನೀಡಬೇಕು ಎಂದು ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಜೀವನಹಳ್ಳಿ ನಾರಾಯಣ ಅವರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ದಸಂಸ ಮೀಸಲಾತಿ ರಾಜ್ಯ ಘಟಕದ ಅಧ್ಯಕ್ಷ ವೈ.ರಾಜಣ್ಣ, ಜೈಭೀಮ್ ಜನಪರ ವೇದಿಕೆ ಅಧ್ಯಕ್ಷ ಮನೋಜ್ ಕುಮಾರ್, ಅಖಿಲ ಕರ್ನಾಟಕ ದಲಿತ ಕ್ರಿಯಾ ಸಮಿತಿ ಅಧ್ಯಕ್ಷ ಬಾಬು ಜಾಲಹಳ್ಳಿ, ಒಕ್ಕೂಟದ ರಾಜ್ಯ ಉಪಾಧ್ಯಕ್ಷ ರೀಗನ್ ಸ್ಟೀಫನ್, ಮ.ಸು.ಮಣಿ, ದುರ್ಗಮೂರ್ತಿ ಭಾಗವಹಿಸಿದ್ದರು.



ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ದಲಿತ ಸಂಘಟನೆಗಳ ಒಕ್ಕೂಟ ಪ್ರತಿಭಟನೆ ನಡೆಸಿತು ಪ್ರಜಾವಾಣಿ ಚಿತ್ರ

ಕೆರೆಗಳ ಅಭಿವೃದ್ಧಿಗೆ ಆದ್ಯತೆ, ಒತ್ತುವರಿಗೆ ಕ್ರಮ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: 'ಕ್ಷೇತ್ರದ ಕೆರೆಗಳ ಅಭಿವೃದ್ಧಿಗಾಗಿ ಆದ್ಯತೆ ನೀಡುತ್ತಿದ್ದು, ಕೆರೆಯ ಒತ್ತುವರಿಯನ್ನು ತಡೆಯಲು ತಂತಿಬೇಲಿ ಹಾಕಲಾಗುತ್ತಿದೆ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ಕ್ಷೇತ್ರದ ನೆಲಗದರನಹಳ್ಳಿ, ಶಿವಪುರ, ಅಬ್ಬಿಗೆರೆ ಕೆರೆಗಳ ಸುತ್ತ ತಂತಿ ಬೇಲಿ ಅಳವಡಿಕೆ ಮತ್ತು ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು. ಕಮ್ಮಗೊಂಡನಹಳ್ಳಿಯ ಕೆರೆ ಅಭಿವೃದ್ಧಿಯನ್ನು ಅಧಿಕಾರಿಗಳೊಂದಿಗೆ ಮುನಿರಾಜು ಪರಿಶೀಲಿಸಿದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

NOTICE is hereby given to the public that we are investigating the right, title, interest, benefits, and entitlements of whatsoever nature of the respective Owners of lands situated at Thigalachowdenahalli Village, Sarjapura Hobli, Anekal Taluk, Bangalore Urban District, which is more particularly described in the Schedule hereunder written and hereinafter collectively called "Schedule Property". Our client ("Client") intends to develop the Schedule Property by entering into a Joint Development Agreement with the owners and the owners have represented that they are the absolute owners of Schedule Property and that they have rights to alienate their share of portion in the Schedule Property.

ALL persons including an individual, a Hindu Undivided Family, a company, banks, financial institution(s), non- banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of Schedule Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, bequest, succession, family arrangement, grant, possession, lease, sub-lease tenancy, sub-tenancy, maintenance easement, license, bequeath, share, assignment, lien, attachment, development rights, covenant, settlement right of way, lis pendens, reservation, agreement, FSI consumption, development rights, order/decree/judgement of court or any liability or commitment or otherwise or demand of any nature whatsoever are hereby requested to inform the same in writing, supported with the original documents, to the undersigned having their office at 6/12, Gurappa Avenue, Primrose Road Bengaluru 560025 within a period of 14 (Fourteen) days from the date of publication of this notice, failing which, the claim or claims, if any, of such person or persons shall be considered to have been waived and/or abandoned and our Client would be at liberty to proceed with the transaction in connection with the Schedule Property.

SCHEDULE PROPERTY

ALL THAT PIECE AND PARCEL of the below detailed land parcels, all situated in at Thigalachowdenahalli Village, Sarjapura Hobli, Anekal Taluk, Bangalore Urban District, Karnataka and bounded by :

Sl No.	Sy. Nos of Thigalachowdenahalli	Land Area	Boundaries (East: E, West: W, North: N & South: S)	Land Owner
1	114/5	01 Acre 35 Guntas out of 02 Acre 24 Guntas	E: Land in Sy No.114/6, 114/8 & 114/9 W: Land in Survey No. 114/4 N: Land in Survey No. 113/2 and 113/4 S: Remaining Land in Survey No. 114/5	Mr.D.V.Suresh S/o N Venkata swamy Reddy
2	114/6	06 Guntas including 0.12 Guntas of karab land out of 01 Acre 06 Guntas	E: Road, W: Land in Survey No.114/5 N: Land in Survey No.113 S: Remaining portion of land in Survey No.114/6	Mrs. Archana B.N Raj d/o B.N Nagaraj.
3	113/3	2.08 Guntas	E: Road, W: Land in Survey No. 113/4 N: Land in Survey No.113/2 S: Land in Sy No.114/6	Mr. C Ashwin S/o D.V Cheluvaraju
4	113/4	2.12 Guntas including 0.4 guntas of karab land	E: Land in Survey No.113/3 W: Land in Survey No.113/2 N: Land in Survey No.113/2 S: Land in Survey No.114/5 and 114/6	Mr. D.V Murali s/o N Venkata swamy Reddy
Total Extent		2 Acre 6.04 Guntas including 01 gunta of karab land		

Dated: 28/10/2025
Bangalore

Mr. S T Prashantha Kumar, Advocate/Senior Partner
Mr. Mali Pavan Gowda, Advocate/G-Head
Fox Mandal & Associates, Solicitors & Advocates,
FM House, 6/12, Primrose Road, Bangalore – 560025, Karnataka, India
Phone: +91 80 2559 5911 **e-mail :** prashantha.kumar@foxmandal.in

BUSINESS

Business to Business

Business

PROPERTY COLLATERALS/ Joint Ventures/ Takeovers/ Training/ New Ideas/ Finance for Big Projects. Dr. Swamy Naidu, Vamshadhara Projects & Services:- 9342247637.

PERSONAL

Change of Name

CHANGE OF NAME
I, **PADMA ASHOK,** residing at # 1128-S, Magadi Main Road, BEL Layout 2nd Phase, Bharath Nagar, Bengaluru- 560091, have changed my name to **PADMA BANGALORE SUBRAMANYA** vide affidavit dated 25-10-2025 before notary N. Kanchivaradaraju, Bengaluru. Henceforth I shall be called **PADMA BANGALORE SUBRAMANYA** only.


TRUPTHI #4, 1st Floor 17th Cross 23rd Main Ayodhyanagar, JP Nagar 5th Phase Bengaluru-78, Have changed my name to TRUPTHI Y vide affidavit dated- 25/10/2025

CHANGE OF NAME
I, **Remya Rethy @ Remya Rajammal,** residing at Jai Bharathi Signature, Dodda Kempaiah Layout, Near Kalkere Petrol Bunk, Kalkere, Horamavu, Bengaluru-560043, declare that the above names pertain to me only & henceforth I shall be known as **REMYA RETHY** vide affidavit dated 23.10.2025 before notary Uday Kumar K, Bengaluru.

I,REVATHY SUBRAMANIAN W/o.Subramanian G. residing at Flat No.411, Tower-3, Deccan Habitat Apartments, Raghavendra Layout, Pipeline Road, Next to National Public School, Yeshwanthpura, Bengaluru-560022, have changed my name from REVATHY SUBRAMANIAN to REVATHY V.S. vide affidavit dated:25.10.2025 before Notary, Chandrakala, Bengaluru. Henceforth I shall be called REVATHY V.S. only in all documents.

CONNECT

85TH BIRTHDAY WISHES



SRI A. J. PADMANABHAN (Ex-Mico)
28-10-2025
Wishes from:
Wife: Smt. AP Sujaya Lakshmi, Sons: A P Purushotham & Smt. P. Jayanthi, A.P. Someshwar & Smt. S Shashikala, Grand Daughters: Puja, Tejaswini, Grand Sons: Rishabh, Sanuj - Australia, Brother-in-Law: S. Ramalingam
Sisters: Smt. Jayashree Ramalingam, Smt. Vijayalakshmi
Ph: 9916194468, 9916194755

CHANGE OF NAME
I, Shabrish P, R/a #26, 3rd Floor, 2nd Main Thimmareddy Layout, Kallumantapa, Horamavu, Bangalore-43, declare and confirm that my name is also **Shabrish S,** as my father's name **Parimalam Thyagarajan & Suresh T** refer to one and the same person. **Shabrish S** and **Shabrish P** is one and the same person. Vide affidavit dt: 18-10-2025, before notary Y R Chandrashekar, Bangalore. Henceforth I shall be called **Shabrish S** only

I RAHUL THIMMAIAH, Residing at No. G208, DSR Greenfields, Immadihalli Road, Bengaluru- 560066, have changed to New name RAHUL THIMMAIAH K, vide affidavit dated 25/10/2025, before notary Veena J, Bangalore.

CHANGE OF NAME
I, **SHANTAMMA** spouse of JC-192782-N Subedar SIDDA BASAPPA BASAVARAJ, R/at House No.34, 13th Cross, Manjunatha Nagar, Kalkere Extn. Ramamurthy Nagar, Bangalore-16, have changed my name to **SHANTHA BASAVARAJ** and my date of birth/year of birth in the husband's PPO No. S/029506/1996 (Army) service record mentioned as 1953 and correct date of birth is **22-09-1951** affidavit dtd: 27/10/2025 before Notary B.V. Nagabhushana, Bengaluru.

I, GURUPRASAD H K, S/o. Hemanagowda, have changed my name to GURUPRASADA HEMANAGOWDA KADURA vide affidavit dated 23/10/2025 before notary M. Rajendra, Bangalore.

PRASHANT KERUR #509, Vishwotthama Apartment, JP Nagar near Jambusavaridinne Bus Stand, Bengaluru-83, have changed my name to PRASHANT GURURAJ KERUR Vide affidavit dated- 25/10/2025.

I, VEENAKUMARI SURESHA R/a.#303, Arha AGS Layout, BSK 3rd Stage, Bengaluru 560061,have changed name VEENA SURESH vide affidavit 27.10.2025 before Notary Hemalatha, Bengaluru.

DAKSHAYANI SRINATHA #93, Near Lakshmivenkateswara Temple, Mangammanapalya, Bommanahalli, Bengaluru-68, have changed my name to DHAKSHAYANI Vide affidavit dated- 21/10/2025.

I, VIJAYAKUMAR BETTAKOTE RAMAKRISHNAPPA, Residing At No.28, Bettakote Village and Post, Devanahalli Taluk 562129, have changed my name to VIJAY KUMAR BETTAKOTE RAMAKRISHNAPPA Vide Affidavit dated 25.10.2025 sworn before advocate and notary K.H. Venkatappa, Chickaballapur.

ಗ್ರಾ.ಪಂ ಸದಸ್ಯನಿಗೆ ಗುಂಡೇಟು

ಪ್ರಜಾವಾಣಿ ವಾರ್ತೆ



ಸಲೀಂ ಪಾಷಾ

ನೆಲಮಂಗಲ: ತಾಲ್ಲೂಕಿನ ಕಣೇಗೌಡನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯ ಸಲೀಂ ಪಾಷಾ ಅವರ ಮೇಲೆ ಇಬ್ಬರು ಅಪರಿಚಿತರು ಗುಂಡಿನ ದಾಳಿ ನಡೆಸಿ, ಪರಾರಿ ಆಗಿರುವ ಘಟನೆ ಭಾನುವಾರ ರಾತ್ರಿ ನಡೆದಿದೆ.

ಪ್ರಾರ್ಥನೆ ಮುಗಿಸಿಕೊಂಡು ಇಸ್ಲಾಂ ಪುರದಲ್ಲಿ ಇರುವ ಮನೆಗೆ ಬಂದಿದ್ದ ಸಲೀಂ ಅವರು ಮನೆಯ ಹೊರಗೆ ಕೆಲವರೊಂದಿಗೆ ಮಾತನಾಡುತ್ತಾ ಕುಳಿತಿದ್ದರು. ಆ ಸಂದರ್ಭದಲ್ಲಿ ಬಂದಿದ್ದ ದುಷ್ಕರ್ಮಿಗಳು, ಮಾತನಾಡಿಸುವ ನೆಪದಲ್ಲಿ ಸಲೀಂ ಪಾಷಾ ಅವರ ಬಳಿ ಬಂದಿದ್ದರು. ಆಗ ಸಲೀಂ ಅವರತ್ತ ಏಕಾಏಕಿ ಗುಂಡು ಹಾರಿಸಿ ಪರಾರಿ ಆಗಿದ್ದಾರೆ. ಕೈಗೆ ಗುಂಡು ತಗುಲಿದ್ದು, ಅವರನ್ನು ತಕ್ಷಣವೇ ಸ್ಥಳೀಯರು ಪಟ್ಟಣದ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದಾರೆ. ಚಿಕಿತ್ಸೆ ಪಡೆಯುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಮೂಲಗಳು ಹೇಳಿವೆ.

ಡಿವೈಎಸ್ಪಿ ಜಗದೀಶ್ ಅವರ ನೇತೃತ್ವದ ತಂಡ ತನಿಖೆ ನಡೆಸುತ್ತಿದೆ. ಆಸ್ಪತ್ರೆಗೆ ಭೇಟಿ ನೀಡಿ ಸಲೀಂ ಅವರ ಹೇಳಿಕೆ ಪಡೆದುಕೊಳ್ಳಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ.ಬಾಬಾ ಅವರು ಸ್ಥಳಕ್ಕೆ ಭೇಟಿ ನೀಡಿ ಮಾಹಿತಿ ಕಲೆಹಾಕಿದರು.

ಆರೋಪಿಗಳ ಪತ್ತೆಗೆ ಎರಡು ವಿಶೇಷ ಪೊಲೀಸ್ ತಂಡ ರಚಿಸಲಾಗಿದೆ. ನೆಲಮಂಗಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ರಾಜಕೀಯ ದ್ವೇಷದಿಂದ ಘಟನೆ ನಡೆದಿರಬಹುದು ಎಂದು ಶಂಕಿಸಲಾಗಿದೆ.

'ರೌಡಿ ಶೀಟರ್ ಮುಬಾರಖ್ ಎಂಬಾತ ಕೊಲೆ ಆರೋಪದ ಮೇಲೆ ಕಾರಾಗೃಹದಲ್ಲಿದ್ದು, ಪೆರೋಲ್ ಮೇಲೆ ಹೊರಗೆ ಬಂದಿದ್ದ. ಆತನೇ ಕೃತ್ಯ ಎಸಗಿರಬಹುದು ಎಂಬ ಮಾಹಿತಿ ಸಿಕ್ಕಿದೆ. ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಲೋಕಾ' ಹೆಸರಿನಲ್ಲಿ ಎಇಇಗೆ ಕರೆ

ಬೆಂಗಳೂರು: ಲೋಕಾಯುಕ್ತರ ಹೆಸರಿನಲ್ಲಿ ಜಿಬಿಎ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗೆ (ಎಇಇ) ವ್ಯಕ್ತಿಯೊಬ್ಬ ವಂಚಿಸಲು ಯತ್ನಿಸಿದ್ದು, ಈ ಸಂಬಂಧ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಲೋಕಾಯುಕ್ತ ಇನ್‌ಸ್ಪೆಕ್ಟರ್ ಶ್ರೀನಿವಾಸ ದೊಡ್ಡಮನಿ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿಯ ಪತ್ತೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ರಾಜರಾಜೇಶ್ವರಿ ನಗರದ ಸರೋವರ ವಲಯದ ಜಿಬಿಎ ಎಇಇ ವೆಂಕಟೇಶ್ ಅವರ ಮೊಬೈಲ್‌ಗೆ ಆರೋಪಿ ಕರೆ ಮಾಡಿದ್ದ. ಈ ಸಮಯದಲ್ಲಿ ವೆಂಕಟೇಶ್ ಅವರಿಗೆ ಕರೆ ಸ್ವೀಕರಿಸಲು ಸಾಧ್ಯ ಆಗಿರಲಿಲ್ಲ. ಸ್ವಲ್ಪ ಸಮಯದ ಬಳಿಕ ಟ್ರೂಕಾಲರ್‌ನಲ್ಲಿ ಮೊಬೈಲ್ ಸಂಖ್ಯೆ ಪರಿಶೀಲಿಸಿದಾಗ ಲೋಕಾಯುಕ್ತ ಬಿ.ಎಸ್.ಪಾಟೀಲ ಮತ್ತು ಉಪ ಲೋಕಾಯುಕ್ತ ಫಣೀಂದ್ರ ಅವರ ಹೆಸರು ತೋರಿಸುತ್ತಿತ್ತು. ಜತೆಗೆ, ಪ್ರೊಫೈಲ್‌ನಲ್ಲಿ ಲೋಕಾಯುಕ್ತರ ಫೋಟೊ ಇರುವುದು ಕಂಡುಬಂದಿತ್ತು. ಅದಾದ ಮೇಲೆ ಪದೇ ಪದೇ ಸೈಬರ್ ವಂಚಕ ಕರೆ ಮಾಡುತ್ತಿದ್ದ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಅನುಮಾನಗೊಂಡ ವೆಂಕಟೇಶ್ ಅವರು, ಲೋಕಾಯುಕ್ತ ಕಚೇರಿಗೆ ಬಂದು ಮಾಹಿತಿ ನೀಡಿ ವಿಚಾರಿಸಿದ್ದರು. ಅದು ನಕಲಿ ನಂಬರ್ ಎಂಬುದು ಖಚಿತವಾಗಿತ್ತು. ಕೂಡಲೇ ವೆಂಕಟೇಶ್ ಅವರು ಲೋಕಾಯುಕ್ತ ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದರು. ಲೋಕಾಯುಕ್ತ ಇನ್‌ಸ್ಪೆಕ್ಟರ್ ಶ್ರೀನಿವಾಸ ದೊಡ್ಡಮನಿ ಅವರು ವಿಧಾನಸೌಧ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

ಕೊಡಗು ಎಫ್‌ಸಿಗೆ ಸುಲಭ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಗ್ರು ಜೇಮ್ಸ್ (20ನೇ, 42ನೇ ಹಾಗೂ 63ನೇ ನಿ.) ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಕೊಡಗು ಫುಟ್‌ಬಾಲ್ ಕ್ಲಬ್ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 6–0ಯಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಸುಲಭವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಪಂದ್ಯದಲ್ಲಿ ಕೊಡಗು ಎಫ್‌ಸಿ ತಂಡದ ಆಟಗಾರರು ಆರಂಭದಿಂದಲೇ ಹಿಡಿತ ಸಾಧಿಸಿದರು. ಬಿ.ಎಸ್.ಮೃಣಾಲ್ ಮುತ್ತಣ್ಣ (68ನೇ ನಿ.), ಆದಿತ್ಯ ಪ್ರತಾಪ್‌ಸಿಂಗ್ ರಾಥೋಡ್ (23ನೇ ನಿ.) ಹಾಗೂ ಕಾರಿಯಪ್ಪ ಸಿ.ಕೆ. (90 + 2ನೇ ನಿ.) ಅವರು ಜೇಮ್ಸ್ ಅವರಿಗೆ ಉತ್ತಮ ಬೆಂಬಲ ನೀಡಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಸೌತ್ ಯುನೈಟೆಡ್ ಎಫ್‌ಸಿ ತಂಡವು 2–0ಯಿಂದ ರೂಟ್ಸ್ ಎಫ್‌ಸಿ ಎದುರು ಜಯಿಸಿತು. ಸೌತ್ ಯುನೈಟೆಡ್ ತಂಡದ ಫರ್ಹಾನ್ ಫಯಾಜ್ (71ನೇ ನಿ.) ಹಾಗೂ ಮಿಲಿಂದ್ ನೇಗಿ (90 + 1ನೇ ನಿ.) ತಲಾ ಒಂದು ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಸ್ಪೋರ್ಟಿಂಗ್ ಕ್ಲಬ್ ಬೆಂಗಳೂರು ತಂಡವು 1–0ಯಿಂದ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವನ್ನು ಸೋಲಿಸಿತು.

ಮಹಿಳೆಯರ ಮಹತ್ವಾಕಾಂಕ್ಷೆಯ ಕಿಯೋಮಿ: ಬೆಂಗಳೂರಿನಲ್ಲಿ ವಜ್ರಾಭರಣಗಳ ಬೂಟಿಕ್ ಉದ್ಘಾಟಿಸಿದ ನಟಿ ಭಾಗ್ಯಶ್ರೀ



ಬೆಂಗಳೂರು: ಸುಲ್ತಾನ್ ಡೈಮಂಡ್ಸ್ ಆ್ಯಂಡ್ ಗೋಲ್ಡ್‌ನ ಐಷಾರಾಮಿ ಪರಿಕಲ್ಪನೆಯಾಗಿರುವ ಕಿಯೋಮಿ ಡೈಮಂಡ್ಸ್ ಆ್ಯಂಡ್ ಪೋಲ್ಕಿ ಬೂಟೀಕ್‌ನ್ನು ಬಾಲಿವುಡ್‌ನ ಪ್ರಸಿದ್ಧ ನಟಿ ಭಾಗ್ಯಶ್ರೀ ಬೆಂಗಳೂರಿನ ಫೀನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿ ಉದ್ಘಾಟಿಸಿದರು.

'ಅತ್ಯಂತ ವಿಶ್ವಾಸಾರ್ಹವಾಗಿರುವ ಕಿಯೋಮಿ ವಜ್ರಾಭರಣ ಉದ್ಯಮದ ಜತೆ ಬಾಂಧವ್ಯ ಹೊಂದಲು ಸಂತೋಷಪಡುತ್ತಿದ್ದೇನೆ. 2023ರಲ್ಲಿ ಈ ಬ್ರ್ಯಾಂಡ್ ಪ್ರಾರಂಭಿಸಿದ ನಂತರ, ನಗರದ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಬ್ರ್ಯಾಂಡ್‌ಗಳಾದ ಫೀನಿಕ್ಸ್ ಮಾಲ್ ಆಫ್ ಏಷ್ಯಾದಲ್ಲಿ ಕಿಯೋಮಿ ತನ್ನ ಮಳಿಗೆ ತೆರೆದಿರುವುದು ಹೆಮ್ಮೆಯ ಸಂಗತಿ' ಎಂದು ಭಾಗ್ಯಶ್ರೀ ಹೇಳಿದರು.

'ಪ್ರತಿಯೊಬ್ಬ ಮಹಿಳೆಯೂ ಬೇರೆ ಯಾರೂ ಹೊಂದಿರದ ಆಭರಣಗಳನ್ನು ಹೊಂದುವ ಕನಸು ಕಾಣುತ್ತಾರೆ. ಆದರೆ ಸಾಧ್ಯವಾಗುವುದು ಬಹಳ ಕಡಿಮೆ. ಕಿಯೋಮಿಯೊಂದಿಗೆ ಆ ಕನಸು ನನಸಾಗುತ್ತದೆ. ಪ್ರತಿಯೊಂದು ಕಿಯೋಮಿ ಆಭರಣವೂ ವಿಭಿನ್ನ' ಎಂದು ಅವರು ಹೇಳಿದರು.

KYOMI DIAMONDS & POLKI

ಅತ್ಯಾಧುನಿಕ ಮತ್ತು ವೈಯಕ್ತಿಕ ಅಪೇಕ್ಷೆಗಳನ್ನು ಸಾಕಾರಗೊಳಿಸುವ ಕಿಯೋಮಿ ಮಳಿಗೆಯು ವಿಭಿನ್ನತೆಯನ್ನು ಬಯಸುವವರ ಆಭರಣಪ್ರಿಯರಿಗಾಗಿ ವಿನ್ಯಾಸಗೊಳಿಸಲಾಗಿದೆ. ಪ್ರತಿಯೊಂದು ಕಿಯೋಮಿ ಸೃಷ್ಟಿಯು ಅದ್ಭುತವಾಗಿ ಕರಕುಶಲವಾಗಿದ್ದು, ಸೃಜನಶೀಲವಾಗಿದೆ. ಅದೆಂದಿಗೂ ಪುನರಾವರ್ತನೆಯಾಗುವುದಿಲ್ಲ, ಪ್ರತಿಯೊಂದು ತುಣುಕು ಕೂಡಾ ವೈಯಕ್ತಿಕ ಶೈಲಿ ಮತ್ತು ಕಾಲಾತೀತ ಸೌಂದರ್ಯದ ಪ್ರತಿಬಿಂಬವಾಗಿ ಗಮನ ಸೆಳೆಯುತ್ತಿದೆ.

ಉದ್ಘಾಟನೆ ಅಂಗವಾಗಿ ನ.30ರ ತನಕ ವಜ್ರದ ಆಭರಣಗಳ ಮೇಲೆ ಶೇ 20 ವರೆಗಿನ ರಿಯಾಯಿತಿ ಲಭ್ಯವಾಗಲಿದೆ. ಇದು ಅತ್ಯುತ್ತಮವಾದ ಐಷಾರಾಮಿ ಅನುಭವ ನೀಡಲು ಗ್ರಾಹಕರನ್ನು ಕೈಬೀಸಿ ಕರೆಯುತ್ತಿದೆ. ಫೀನಿಕ್ಸ್ ಮಾಲ್ ಆಫ್ ಏಷ್ಯಾದ ಈಡನ್ ಪ್ರದೇಶದ ಮೇಲಿನ ನೆಲಮಹಡಿಯಲ್ಲಿ ಕಿಯೋಮಿ ಮಳಿಗೆ ಆರಂಭಗೊಂಡಿದ್ದು, ವಜ್ರಾಭರಣಗಳ ಆಸಕ್ತರನ್ನು ಸ್ವಾಗತಿಸುತ್ತಿದೆ.

ಇಲ್ಲಿಯ ಪ್ರತಿಯೊಂದು ಆಭರಣವೂ ತನ್ನದೇ ವೈಶಿಷ್ಟ್ಯದ ಕಥೆಯನ್ನು ಸಾರಿ ಹೇಳುತ್ತಿದೆ. ಕರ್ನಾಟಕದ ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿ, ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್, ಹೆಚ್ಚುವರಿ ಅಡ್ವೊಕೇಟ್ ಜನರಲ್ ಶಾಹುಲ್ ಹಮೀದ್ ರೆಹಮಾನ್, ಸುಲ್ತಾನ್ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕ ಡಾ.ಅಬ್ದುಲ್ ರವೂಫ್, ಕಾರ್ಯನಿರ್ವಾಹಕ ನಿರ್ದೇಶಕ ಅಬ್ದುಲ್ ರಹೀಮ್, ಸುಲ್ತಾನ್ ಗ್ರೂಪ್‌ನ ಬೆಂಗಳೂರು ವಿಭಾಗದ ನಿರ್ದೇಶಕ ಅಬ್ದುಲ್ ರಿಯಾಜ್ ಮತ್ತಿತರರು ಉಪಸ್ಥಿತರಿದ್ದರು.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

Kyomi Diamonds & Polki
UG Floor – Eden Area, Phoenix Mall of Asia,
Bengaluru 080-68572785

ಏಷ್ಯನ್ ಯೂತ್ ಗೇಮ್ಸ್‌ಗೆ ಚರಿತಾ

ಪ್ರಜಾವಾಣಿ ವಾರ್ತೆ



ಪೀಣ್ಯ,ದಾಸರಹಳ್ಳಿ: ಬಹ್ರೇನ್‌ನಲ್ಲಿ ನಡೆಯಲಿರುವ ಮೂರನೇ ಏಷ್ಯನ್ ಯೂತ್ ಗೇಮ್ಸ್ ಈಜು ಸ್ಪರ್ಧೆ ವಿಭಾಗದಲ್ಲಿ ಶೆಟ್ಟಿಹಳ್ಳಿಯ ಸರ್. ಎಂ. ವಿಶ್ವೇಶ್ವರಯ್ಯ ವಿದ್ಯಾನಿಕೇತನ ಶಾಲೆಯ 10ನೇ ತರಗತಿಯ ವಿದ್ಯಾರ್ಥಿನಿ ಚರಿತ ಪಣೀಂದ್ರನಾಥ್ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಶಾಲೆಯ ಆಡಳಿತಾಧಿಕಾರಿ ಆರೋಗ್ಯಪ್ಪ ಮಾತನಾಡಿ, 'ನಮ್ಮ ಶಾಲೆಯ ವಿದ್ಯಾರ್ಥಿನಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಲು ಆಯ್ಕೆಯಾಗಿರುವುದು ಹೆಮ್ಮೆಯ ಸಂಗತಿಯಾಗಿದೆ. ಕಠಿಣ ಶ್ರಮದಿಂದ ಅಮೋಘ ಸಾಧನೆ ಮಾಡುವ ಮೂಲಕ ಚರಿತಾ ಪದಕ ಗೆದ್ದು ಬರಲಿ' ಎಂದು ಹಾರೈಸಿದರು.


ಚಿತ್ರಾವಳಿ



ಪಾರ್ಶ್ವವಾಯು ಕುರಿತು ಜಾಗೃತಿ ಮೂಡಿಸಲು ಅಪೊಲೊ ಆಸ್ಪತ್ರೆಯು ಜಯನಗರದ ಕಿತ್ತೂರು ರಾಣಿ ಚನ್ನಮ್ಮ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಪಾರ್ಶ್ವವಾಯು ಜಾಗೃತಿ ಓಟ ಮತ್ತು ನಡಿಗೆ ಕಾರ್ಯಕ್ರಮದಲ್ಲಿ ಸಂಸದ ತೇಜಸ್ವಿ ಸೂರ್ಯ, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್, ಶಾಸಕ ಸಿ.ಕೆ. ರಾಮಮೂರ್ತಿ, ಅಪೊಲೊ ಆಸ್ಪತ್ರೆಯ ಡಾ.ಪಿ. ಸತೀಶ್ಚಂದ್ರ, ಆಸ್ಪತ್ರೆಯ ವಿವಿಧ ವಿಭಾಗದ ಮುಖ್ಯಸ್ಥರು ಭಾಗವಹಿಸಿದ್ದರು



ಬೆಂಗಳೂರಿನ ಆನಂದಪುರ ವಾರಾಣಸಿಯಲ್ಲಿರುವ ವಾಗ್ದೇವಿ ವಿಲಾಸ ಶಾಲೆಯ ವಾರ್ಷಿಕೋತ್ಸವದಲ್ಲಿ ವಾಗ್ದೇವಿ ವಿಲಾಸ ಸಂಸ್ಥೆಗಳ ಅಧ್ಯಕ್ಷ ಕೆ. ಹರೀಶ್, ಸಿಇಒ ಶಾಲೆಟ್, ಪ್ರಾಂಶುಪಾಲೆ ದೇವಜಯಾ ಘೋಷ್, ಆಡಳಿತಾಧಿಕಾರಿ ಪ್ರಮೋದ್ ಭಟ್, ಉಪಪ್ರಾಂಶುಪಾಲ ರಾಘವೇಂದ್ರ ಭಟ್, ಅತಿಥಿ ಮೇಧಾ ಚಿರಂಜೀವಿ ಭಾಗವಹಿಸಿದ್ದರು



ಕೆ. ಮೋಹನ್ ದೇವ್ ಆಳ್ವ ಮತ್ತು ಶೈಲಜಾ ಆಳ್ವ ಟ್ರಸ್ಟ್ ನೀಡುವ ಜೀವಮಾನ ಸಾಧನೆ ಪ್ರಶಸ್ತಿಯನ್ನು ಸುಚಿತ್ರ ಫಿಲ್ಮ್ ಸೊಸೈಟಿ ಅಧ್ಯಕ್ಷ ಎಚ್.ಎನ್. ನರಹರಿ ರಾವ್ ಅವರಿಗೆ ಭಾನುವಾರ ನೀಡಿ ಗೌರವಿಸಲಾಯಿತು. ಸುಚಿತ್ರ ಫಿಲಂ ಸೊಸೈಟಿ ಕಾರ್ಯಕಾರಿ ಸದಸ್ಯ ವಿದ್ಯಾರಣ್ಯ, ಟ್ರಸ್ಟಿ ಮೋಹನ್ ದೇವ್ ಆಳ್ವ, ನಿವೃತ್ತ ಅಧಿಕಾರಿ ಚಿರಂಜೀವ್ ಸಿಂಘ್, ಸೊಸೈಟಿ ಕಾರ್ಯದರ್ಶಿ ಹರೀಶ್ ಮಲ್ಯ ಉಪಸ್ಥಿತರಿದ್ದರು

ಸುರಂಗ ರಸ್ತೆ: ಹೆಬ್ಬಾಳ, ಸ್ಯಾಂಕಿ ಕೆರೆಗೆ ಕಂಟಕ

ಪಥದ ಅಲೈನ್‌ಮೆಂಟ್ ಬದಲಾವಣೆ: ಡಿಪಿಆರ್‌ನಲ್ಲಿಲ್ಲದ ರ‍್ಯಾಂಪ್, ಕೆರೆ ಪಕ್ಕದಲ್ಲೇ ನಿರ್ಗಮನಕ್ಕೆ ಯೋಜನೆ

• ಆರ್. ಮಂಜುನಾಥ್

ಬೆಂಗಳೂರು: ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗಿನ ಸುರಂಗ ರಸ್ತೆಗೆ ಟೆಂಡರ್ ತೆರೆಯುವ ಸಮಯ ಹತ್ತಿರವಾಗುತ್ತಿದ್ದರೂ, ಅಲೈನ್‌ಮೆಂಟ್ ಬದಲಾವಣೆ ನಡೆಯುತ್ತಲೇ ಇದೆ. ಬದಲಾದ ಯೋಜನೆಯಿಂದ ಹೆಬ್ಬಾಳ ಕೆರೆಗೆ ಸಮಸ್ಯೆ ಹೆಚ್ಚಾಗಿದ್ದರೆ, ಸ್ಯಾಂಕಿ ಕೆರೆಯ ಮೂಲಕ್ಕೇ ಕಂಟಕ ಎದುರಾಗಿದೆ.

ಸ್ಯಾಂಕಿ ಕೆರೆಯ ದಡದ ಮೇಲೆ ಸ್ಯಾಂಕಿ ರಸ್ತೆ ವಿಸ್ತರಣೆ ಹಾಗೂ ಮೇಲ್ಸೇತುವೆ ನಿರ್ಮಿಸಲು 2023ರಲ್ಲಿ ಬಿಬಿಎಂಪಿ ಮುಂದಾದಾಗ, ಸ್ಥಳೀಯರು ಪ್ರತಿರೋಧ ತೋರಿದ್ದರು. ಆಗ ಮೇಲ್ಸೇತುವೆ ನಿರ್ಮಾಣ ಯೋಜನೆ ಕೈಬಿಡಲಾಗಿತ್ತು. ಕೆರೆ ಹಾಗೂ ಮರಗಳನ್ನು ಉಳಿಸುವಲ್ಲಿ ಯಶಸ್ವಿಯಾಗಿದ್ದರು. ಈಗ ಸ್ಯಾಂಕಿ ಕೆರೆ ರಸ್ತೆಯ ಕೆಳಭಾಗದಲ್ಲಿ ಸುರಂಗ ರಸ್ತೆ ನಿರ್ಮಿಸಲು ಬಿ–ಸ್ಮೈಲ್ ಮುಂದಾಗಿದೆ.

ಹೆಬ್ಬಾಳ–ಎಸ್ಟೀಮ್ ಮಾಲ್ ಜಂಕ್ಷನ್‌ನಲ್ಲಿ ಸುರಂಗ ರಸ್ತೆಯ ಪ್ರವೇಶ–ನಿರ್ಗಮನ ಟ್ಯೂಬ್‌ಗಳಿರಲಿವೆ. ಅಂತಿಮ ವಿಸ್ತೃತ ಯೋಜನಾ ವರದಿಯಲ್ಲಿರುವ (ಡಿಪಿಆರ್) ಈ ಜಂಕ್ಷನ್‌ನಲ್ಲಿ ಶಾಫ್ಟ್ ನಿರ್ಮಾಣ ಪ್ರದೇಶದಲ್ಲಿ ಹೆಚ್ಚು ಸ್ಥಳವನ್ನು ಪಡೆದುಕೊಳ್ಳಲು ಉದ್ದೇಶಿಸಿರುವುದರಿಂದ ಹೆಬ್ಬಾಳ ಕೆರೆ ಅಂಗಳ ಹಾಗೂ ರಾಜಕಾಲುವೆಗೆ ಸಮಸ್ಯೆ ಅಧಿಕವಾಗಿದೆ.

ಅಂತಿಮ ಡಿಪಿಆರ್‌ನಲ್ಲಿ ಇಲ್ಲದ ಹೊಸ ನಿರ್ಗಮನ ಪಥ ಸ್ಯಾಂಕಿ ಕೆರೆಯ ಸಮೀಪ ತೆರೆದುಕೊಳ್ಳುವುದರಿಂದ ಈಗಾಗಲೇ ಒತ್ತುವರಿಯಿಂದ ಬಳಲುತ್ತಿರುವ ಕೆರೆಗೆ ಕಂಟಕ ಎದುರಾಗಿದೆ. ಮೇಖ್ರಿ ವೃತ್ತದಿಂದ ಸಿ.ವಿ. ರಾಮನ್ ರಸ್ತೆ ಕಡೆಯಲ್ಲಿ ನಿರ್ಮಿಸಲು ಉದ್ದೇಶಿಸಲಾಗಿದ್ದ, ನಿರ್ಗಮನ ರ‍್ಯಾಂಪ್ ರದ್ದುಗೊಳಿಸಿ, ಗಾಲ್ಫ್ ಮೈದಾನ ಕೆಳಭಾಗದಿಂದ ಸ್ಯಾಂಕಿ ಕೆರೆಯವರೆಗೆ ಹೊಸದಾಗಿ ನಿರ್ಗಮನ ರ‍್ಯಾಂಪ್ ನಿರ್ಮಿಸಲು ಡಿಪಿಆರ್ ಮಾಡಿಕೊಟ್ಟಿದ್ದ ರೊಡಿಕ್ ಕನ್ಸಲ್ಟೆಂಟ್ಸ್‌ನಿಂದ ಬಿ–ಸ್ಮೈಲ್ ತಾಂತ್ರಿಕ ನಿರ್ದೇಶಕರಿಗೆ ಅ.9ರಂದು ‘ಬದಲಾದ ಅಲೈನ್‌ಮೆಂಟ್ ಅನುಬಂಧ’ಗಳೊಂದಿಗೆ ವರದಿ ಸಲ್ಲಿಸಲಾಗಿದೆ.

‘ಸ್ಯಾಂಕಿ ರಸ್ತೆ ಕೆಳಭಾಗದಲ್ಲಿ ಸುರಂಗ ರಸ್ತೆ ನಿರ್ಮಿಸಲು ಮುಂದಾಗಿರುವುದರಿಂದ, ಸ್ಯಾಂಕಿ ಕೆರೆಯ ಜೀವವೈವಿಧ್ಯಕ್ಕೆ ಧಕ್ಕೆ ಉಂಟಾಗುತ್ತದೆ. ಪ್ರವಾಹ ಹಾಗೂ ಸಂಚಾರ ದಟ್ಟಣೆ ಈ ಭಾಗದಲ್ಲಿ ಇನ್ನೂ ಹೆಚ್ಚಾಗಲಿದೆ. ಯಾವುದೇ ರೀತಿಯ ಅಧ್ಯಯನ ನಡೆಸದೆ ಇಲ್ಲಿ ಸುರಂಗ ನಿರ್ಮಿಸಲು ಯೋಜಿಸಿದ್ದಾರೆ. ಸ್ಯಾಂಕಿ ಕೆರೆ ದಡದಲ್ಲಿ ಮೇಲ್ಸೇತುವೆ ಯೋಜನೆಯನ್ನು ನಾವು ನಿಲ್ಲಿಸಿದ್ದೆವು. ಇದೀಗ ನಾವೆಲ್ಲ ಮತ್ತೆ ಒಟ್ಟಾಗಿ, ಸುರಂಗ ರಸ್ತೆ ವಿರುದ್ಧ ಹೋರಾಡಿ, ನಮ್ಮ ಜಲಮೂಲವಾದ ಸ್ಯಾಂಕಿ ಕೆರೆ ಹಾಗೂ ಜೀವವೈವಿಧ್ಯವನ್ನು ಉಳಿಸಿಕೊಳ್ಳುತ್ತೇವೆ’ ಎಂದು ಸ್ಯಾಂಕಿ ಕೆರೆ ತಂಡದ ಪ್ರೀತಿ ಸುಂದರ್‌ರಾಜನ್ ತಿಳಿಸಿದರು.


ಮೇಖ್ರಿ ವೃತ್ತದ ರ‍್ಯಾಂಪ್ ಬದಲು

- ಡಿಪಿಆರ್‌ನಲ್ಲಿ ಉಲ್ಲೇಖಿಸಲಾಗಿದ್ದ ಸಿ.ವಿ ರಾಮನ್ ರಸ್ತೆಯಲ್ಲಿ ಪ್ರವೇಶ ಹಾಗೂ ನಿರ್ಗಮನ ರ‍್ಯಾಂಪ್ ಯೋಜನೆ ಕೈಬಿಟ್ಟು, ಸ್ಯಾಂಕಿ ರಸ್ತೆಯಲ್ಲಿ ಹೆಚ್ಚುವರಿಯಾಗಿ ರ‍್ಯಾಂಪ್–6ಎ ಅನ್ನು ಸೇರಿಸಲಾಗಿದೆ
- ರ‍್ಯಾಂಪ್ –6ಎ 2.450 ಕಿ.ಮೀ ಉದ್ದವಿರಲಿದೆ
- ಗಾಲ್ಫ್ ಮೈದಾನದ ಕೆಳಭಾಗದಿಂದ ನಿರ್ಗಮನ ರ‍್ಯಾಂಪ್ ಆರಂಭವಾಗಿ, ಸ್ಯಾಂಕಿ ರಸ್ತೆಯಲ್ಲಿ ಕೆರೆಯ ದಡದಲ್ಲಿ ಮುಕ್ತಾಯವಾಗಲಿದೆ

‘ಕೆಟಿಸಿಡಿಎ ಅನುಮತಿ ಪಡೆದಿಲ್ಲ’

ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗಿನ ಸುರಂಗ ರಸ್ತೆಗೆ ಡಿಪಿಆರ್ ಆಗಿ, ಟೆಂಡರ್ ಆಹ್ವಾನಿಸಲಾಗಿದೆ. ಹೆಬ್ಬಾಳ ಕೆರೆ ಹಾಗೂ ಸ್ಯಾಂಕಿ ಕೆರೆಯ ಬಳಿ ಟನಲ್ ರ‍್ಯಾಂಪ್‌ಗಳನ್ನು ಬಫರ್ ವಲಯದಲ್ಲಿ ನಿರ್ಮಿಸಲು ಯೋಜಿಸಲಾಗಿದೆ. ಆದರೆ, ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದಿಂದ (ಕೆಟಿಸಿಡಿಎ) ಬಿಬಿಎಂಪಿ, ಜಿಬಿಎ, ಬಿ–ಸ್ಮೈಲ್ ಅಥವಾ ಡಿಪಿಆರ್ ತಯಾರಿಸಿದ ಸಂಸ್ಥೆ ಅನುಮತಿಯನ್ನು ಪಡೆದಿಲ್ಲ.

‘ಕೆರೆ ಪ್ರದೇಶದಲ್ಲಿ ಯಾವುದೇ ರೀತಿಯ ಅಭಿವೃದ್ಧಿ ಕಾಮಗಾರಿಗಳು ಆಗಬೇಕಿದ್ದರೆ, ಯೋಜನೆ ತಯಾರಿಸುವ ಪೂರ್ವದಲ್ಲೇ ಕೆಟಿಸಿಡಿಎಯಿಂದ ಅನುಮತಿ ಪಡೆಯುವುದು ಕಡ್ಡಾಯ. ಇದಕ್ಕಾಗಿ ಕಾಯ್ದೆಯೇ ಇದೆ. ಕೆರೆಯ ಕೆಳಭಾಗ ಅಥವಾ ಬಫರ್ ವಲಯದಲ್ಲಿ ಯಾವುದೇ ರೀತಿಯ ಬೃಹತ್ ಯೋಜನೆಗಳಾಗುವಂತಿಲ್ಲ. ಅಂತಹ ಯೋಜನೆಗಳಿದ್ದರೆ, ಅದರ ಬಗ್ಗೆ ಸ್ಪಷ್ಟ ವಿವರಣೆ ನೀಡಿ, ಅನುಮತಿಗೆ ಕೆಟಿಸಿಡಿಎಗೆ ಅರ್ಜಿ ಸಲ್ಲಿಸಬೇಕು. ಆದರೆ, ಸುರಂಗ ರಸ್ತೆ ಯೋಜನೆಗೆ ಸಂಬಂಧಿಸಿದಂತೆ ಅನುಮತಿಗಾಗಿ ಈವರೆಗೆ ಯಾರೂ ಅರ್ಜಿ ಸಲ್ಲಿಸಿಲ್ಲ’ ಎಂದು ಕೆಟಿಸಿಡಿಎ ಹಿರಿಯ ಅಧಿಕಾರಿಗಳು ‘ಪ್ರಜಾವಾಣಿ’ಗೆ ತಿಳಿಸಿದರು.






40 ಎಕರೆ **24** ಗುಂಟೆ — ಸ್ಯಾಂಕಿ ಕೆರೆ ಒಟ್ಟು ವಿಸ್ತೀರ್ಣ

1 ಎಕರೆ **6** ಗುಂಟೆ — ಕೆರೆಯ ಒತ್ತುವರಿ

ಹೆಬ್ಬಾಳ ಕೆರೆ–ಕಾಲುವೆಗೆ ಧಕ್ಕೆ!



ಸುರಂಗ ರಸ್ತೆ ಆರಂಭವಾಗುವ ಹೆಬ್ಬಾಳ ಜಂಕ್ಷನ್‌ನಲ್ಲಿ1.123 ಕಿ.ಮೀನಷ್ಟು ಟ್ಯೂಬ್–1, ಟ್ಯೂಬ್–2ರ ಅಲೈನ್‌ಮೆಂಟ್ ಅನ್ನು ಬದಲಾಯಿಸಲಾಗಿದ್ದು, 23 ಮೀಟರ್ ಕಡಿಮೆಯಾಗಿದೆ. ಹೆಬ್ಬಾಳ ಜಂಕ್ಷನ್‌ನಲ್ಲಿ ನಿರ್ಮಾಣವಾಗುವ ಶಾಫ್ಟ್ ಪ್ರದೇಶ ಟ್ಯೂಬ್–1ರ ಬಳಿ 56 ಮೀಟರ್ ಹೆಚ್ಚಳವಾಗಿದೆ. ಟ್ಯೂಬ್–2ರ ಬಳಿಯ ಶಾಫ್ಟ್ ಬಳಿ 53 ಮೀಟರ್ ಉದ್ದ ಅಧಿಕವಾಗಿದೆ.

ರಿಅಲೈನ್‌ಮೆಂಟ್ ಮಾಡಿರುವುದರಿಂದ ಪ್ರವೇಶ ರ‍್ಯಾಂಪ್–1ರ ಉದ್ದ 11 ಮೀಟರ್ ಹಾಗೂ ನಿರ್ಗಮನ ರ‍್ಯಾಂಪ್–7ರ ಉದ್ದ 167 ಮೀಟರ್ ಹೆಚ್ಚಳವಾಗಿದೆ. ಹೆಬ್ಬಾಳ ಎಸ್ಟೀಮ್ ಮಾಲ್ ಜಂಕ್ಷನ್‌ನಲ್ಲಿ ವಾಣಿಜ್ಯ ಪ್ರದೇಶ ಸೇರಿದಂತೆ ಇತರೆ ಸೌಲಭ್ಯಗಳಿರುವ ಐದು ಅಂತಸ್ತಿನ ಎರಡು ಶಾಫ್ಟ್‌ಗಳು ನಿರ್ಮಾಣವಾಗಲಿವೆ. ಅಂತಿಮ ಡಿಪಿಆರ್‌ನಲ್ಲಿರುವುದಕ್ಕಿಂತ ರ‍್ಯಾಂಪ್ ಉದ್ದವನ್ನು ಹೆಚ್ಚು ಮಾಡಲು ಅಲೈನ್‌ಮೆಂಟ್‌ನಲ್ಲಿ ಬದಲಾವಣೆ ಮಾಡಿಕೊಳ್ಳಲಾಗಿದೆ. ಹೆಬ್ಬಾಳ ಕೆರೆ ಹಾಗೂ ಅದಕ್ಕೆ ಸಂಪರ್ಕ ಕಲ್ಪಿಸುವ ರಾಜಕಾಲುವೆಗಳಿಗೆ ಇದರಿಂದ ಹೆಚ್ಚಿನ ಸಮಸ್ಯೆ ಉಂಟಾಗಲಿದೆ. ಕೆರೆ ಜಾಗವನ್ನು ಅಭಿವೃದ್ಧಿಗಾಗಿ ಎಷ್ಟು ಬೇಕಾದರೂ ಬಳಸಿಕೊಳ್ಳಬಹುದು ಎಂಬ ಅಧಿಕಾರಿಗಳ ಮನಃಸ್ಥಿತಿಯಿಂದ ಕೆರೆ ಅಂಗಳ ಹಾಗೂ ರಾಜಕಾಲುವೆಗಳಿಗೆ ಧಕ್ಕೆ ಹೆಚ್ಚಾಗಲಿದೆ ಎಂದು ಪರಿಸರ ಕಾರ್ಯಕರ್ತರು ದೂರಿದರು.

ಡಾಂಬರ್ ಹಾಕಲು ₹5,000 ಕೋಟಿ ಎಲ್ಲಿದೆ?: ಅಶೋಕ

ಪ್ರಜಾವಾಣಿ ವಾರ್ತೆ



ಆರ್.ಅಶೋಕ

ಬೆಂಗಳೂರು: ನಗರದ ರಸ್ತೆಗಳಿಗೆ ಒಂದು ಪದರ ಡಾಂಬರ್ ಹಾಕಲು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. ಅದಕ್ಕೆ ಸುಮಾರು ₹5 ಸಾವಿರ ಕೋಟಿ ಬೇಕಾಗುತ್ತದೆ. ಆ ಹಣ ಎಲ್ಲಿಂದ ತರುತ್ತಾರೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿ, ‘ರಸ್ತೆ ಗುಂಡಿಗಳಿಂದ 12 ಜನರು ಮೃತಪಟ್ಟಿದ್ದಾರೆ. ಉಪಮುಖ್ಯ-ಮಂತ್ರಿ ಡಿ.ಕೆ.ಶಿವಕುಮಾರ್ ಕೂಲಿಂಗ್ ಗ್ಲಾಸ್ ಹಾಕಿಕೊಂಡು ನಗರ ಪ್ರದಕ್ಷಿಣೆ ಮಾಡಿದರೆ ರಸ್ತೆಗುಂಡಿ ಕಾಣುತ್ತವೆಯೇ? ತೆರಿಗೆ ಪಾವತಿಸುವುದಿಲ್ಲ, ರಸ್ತೆ ಗುಂಡಿ ತಾವೇ ಮುಚ್ಚುತ್ತೇವೆ ಎಂದು ಜನರು ಹೇಳುತ್ತಿದ್ದಾರೆ. ಬೆಂಗಳೂರು ಸೇರಿದಂತೆ ಇಡೀ ರಾಜ್ಯದ ಒಟ್ಟು ರಸ್ತೆ ಗುಂಡಿಗಳನ್ನು ಲೆಕ್ಕಹಾಕಿದರೆ ಗಿನ್ನಿಸ್ ದಾಖಲೆಗೆ ಕಳುಹಿಸಬಹುದು’ ಎಂದರು.

‘ನಗರದ ಶ್ವಾಸಕೋಶದಂತಿರುವ ಲಾಲ್‌ಬಾಗ್‌ನಲ್ಲಿ ಸುರಂಗ ರಸ್ತೆ ನಿರ್ಮಿಸಲಾಗುತ್ತದೆ. ನಗರಕ್ಕೆ ಹಸಿರು ನೀಡುವ ಇಂತಹ ಉದ್ಯಾನದಲ್ಲಿ ಸುರಂಗ ಕೊರೆಯಬಾರದು’ ಎಂದು ಹೇಳಿದರು.

‘ಎಲೆಕ್ಟ್ರಿಕ್ ಬಸ್ ಸಮಸ್ಯೆ: ಕೇಂದ್ರಕ್ಕೆ ಪತ್ರ’

ಬಸ್ ಪೂರೈಕೆ, ನಿರ್ವಹಣೆಗೆ ನಿಯಮ ಜಾರಿಗೊಳಿಸಬೇಕು: ರಾಮಲಿಂಗಾರೆಡ್ಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರದ ಸೂಚನೆಯಂತೆ ಜಿಸಿಸಿ (ಗ್ರಾಸ್ ಕಾಸ್ಟ್ ಕಾಂಟ್ರಾಕ್ಟ್) ಮಾದರಿಯಲ್ಲಿ ಖಾಸಗಿ ಸಂಸ್ಥೆಗಳಿಂದ ಗುತ್ತಿಗೆ ಆಧಾರದಲ್ಲಿ ಬಿಎಂಟಿಸಿಗೆ ಪಡೆದಿರುವ ಎಲೆಕ್ಟ್ರಿಕ್ ಬಸ್‌ಗಳ ನಿರ್ವಹಣೆ ಕೊರತೆಯಿಂದ ನಿಗಮದ ಕಾರ್ಯಾಚರಣೆಗೆ ಸಮಸ್ಯೆಯಾಗುತ್ತಿದೆ. ಹೀಗಾಗಿ ಜಿಸಿಸಿ ಅಡಿಯಲ್ಲಿ ಬಸ್ ಪೂರೈಕೆ ಮತ್ತು ನಿರ್ವಹಣೆಗೆ ಕೇಂದ್ರ ಸರ್ಕಾರ ಕಠಿಣ ನಿಯಮ ಜಾರಿಗೊಳಿಸಬೇಕು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, ‘ಕೇಂದ್ರ ಸರ್ಕಾರದ ಫೇಮ್ ಯೋಜನೆ ಅಡಿಯಲ್ಲಿ ನಗರ ಸಾರಿಗೆಗಳಿಗಾಗಿ ಎಲೆಕ್ಟ್ರಿಕ್ ಬಸ್‌ಗಳನ್ನು ಜಿಸಿಸಿ ಮಾದರಿಯಲ್ಲಿ ಖಾಸಗಿ ಸಂಸ್ಥೆಗಳಿಂದ ಪಡೆಯಲಾಗುತ್ತಿದೆ. ಈ ಮಾದರಿಯಡಿ ಬಸ್ ನಿರ್ವಹಣೆ, ಚಾಲಕರ ನೇಮಕ ಎಲ್ಲವೂ ಖಾಸಗಿ ಸಂಸ್ಥೆಗಳೇ ನಿರ್ವಹಿಸುತ್ತವೆ. ನಿಗಮದಿಂದ ಕೇವಲ ನಿರ್ವಾಹಕರು ಮಾತ್ರ ಇರುತ್ತಾರೆ’ ಎಂದರು.

‘ಬಿಎಂಟಿಸಿಯಲ್ಲಿ ಸದ್ಯ 1,644 ಎಲೆಕ್ಟ್ರಿಕ್ ಬಸ್‌ಗಳಿವೆ. ಈ ಬಸ್‌ಗಳು ಪದೇ ಪದೇ ಕೆಟ್ಟು ನಿಲ್ಲುತ್ತಿವೆ. ಅಲ್ಲದೆ, ಅದರ ಚಾಲಕರು ಬಸ್ ಪೂರೈಸಿದ ಸಂಸ್ಥೆ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ. ಈ ಕಾರಣದಿಂದಾಗಿ ಬಿಎಂಟಿಸಿ ಸಮರ್ಪಕ ಸೇವೆ ನೀಡಲು ಸಮಸ್ಯೆಯಾಗುತ್ತಿದೆ. ಹೀಗಾಗಿ, ಎಲೆಕ್ಟ್ರಿಕ್ ಬಸ್ ನಿರ್ವಹಣೆ ಕುರಿತಂತೆ ಖಾಸಗಿ ಸಂಸ್ಥೆಗಳಿಗೆ ಕಠಿಣ ಸೂಚನೆ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ’ ಎಂದರು.

‘ಬಿಎಂಟಿಸಿಗೆ ಎನ್‌ಟಿಪಿಸಿ ಸಂಸ್ಥೆಯಿಂದ 90, ಸ್ವಿಚ್ ಮೊಬಿಲಿಟಿಯಿಂದ 300, ಟಿಎಂಎಲ್ ಸ್ಮಾರ್ಟ್ ಸಿಟಿ ಮೊಬಿಲಿಟಿ ಸಲ್ಯೂಷನ್ಸ್‌ನಿಂದ 1,031 ಹಾಗೂ ಒಎಚ್‌ಎಂ ಗ್ಲೋಬಲ್ ಮೊಬಿಲಿಟಿ ಕಂಪನಿಯಿಂದ 251 ಬಸ್‌ಗಳು ಪೂರೈಕೆ ಆಗಿವೆ. ಈ ನಾಲ್ಕು ಸಂಸ್ಥೆಗಳಿಂದ ಪೂರೈಕೆಯಾದ ಬಸ್‌ಗಳಿಂದ ಈವರೆಗೆ 2,049 ಬಾರಿ ಬ್ರೇಕ್‌ಡೌನ್ ಆಗಿವೆ. ಬ್ಯಾಟರಿ ಕಾರಣದಿಂದ 14,082 ಬಾರಿ ಅಪಘಾತಗಳು ಸಂಭವಿಸಿವೆ. ವಿವಿಧ ಕಾರಣಕ್ಕೆ ₹25.51 ಕೋಟಿ ದಂಡ ವಿಧಿಸಲಾಗಿದೆ. ಬಸ್‌ಗಳು ಪದೇ ಪದೇ ಬ್ರೇಕ್‌ಡೌನ್ ಆಗುವ ಕಾರಣದಿಂದಾಗಿ ಬಸ್‌ಗಳ ಸೇವೆ ಸ್ಥಗಿತಗೊಳಿಸಬೇಕಾಗುತ್ತದೆ’ ಎಂದರು.

₹92.90 ಲಕ್ಷ ಆದಾಯ ನಷ್ಟ: ‘ಬಸ್ ಪೂರೈಸಿರುವ ಸಂಸ್ಥೆಗಳು ಹಾಗೂ ಅವರು ನೇಮಿಸಿರುವ ಖಾಸಗಿ ಚಾಲಕರ ನಡುವಿನ ಸಂಘರ್ಷದಿಂದ ಈವರೆಗೆ 21 ಬಾರಿ ಎಲೆಕ್ಟ್ರಿಕ್ ಬಸ್‌ಗಳ ಸೇವೆ ಸ್ಥಗಿತಗೊಂಡಿದೆ. ಪರಿಣಾಮ, ಒಟ್ಟು 1.58 ಲಕ್ಷ ಕಿ.ಮೀ ಬಸ್ ಕಾರ್ಯಾಚರಣೆ ರದ್ದಾಗಿದೆ. ಇದರಿಂದ ₹92.90 ಲಕ್ಷ ಆದಾಯ ಇಲಾಖೆಗೆ ನಷ್ಟವಾಗಿದೆ. ಚಾಲಕರು ವೇತನ ಮತ್ತು ಬೋನಸ್ ಕಾರಣಕ್ಕಾಗಿ ಕರ್ತವ್ಯ ಬಹಿಷ್ಕರಿಸಿ ಪ್ರತಿಭಟನೆ ನಡೆಸಿದ್ದರಿಂದ ಸೇವೆ ರದ್ದಾಗುವಂತಾಗಿದೆ’ ಎಂದೂ ರಾಮಲಿಂಗಾರೆಡ್ಡಿ ಹೇಳಿದರು.

ಹೆಚ್ಚುವರಿ ದಂಡ– ಎಚ್ಚರಿಕೆ: ‘ಈ ಸಮಸ್ಯೆಗಳ ಕುರಿತು ಖಾಸಗಿ ಸಂಸ್ಥೆಗಳ ಜೊತೆ ಸುಮಾರು 10 ಬಾರಿ ಅಧಿಕಾರಿಗಳು ಸಭೆ ನಡೆಸಿದ್ದಾರೆ. ಸಭೆ ವೇಳೆ ಇ.ವಿ ಬಸ್ ಬ್ಯಾಟರಿ ಅಪ್ ಗ್ರೇಡ್ ಮಾಡಿದ್ದೇವೆಂದು ಭರವಸೆ ನೀಡಿದ್ದಾರೆ. ಒಂದು ವಾರದಲ್ಲಿ ಅಪ್ ಗ್ರೇಡ್ ಬ್ಯಾಟರಿಯ ಕಾರ್ಯಕ್ಷಮತೆ ಬಗ್ಗೆ ನಿಗಾ ಮಾಡುತ್ತಿದ್ದೇವೆ. ಈ ಸಮಸ್ಯೆಗಳಿಂದ ಸಾರಿಗೆ ಆದಾಯ ನಷ್ಟ ಆಗುತ್ತಿದೆ. ಇದನ್ನು ವಸೂಲಿ ಮಾಡುತ್ತೇವೆ ಎಂದು ಅವರಿಗೆ ತಿಳಿಸಿದ್ದೇವೆ. ಈಗಾಗಲೇ ದಂಡದ ರೂಪದಲ್ಲಿ ₹12 ಕೋಟಿ ಕಡಿತ ಮಾಡಿದ್ದೇವೆ. ಮುಂದೆ ಇದೇ ರೀತಿ ಮುಂದುವರಿದರೆ ಹೆಚ್ಚುವರಿ ಕಡಿತ ಮಾಡುವುದಾಗಿ ಎಚ್ಚರಿಕೆ ನೀಡಿದ್ದೇವೆ’ ಎಂದರು.

ಕೇಂದ್ರ ಸಚಿವ ಕುಮಾರಸ್ವಾಮಿಗೆ ಪತ್ರ

‘ಜಿಸಿಸಿ ಮಾದರಿಯಲ್ಲಿ ಪೂರೈಕೆಯಾದ ಎಲೆಕ್ಟ್ರಿಕ್ ಬಸ್‌ಗಳಿಂದ ಆಗಿರುವ ಸಮಸ್ಯೆಗಳ ಕುರಿತಂತೆ ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಪತ್ರ ಬರೆಯಲಾಗಿದೆ. ಕುಮಾರಸ್ವಾಮಿ ಅವರನ್ನು ಶೀಘ್ರದಲ್ಲಿಯೇ ಭೇಟಿ ಮಾಡಿ ಮನವಿ ಸಲ್ಲಿಸಲಾಗುವುದು’ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

‘ಎಲೆಕ್ಟ್ರಿಕ್ ಬಸ್‌ಗಳಿಂದ ಆಗುತ್ತಿರುವ ಸಮಸ್ಯೆಗಳನ್ನು ಅಂಕಿಅಂಶಗಳ ಸಹಿತ ಆ ಪತ್ರದಲ್ಲಿ ವಿವರಿಸಲಾಗಿದೆ. ಬಿಎಂಟಿಸಿ ಹೆಸರು ಹಾಳಾಗುತ್ತಿರುವ ಬಗ್ಗೆಯೂ ಉಲ್ಲೇಖಿಸಲಾಗಿದೆ. ಜಿಸಿಸಿ ಮಾದರಿಯಲ್ಲಿ ಬಸ್ ಪೂರೈಸುವ ಸಂಸ್ಥೆಗಳ ಕಾರ್ಯಕ್ಷಮತೆ ಪರಿಶೀಲಿಸಿ ನಂತರ ಬಸ್ ಪೂರೈಕೆ ಆದೇಶ ನೀಡಬೇಕು. ವಿಶೇಷವಾಗಿ ಬಸ್‌ಗಳು ಬ್ರೇಕ್‌ಡೌನ್ ಆಗುವ ಪ್ರಮಾಣವನ್ನು ಪರಾಮರ್ಶಿಸುವಂತೆ ಕೋರಲಾಗಿದೆ’ ಎಂದರು.

‘ಅಲ್ಲದೆ, ಸಂಸ್ಥೆಗಳು ನೇಮಿಸುವ ಚಾಲಕರಿಗೆ ಸಮಗ್ರ ಮತ್ತು ಪ್ರಮಾಣಿತ ತರಬೇತಿ ಕಾರ್ಯಕ್ರಮ ಕೈಗೊಳ್ಳುವುದು ಕಡ್ಡಾಯಗೊಳಿಸಬೇಕು. ಸುರಕ್ಷತೆ ಮತ್ತು ಸೇವಾ ಗುಣಮಟ್ಟದ ಮಾನದಂಡವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮಾಡಲು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯೊಂದಿಗೆ ಜಂಟಿಯಾಗಿ ಯೋಜನೆ ರೂಪಿಸಬೇಕು ಎಂದೂ ಪತ್ರದಲ್ಲಿ ತಿಳಿಸಲಾಗಿದೆ’ ಎಂದರು.

ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರಿಂದ ಧರಣಿ

ಭವಿಷ್ಯನಿಧಿ ಕಚೇರಿ ಎದುರು ಪ್ರತಿಭಟನೆ

ಪ್ರಜಾವಾಣಿ ವಾರ್ತೆ



ನಗರದ ರಿಚ್ಮಂಡ್ ವೃತ್ತದಲ್ಲಿರುವ ಪ್ರಾದೇಶಿಕ ಭವಿಷ್ಯನಿಧಿ ಕಚೇರಿ ಆವರಣದಲ್ಲಿ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಸದಸ್ಯರು ಸೋಮವಾರ ಪ್ರತಿಭಟನೆ ನಡೆಸಿದರು

ಬೆಂಗಳೂರು: ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಸದಸ್ಯರು ಸೋಮವಾರ ರಿಚ್ಮಂಡ್ ವೃತ್ತದಲ್ಲಿರುವ ಪ್ರಾದೇಶಿಕ ಭವಿಷ್ಯನಿಧಿ ಕಚೇರಿ ಆವರಣದಲ್ಲಿ ಪ್ರತಿಭಟನೆ ನಡೆಸಿದರು.

ಕನಿಷ್ಠ ₹7500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಹಲವು ಬಾರಿ ಮನವಿ ಸಲ್ಲಿಸಲಾಗಿದೆ. ಇಪಿಎಸ್ ವ್ಯಾಪ್ತಿಗೆ ಬಾರದ ಹಲವು ನಿವೃತ್ತ ನೌಕರರಿಗೆ ₹5 ಸಾವಿರ ನೀಡಬೇಕು. ಹತ್ತು ವರ್ಷಗಳಲ್ಲಿ ಲಕ್ಷಾಂತರ ಇಪಿಎಸ್ ನೌಕರರು ವಯೋಸಹಜ ಹಾಗೂ ಅನಾರೋಗ್ಯದಿಂದ ಮೃತಪಟ್ಟಿದ್ದಾರೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

‘ನಿವೃತ್ತಿಯಾದ ನೌಕರರಿಗೆ ಆರು ತಿಂಗಳೊಳಗೆ ಪಿಂಚಣಿ ಹೆಚ್ಚಿಸುವಂತೆ 2022ರಲ್ಲಿ ಸುಪ್ರೀಂ ಕೋರ್ಟ್ ಸುನಿಲ್ ಕುಮಾರ್ ಪ್ರಕರಣದಲ್ಲಿ ತೀರ್ಪು ನೀಡಿದೆ. ಆದರೆ, ಇಪಿಎಫ್‌ಒ ಅಧಿಕಾರಿಗಳು ತೀರ್ಪನ್ನು ವಿಭಿನ್ನವಾಗಿ ಅರ್ಥೈಸಿಕೊಂಡು, ಜಂಟಿ ಆಯ್ಕೆ ಪತ್ರ ಸಲ್ಲಿಸಿದ ಇಪಿಎಸ್ ನಿವೃತ್ತರ ಅರ್ಜಿಯನ್ನು ವಜಾಗೊಳಿಸಿದ್ದಾರೆ. ಈ ಆದೇಶದ ವಿರುದ್ಧ ತಮಿಳುನಾಡಿನ ಮಧುರೈ ಹೈಕೋರ್ಟ್‌ನಲ್ಲಿ 86 ಜನ ರಿಟ್ ಅರ್ಜಿ ಸಲ್ಲಿಸಿದ್ದರು. ಇಪಿಎಸ್ ನಿವೃತ್ತರಿಗೆ ಅಧಿಕ ಪಿಂಚಣಿ ನೀಡುವಂತೆ ಸೆಪ್ಟೆಂಬರ್ 9ರಂದು ತೀರ್ಪು ನೀಡಿದೆ. ಇದು ನಮಗೂ ಅನ್ವಯವಾಗಲಿದ್ದು, ಕೂಡಲೇ ಅನುಷ್ಠಾನಗೊಳಿಸ-ಬೇಕು’ಎಂದು ಇಪಿಎಸ್–95 ಬಿಎಂಟಿಸಿ ಮತ್ತು ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘದ ಚಂದ್ರೇಗೌಡ ಆಗ್ರಹಿಸಿದರು.

ನವದೆಹಲಿಯಲ್ಲಿ ಜರುಗಿದ 238ನೇ ಸಿಬಿಟಿ ಸಭೆಯಲ್ಲಿ ಬೇಡಿಕೆಗಳ ಬಗ್ಗೆ ಕೇಂದ್ರ ಸರ್ಕಾರ ಹಾಗೂ ಇಪಿಎಫ್‌ಒ ಅಧಿಕಾರಿಗಳು ಪ್ರಸ್ತಾವನೆ ಮಂಡಿಸದೆ, 78 ಲಕ್ಷ ಇಪಿಎಸ್ ನಿವೃತ್ತರನ್ನು ನಿರಾಶೆಗೊಳಿಸಿದ್ದಾರೆ. ನೌಕರರ ಸಂಘದ ಮುಖಂಡರಾದ ಕಮಾಂಡರ್ ಅಶೋಕ್ ರಾವುತ್ ಹಾಗೂ ತಂಡದವರು ಸಿಬಿಟಿ ಅಧ್ಯಕ್ಷರೂ ಆದ ಕೇಂದ್ರ ಕಾರ್ಮಿಕ ಹಾಗೂ ಉದ್ಯೋಗ ಸಚಿವ ಮನ್ಸುಖ್ ಮಾಂಡವೀಯ ಅವರಿಗೆ ಬೇಡಿಕೆಗಳನ್ನು ಒಳಗೊಂಡ ಮನವಿಪತ್ರ ಸಲ್ಲಿಸಿದರು ಎಂದು ಹೇಳಿದರು.

ಕೊಟ್ಟ ಮಾತಿನಂತೆ ಕೇಂದ್ರ ಸರ್ಕಾರ ನಡೆದುಕೊಳ್ಳಬೇಕು. ಮಾತು ತಪ್ಪಿದಲ್ಲಿ, ಯಾವ ರೀತಿ ಕಾನೂನು ಕ್ರಮ ಕೈಗೊಳ್ಳಬೇಕು ಎಂಬುದರ ಬಗ್ಗೆ ಕಾನೂನು ತಜ್ಞರ ಅಭಿಪ್ರಾಯ ಪಡೆಯಲಾಗುವುದು ಎಂದು ಅವರು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ನಂಜುಂಡೇಗೌಡ, ಪ್ರಧಾನ ಕಾರ್ಯದರ್ಶಿ ಆರ್.ಸುಬ್ಬಣ್ಣ ಹಾಗೂ ಇತರರು ಭಾಗವಹಿಸಿದ್ದರು.

ಸಂಕ್ಷಿಪ್ತ ಸುದ್ದಿ

ಕೈಗೆಟಕುವ ಸ್ಥಳದಲ್ಲಿ ಮೀಟರ್ ಅಳವಡಿಸಿ

ಬೆಂಗಳೂರು: ಬೆಸ್ಕಾಂ ವ್ಯಾಪ್ತಿಯಲ್ಲಿ ಆಪ್ಟಿಕಲ್ ಪೋರ್ಟ್ ಪ್ರೋಬ್ ತಂತ್ರಜ್ಞಾನ ಬಳಸಿ ಗ್ರಾಹಕರಿಗೆ ವಿದ್ಯುತ್ ಬಿಲ್ ನೀಡಲಾಗುತ್ತಿದ್ದು, ಮೀಟರ್ ರೀಡಿಂಗ್ ಮಾಡಲು ಅನುಕೂಲವಾಗುವಂತೆ ಗ್ರಾಹಕರು ತಮ್ಮ ಸ್ಥಾವರಗಳ ವಿದ್ಯುತ್ ಮೀಟರ್‌ಗಳನ್ನು ಕೈಗೆಟಕುವ ಸ್ಥಳಗಳಲ್ಲಿ ಅಳವಡಿಸುವಂತೆ ಬೆಸ್ಕಾಂ ಮನವಿ ಮಾಡಿದೆ.

ಕೆಲವು ವಿದ್ಯುತ್ ಸ್ಥಾವರಗಳ ಮೀಟರ್‌ಗಳನ್ನು ಎತ್ತರದ ಪ್ರದೇಶದಲ್ಲಿ ಅಳವಡಿಸಿರುವ ಕಾರಣ ಆಪ್ಟಿಕಲ್ ಪೋರ್ಟ್ ಪ್ರೋಬ್ ಮೂಲಕ ಮೀಟರ್ ರೀಡಿಂಗ್ ಮಾಡಲು ತೊಂದರೆ ಉಂಟಾಗುತ್ತಿದ್ದು, ವಿದ್ಯುತ್ ಮೀಟರ್‌ಗಳನ್ನು ನೆಲಮಟ್ಟದಿಂದ 5ರಿಂದ 5.5 ಅಡಿ ಎತ್ತರದಲ್ಲಿ ಅಳವಡಿಸಿಕೊಳ್ಳುವಂತೆ ಕೋರಲಾಗಿದೆ.

ಹಲವೆಡೆ ವಿದ್ಯುತ್ ವ್ಯತ್ಯಯ

ಬೆಂಗಳೂರು: ಕೆಪಿಟಿಸಿಎಲ್ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ 66/11ಕೆವಿ ಪುಟ್ಟೇನಹಳ್ಳಿ ಉಪಕೇಂದ್ರ ವ್ಯಾಪ್ತಿಯಲ್ಲಿ ಅಕ್ಟೋಬರ್ 28ರಂದು ಬೆಳಿಗ್ಗೆ 11ರಿಂದ ಸಂಜೆ 4ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ.

ವೆಂಕಟಾಲ, ಪಾಲನಹಳ್ಳಿ, ಕಟ್ಟಿಗೇನಹಳ್ಳಿ, ಸೆಂಚುರಿ ಲೇಔಟ್, ಅನಂತಪುರ ಗೇಟ್, ಏರ್ ಫೋರ್ಸ್, ಮಾರಸಂದ್ರ, ಶ್ರೀರಾಮನಹಳ್ಳಿ, ನೆಲಕುಂಟೆ, ಹನಿಯೂರು, ಚೆಲ್ಲಹಳ್ಳಿ, ಕರ್ಲಾಪುರವೆಂಕಟಾಲ, ಪಾಲನಹಳ್ಳಿ, ರಾಮ್ಕಿ ಉತ್ತರ-1, ಮಾರುತಿ ನಗರ, ಪ್ರೆಸ್ಟೀಜ್ ನಗರ, ಮಾರುತಿ ರಾಯಲ್ ಗಾರ್, ಮಾರುತಿ ನಗರ, ಕೋಗಿಲು, ಪೂಜಾ ಮಹಾಲಕ್ಷ್ಮಿ, ಸಪ್ತಗಿರಿ, ಪ್ರಕೃತಿ ನಗರ, ಶ್ರೀನಿವಾಸಪುರ, ಅಯ್ಯಪ್ಪ ಎನ್‌ಕ್ಲೇವ್, ಎಸ್‌ಎನ್.ಹಳ್ಳಿ, ಮೈಲಪನಹಳ್ಳಿ ಮತ್ತು ಸುತ್ತಮುತ್ತಲಿನ ಪ್ರದೇಶ.

‘ಕುಮಾರಸ್ವಾಮಿ ಕ್ರಮದಿಂದ ಅರಣ್ಯಕ್ಕೆ ಧಕ್ಕೆ’

ಬಳ್ಳಾರಿ: ‘ಸಂಡೂರಿನಲ್ಲಿ ಕುದುರೆಮುಖ ಕಬ್ಬಿಣದ ಅದಿರು ಕಂಪನಿ ನಡೆಸಲು ಉದ್ದೇಶಿಸಿರುವ ‘ದೇವದಾರಿ ಗಣಿ’ಯನ್ನು ಯಾವುದೇ ಕಾರಣಕ್ಕೂ ನೀಡಬಾರದು’ ಎಂದು ಸರ್ವೋದಯ ಕರ್ನಾಟಕದ ಉಗ್ರನರಸಿಂಹೇಗೌಡ ಆಗ್ರಹಿಸಿದರು.

‘ಗಣಿಗಾರಿಕೆಗೆ ಸ್ಥಳೀಯರ ವಿರೋಧವಿದೆ. ನಾವು ಅವರ ಪರ ಇದ್ದೇವೆ. ಗಣಿಗಾರಿಕೆಯಿಂದ ಸಂಡೂರಿನಲ್ಲಿ ಲಾರಿ ಚಾಲಕ ಮತ್ತು ಕ್ಲೀನರ್ ಕೆಲಸ ಸಿಗುವುದೇ ಹೊರತು ಬೇರೆ ಉದ್ಯೋಗ ಸಿಗಲ್ಲ’ ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರೇ ಅರಣ್ಯ ನಾಶಕ್ಕೆ ಮುಂದಾಗಿದ್ದಾರೆ. ದೇವದಾರಿ ಗಣಿಗೆ ಅರಣ್ಯ ಹಕ್ಕು ಕಾಯ್ದೆಯಡಿ ಅಕ್ರಮವಾಗಿ ಪ್ರಮಾಣ ಪತ್ರ ನೀಡಲಾಗಿದೆ. ಇದರ ತನಿಖೆ ಆಗಬೇಕು’ ಎಂದರು.

‘ಸಂಡೂರಿನಲ್ಲಿ ಸದ್ಯ ವಾರ್ಷಿಕ 50 ದಶಲಕ್ಷ ಟನ್ ಅದಿರು ಉತ್ಪಾದನೆ ಆಗುತ್ತಿದೆ. ಅದನ್ನು 20 ದಶಲಕ್ಷ ಟನ್‌ಗೆ ಇಳಿಸುವಂತೆ ಸುಪ್ರೀಂ ಕೋರ್ಟ್‌ಗೆ ಕೇಂದ್ರದ ಉನ್ನತಾಧಿಕಾರ ಸಮಿತಿ ಸಲ್ಲಿಸಿದ ಶಿಫಾರಸಿನಲ್ಲಿ ಉಲ್ಲೇಖವಿದೆ. ಹೀಗಿದ್ದ ಮೇಲೆ ಅರಣ್ಯ ಪ್ರದೇಶದಲ್ಲಿ ಹೊಸ ಗಣಿ ಯಾಕೆ ಬೇಕು’ ಎಂದು ಅವರು ಪ್ರಶ್ನಿಸಿದರು.

ಬಂಜೆತನ ತಪಾಸಣೆ ಶಿಬಿರ

ಬೆಂಗಳೂರು: ರಾಜ್ಯೋತ್ಸವದ ಪ್ರಯುಕ್ತ ಗುಣಶೀಲ ಆಸ್ಪತ್ರೆ ಮತ್ತು ಫರ್ಟಿಲಿಟಿ ಸೆಂಟರ್‌ನ ಬಸವನಗುಡಿ ಮತ್ತು ಕೋರಮಂಗಲ ಕೇಂದ್ರಗಳಲ್ಲಿ ನವೆಂಬರ್ 1ರಂದು ಬಂಜೆತನ, ಗರ್ಭಕೋಶ, ಅಧಿಕ ರಕ್ತಸ್ರಾವ ಸಮಸ್ಯೆ ಎದುರಿಸುತ್ತಿರುವ ದಂಪತಿಗೆ ಉಚಿತ ತಪಾಸಣೆ ಶಿಬಿರವನ್ನು ಹಮ್ಮಿಕೊಂಡಿದೆ.

ಬೆಳಿಗ್ಗೆ 8.30ರಿಂದ ಮಧ್ಯಾಹ್ನ 3 ರವರೆಗೆ ನಡೆಯುವ ಶಿಬಿರದಲ್ಲಿ ಡಾ. ದೇವಿಕಾ ಗುಣಶೀಲ ನೇತೃತ್ವದ ವೈದ್ಯರ ತಂಡ ಮಕ್ಕಳಿಲ್ಲದ ದಂಪತಿಗಳಿಗೆ ಉಚಿತ ತಪಾಸಣೆ, ಸ್ಕ್ಯಾನಿಂಗ್ ಮತ್ತು ಸಲಹೆಗಳನ್ನು ನೀಡಲಿದೆ. ಹೆಸರು ನೋಂದಾಯಿಸಲು 080-46462600 ಅಥವಾ 9900085752 ಸಂಪರ್ಕಿಸಬಹುದು.

ಬಾಬುಗೆ ನಿರ್ದೇಶಕ ರತ್ನ ಗೌರವ

ಪ್ರಜಾವಾಣಿ ವಾರ್ತೆ



ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಸೋಮವಾರ ಆಯೋಜಿಸಿದ್ದ ‘ಎಸ್.ವಿ.ಆರ್.@50’ ಸಮಾರೋಪ ಸಮಾರಂಭದಲ್ಲಿ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರಿಗೆ ನಿರ್ದೇಶಕ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪತ್ನಿ ಅನುರಾಧಾ ಜೊತೆಗಿದ್ದರು — ಪ್ರಜಾವಾಣಿ ಚಿತ್ರ

ಬೆಂಗಳೂರು: ಕನ್ನಡ ಚಿತ್ರರಂಗದ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಅವರು ಚಲನಚಿತ್ರ ನಿರ್ದೇಶಕರಾಗಿ 50 ವರ್ಷ ತುಂಬಿದ ಸಂಭ್ರಮದಲ್ಲಿ ತಾರೆಯರು, ಕಲಾವಿದರ ಸಮ್ಮುಖದಲ್ಲಿ ‘ನಿರ್ದೇಶಕ ರತ್ನ’ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಆಯೋಜಿಸಿದ್ದ ಐದು ದಿನಗಳ ಎಸ್‌ವಿಆರ್ 50 ಸಾಧನೆ, ಸಂಭ್ರಮ, ಚಿತ್ರೋತ್ಸವದ ಸಮಾರೋಪ ಸಮಾರಂಭ ರವೀಂದ್ರ ಕಲಾಕ್ಷೇತ್ರದಲ್ಲಿ ಆತ್ಮೀಯ ಕ್ಷಣಗಳಿಗೆ ಸಾಕ್ಷಿಯಾಯಿತು.

ಚಿತ್ರರಂಗದಲ್ಲಿ ಬೆಳೆಯಲು ಬಾಬು ಅವರು ಪ್ರೋತ್ಸಾಹಿಸಿದ ಕ್ಷಣಗಳನ್ನು ನಟಿ ಸುಹಾಸಿನಿ, ಅರ್ಜುನ್ ಸರ್ಜಾ, ರವಿಚಂದ್ರನ್, ಹಂಸಲೇಖ ಸಹಿತ ಹಲವರು ನೆನಪಿಸಿಕೊಂಡರು.

ಸಂಗೀತ ನಿರ್ದೇಶಕ ಹಂಸಲೇಖ ಅವರಂತೂ ಚಿನ್ನದ ಪದಕ ನೀಡಿ, ವಿಶೇಷ ದೇಸಿ ಶೈಲಿಯ ಸನ್ಮಾನ ಮಾಡಿ, ‘ಮುತ್ತಿನ ಹಾರ’ದ ಆ ದಿನಗಳ ಒಡನಾಟವನ್ನು ನೆನಪಿಸಿಕೊಂಡರು. ಹಂಸಲೇಖ ತಂಡದವರು ನಡೆಸಿಕೊಟ್ಟ ಸಂಗೀತ ಲಹರಿ ಕಾರ್ಯಕ್ರಮ ಬಾಬು ಅವರ ಚಿತ್ರಗಳಲ್ಲಿನ ಸುಮಧುರ ಹಾಡುಗಳ ಯಾನದಂತೆಯೇ ಇತ್ತು.

‘ಬಾಬು ಇಲ್ಲದಿದ್ದರೆ ಜೀರೋ’: ಸನ್ಮಾನಿಸಿ ಮಾತನಾಡಿದ ನಟಿ ಸುಹಾಸಿನಿ, ‘ನನ್ನನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿ ಈ ಮಟ್ಟಕ್ಕೆ ಜನರ ಪ್ರೀತಿ ಗಳಿಸಲು ಕಾರಣರಾದವರೇ ಬಾಬು. ನನಗೆ ಅವರು ಅವಕಾಶ ಕೊಡದೇ ಇದ್ದರೆ ಸುಹಾಸಿನಿ ಜೀರೋ ಆಗಿರುತ್ತಿದ್ದರು. ಅವರನ್ನು ಸದಾ ನೆನಪಿಸಿಕೊಳ್ಳಬೇಕು. 70–80ರ ದಶಕದಲ್ಲಿಯೇ ದೊಡ್ಡ ಬಜೆಟ್‌ನ ಚಿತ್ರಗಳನ್ನು ಮಾಡಿದ ಸಾಹಸಿಗ ಬಾಬು. ದೊಡ್ಡದಾಗಿ ಯೋಚಿಸುವ ಧೈರ್ಯವಂತ ನಿರ್ದೇಶಕರು’ ಎಂದು ಹೇಳಿದರು.

ನಟ ರವಿಚಂದ್ರನ್ ಮಾತನಾಡಿ, ‘ಎಷ್ಟೇ ಕಷ್ಟ ಬಂದರೂ ಚಿತ್ರರಂಗದಲ್ಲಿ ಸದಾ ಕನಸು ಕಾಣುವ, ವಿಭಿನ್ನ ಸಿನಿಮಾ ಮಾಡುವ ಉತ್ಸಾಹ ತುಂಬಿದವರು ಬಾಬು. ಸಿನಿಮಾ ಗೆದ್ದಾಗ ಮಾತ್ರವಲ್ಲದೇ ಸೋತಾಗಲೂ ನಮ್ಮೊಂದಿಗೆ ಇದ್ದು ಬೆನ್ನೆಲುಬಾಗಿ ನಿಲ್ಲುವ ಆ ಗುಣದಿಂದಲೇ ನಮ್ಮ ಒಡನಾಟ ಈಗಲೂ ಉಳಿದಿದೆ’ ಎಂದು ನೆನಪಿಸಿಕೊಂಡರು.

ನಟ ಅರ್ಜುನ್ ಸರ್ಜಾ ಮಾತನಾಡಿ, ‘ಸಿಂಹದ ಮರಿ ಸೈನ್ಯ ಚಿತ್ರದಲ್ಲಿ ಮೊದಲು ಅಭಿನಯಿಸಲು ಅವಕಾಶ ಕೊಟ್ಟರು. ಅಭಿನಯದ ವೇಳೆ ಅವರಿಂದ ಏಟು ತಿಂದು ಕಲಿತಿದ್ದರಿಂದಲೇ ಈಗ ಈ ಹಂತಕ್ಕೆ ಬೆಳೆದಿದ್ದೇನೆ. ಕನ್ನಡ ಚಿತ್ರರಂಗದ ದಿಗ್ಗಜ ನಿರ್ದೇಶಕ ಅವರು’ ಎಂದು ನುಡಿದರು.

ನಿರ್ದೇಶಕ ಹಂಸಲೇಖ, ‘ಎಸ್‌ವಿಆರ್ ಅವರು ‘ಬಣ್ಣದ ಗೆಜ್ಜೆ’ ಚಿತ್ರಕ್ಕೆ ಹಾಡೊಂದನ್ನು ರಚಿಸಿಕೊಡಲು ಹೇಳಿದ್ದರು. ಅದಕ್ಕೆ ‘ಸ್ವಾತಿ ಮುತ್ತಿನ ಮಳೆ ಹನಿಯೇ’ ಎಂಬ ಗೀತೆ ಬರೆದು, ಅದು ಮದ್ರಾಸ್ ಸ್ಟುಡಿಯೋದಲ್ಲಿ ಅದ್ಭುತವಾಗಿ ರೆಕಾರ್ಡಿಂಗ್ ಆದ ಬಗೆಯನ್ನು ಮರೆಯಲು ಸಾಧ್ಯವಿಲ್ಲ. ‘ಮುತ್ತಿನಹಾರ’ ಸೇರಿ ಹಲವು ಸಿನಿಮಾಗಳಿಗೆ ಗೀತೆ ರಚಿಸಲು ಎಸ್‌ವಿಆರ್ ಕಾರಣಕರ್ತರು‘ ಎಂದು ಹೇಳಿದರು.

ನಟ ಧ್ರುವ ಸರ್ಜಾ, ನಿರ್ದೇಶಕರಾದ ನಾಗತಿಹಳ್ಳಿ ಚಂದ್ರಶೇಖರ್, ಟಿ.ಎನ್. ಸೀತಾರಾಂ, ಕಂದೀಲು ಚಿತ್ರ ನಿರ್ಮಾಪಕ ಪ್ರಕಾಶ್ ಕಾರ್ಯಪ್ಪ, ಪತ್ರಕರ್ತ ಗಂಗಾಧರ್ ಮೊದಲಿಯಾರ್, ಮಂಡಳಿ ಅಧ್ಯಕ್ಷ ಕೃಷ್ಣೇಗೌಡ ಹಾಜರಿದ್ದರು.

‘ಕನ್ನಡ ಚಿತ್ರರಂಗವೇ ನನ್ನ ಕರ್ಮಭೂಮಿ’

‘ಹುಟ್ಟಿದರೆ ಕನ್ನಡ ನಾಡಿನಲ್ಲಿಯೇ ಮತ್ತೆ ಹುಟ್ಟಬೇಕು. ಮುಂದಿನ ಹತ್ತು ಜನುಮದಲ್ಲೂ ಕನ್ನಡ ಚಿತ್ರರಂಗದಲ್ಲಿಯೇ ಕೆಲಸ ಮಾಡುವ ಆಸೆಯಿದೆ’ ಎಂದು ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ನುಡಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ‘ನಾನು ಹಿಂದಿ, ತೆಲುಗು ಸಹಿತ ಹಲವು ಭಾಷೆಗಳಲ್ಲಿ ಕೆಲಸ ಮಾಡಿದ್ದರೂ ಕನ್ನಡ ಚಿತ್ರರಂಗದ ಕಾಯಕವೇ ಖುಷಿ ಕೊಟ್ಟಿದೆ. ನಮ್ಮ ನೆಲ, ಮಣ್ಣು, ಗಾಳಿ ಎಂದರೆ ನನಗೆ ಸದಾ ಸ್ಫೂರ್ತಿ’ ಎಂದು ಹೇಳಿದರು. ‘ಹೇಮಾಮಾಲಿನಿಯಂತಹ ನಟಿಯರು ಹಿಂದಿಯಲ್ಲಿ ಕೆಲಸ ಮಾಡಲು ಅವಕಾಶ ಕೊಟ್ಟರು. ರಮೇಶ್ ಸಿಪ್ಪಿಯಂತಹವರನ್ನು ಒಪ್ಪಿಸಿದವರು ಅವರು. ವೀರಸ್ವಾಮಿ, ಕೆಸಿಎನ್ ಚಂದ್ರಶೇಖರ್ ಸಹಿತ ಹಲವರು ಬೆನ್ನುಲುಬಾಗಿ ನಿಂತರು. ವಿಷ್ಣುವರ್ಧನ್, ಅಂಬರೀಷ್ ಅಂಥವರನ್ನು ಸದಾ ನೆನೆಯುವೆ’ ಎಂದರು.

ಚಿಟಿಕೆ ಸುದ್ದಿ

ಸಾಹಿತ್ಯ ಸಮ್ಮೇಳನ: ಮಾಂಸಾಹಾರವೂ ಇರಲಿ– ಮನವಿ

ಬಳ್ಳಾರಿ: 'ಬಳ್ಳಾರಿಯಲ್ಲಿ ನಡೆಯುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಸ್ಯಾಹಾರದ ಜೊತೆ ಮಾಂಸಾಹಾರವನ್ನು ಒದಗಿಸಿ, ಆಹಾರ ಸಮಾನತೆ ಕಾಯ್ದುಕೊಳ್ಳಬೇಕು' ಎಂದು 'ನಾವು ದ್ರಾವಿಡ ಕನ್ನಡಿಗರು ಚಳವಳಿ' ಸಂಘಟನೆ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದೆ.

'ಮಂಡ್ಯದಲ್ಲಿ ನಡೆದ ಸಮ್ಮೇಳನದಲ್ಲಿ ಆಹಾರದಲ್ಲಿ ಸಮಾನತೆಗಾಗಿ ಹೋರಾಟ ನಡೆದಿದ್ದು, ಮೊಟ್ಟೆ ನೀಡಲಾಗಿತ್ತು. ಈಗ ಬಳ್ಳಾರಿ ಸಮ್ಮೇಳನ ನಡೆಯುವ ದಿನಾಂಕ ಘೋಷಣೆ ಜತೆಗೆ ಆಹಾರ ಪಟ್ಟಿ ಪ್ರಕಟಿಸಬೇಕು' ಎಂದು ಸಂಘಟನೆಯು ಕೋರಿದೆ. ಆಗ್ರಹಿಸಿದೆ. ಸಂಘಟನೆಯ ಚೇತನ್, ಬಳ್ಳಾರಿ ಶೇಖರ್ ಬಾಬು, ಮಂಡ್ಯದ ಅಭಿ ಒಕ್ಕಲಿಗ ಅವರು ಮನವಿ ಸಲ್ಲಿಸಿದರು.

'ಮತ್ತಿನಲ್ಲಿ ಗುಂಡು ಸಿಡಿಸಿಕೊಂಡ'

ಕುಕನೂರು (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಚಿಕ್ಕಬಿಡನಾಳ ಗ್ರಾಮದಲ್ಲಿ ಮದ್ಯದ ಅಮಲಿನಲ್ಲಿ ವ್ಯಕ್ತಿಯೊಬ್ಬ ಎದೆಗೆ ನಾಡ ಬಂದೂಕಿನಿಂದ ಗುಂಡು ಹೊಡೆದುಕೊಂಡಿದ್ದು, ಕೊಪ್ಪಳ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.



ಆನಂದ ಪೊಲೀಸ್ ಪಾಟೀಲ್ (29) ಗಾಯಗೊಂಡ ವ್ಯಕ್ತಿ. ಕುಟುಂಬದಿಂದ ದೂರವಾಗಿ ಹೊಲದ ತಗಡಿನ ಮನೆಯಲ್ಲಿ ವಾಸವಾಗಿದ್ದರು. ಅಕ್ರಮವಾಗಿ ಶಸ್ತ್ರಾಸ್ತ್ರ ಹೊಂದಿದ್ದರಿಂದ ಕುಕನೂರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

2 ಕಡೆ ಪಥಸಂಚಲನ: ಯಾದಗಿರಿ ಡಿ.ಸಿ.ಗೆ ಮನವಿ

ಯಾದಗಿರಿ: ಗುರುಮಠಕಲ್, ಕೆಂಭಾವಿ ಪಟ್ಟಣಗಳಲ್ಲಿ ಪಥಸಂಚಲನ ನಡೆಸಲು ಅನುಮತಿ ಕೋರಿ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಕಾರ್ಯಕರ್ತರು ಜಿಲ್ಲಾಧಿಕಾರಿ ಹರ್ಷಲ್ ಭೋಯರ್ ಅವರಿಗೆ ಸೋಮವಾರ ಮನವಿಪತ್ರ ಸಲ್ಲಿಸಿದ್ದಾರೆ.

'ಗುರುಮಠಕಲ್‌ನಲ್ಲಿ ಅಕ್ಟೋಬರ್ 31 ಹಾಗೂ ಕೆಂಭಾವಿಯಲ್ಲಿ ನವೆಂಬರ್ 4ರಂದು ಪಥಸಂಚಲನ ನಡೆಸಲು ಅನುಮತಿ ನೀಡುವಂತೆ ಜಿಲ್ಲಾಧಿಕಾರಿಗೆ ಮನವಿಪತ್ರ ಸಲ್ಲಿಸಿದ್ದೇವೆ' ಎಂದು ಆರ್‌ಎಸ್‌ಎಸ್ ಕಾರ್ಯಕರ್ತ ಸುರೇಶ ಅಂಬಿಗೇರ 'ಪ್ರಜಾವಾಣಿ'ಗೆ ತಿಳಿಸಿದರು.

'ಹುಲಿ ದಾಳಿಯಿಂದ ಸಾವು: ಅಧಿಕಾರಿಗಳ ನಿರ್ಲಕ್ಷ್ಯ ಇದ್ದರೆ ಕ್ರಮ'

ಮೈಸೂರು: 'ಜಿಲ್ಲೆಯ ಸರಗೂರು ತಾಲ್ಲೂಕಿನ ಬೆಣ್ಣೆಗೆರೆ ಬಳಿ ಹುಲಿ ದಾಳಿಯಿಂದ ರೈತ ಮೃತಪಟ್ಟ ಪ್ರಕರಣದಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಕಂಡುಬಂದಲ್ಲಿ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು' ಎಂದು ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದರು. ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ಹುಲಿಯ ಚಲನವಲನದ ಬಗ್ಗೆ ದೂರು ಬಂದಿದ್ದರೂ ಬೋನು ಇಡುವಲ್ಲಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದರೆ ಅವರ ಮೇಲೆ ಕ್ರಮ ಜರುಗಿಸಲಾಗುವುದು' ಎಂದು ಹೇಳಿದರು.



ಈಶ್ವರ ಬಿ. ಖಂಡ್ರೆ

ಭಾನುವಾರ ಸಂಜೆ ಹುಲಿ ದಾಳಿಯಿಂದ ರೈತ ರಾಜಶೇಖರ್ ಅವರು ಮೃತಪಟ್ಟಿದ್ದರು. ಎಚ್.ಡಿ.ಕೋಟೆ ಅಥವಾ ಸರಗೂರಿನಲ್ಲೇ ಮರಣೋತ್ತರ ಪರೀಕ್ಷೆಗೆ ಅವಕಾಶ ಇದ್ದರೂ, ಮೈಸೂರಿಗೆ ಏಕೆ ಶವ ತಂದರು ಎಂದು ಗೊತ್ತಿಲ್ಲ. ದೇಹ ಕೊಳೆಯದಂತೆ ಇಡಲು ತಂದಿದ್ದಾಗಿ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ' ಎಂದು ತಿಳಿಸಿದರು.

'ಹುಲಿ, ಕಾಡಾನೆಗಳ ಸೆರೆಗೆ ಕೈಗೊಳ್ಳಬೇಕಾದ ಮುಂಜಾಗ್ರತೆ ಕ್ರಮಗಳ ಕುರಿತು ಸದ್ಯದಲ್ಲೇ ಬಂಡೀಪುರದಲ್ಲಿ ಅಧಿಕಾರಿಗಳ ಸಭೆ ಆಯೋಜಿಸಲಾಗುವುದು' ಎಂದರು.

ವಿದೇಶದಿಂದ ಫೈನಾನ್ಸ್ ಸಂಸ್ಥೆ ಖಾತೆಗೆ ಕನ್ನ

656 ನಕಲಿ ಬ್ಯಾಂಕ್ ಖಾತೆಗಳಿಗೆ ₹49 ಕೋಟಿ ವರ್ಗ, ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶದಲ್ಲಿ ಕುಳಿತು ನಗರದ ವಿಸ್ಡಮ್ ಫೈನಾನ್ಸ್‌ಗೆ ಸೇರಿದ ಹಲವು ಬ್ಯಾಂಕ್ ಖಾತೆಗಳಿಗೆ ಕನ್ನ ಹಾಕಿ ₹49 ಕೋಟಿ ವಂಚಿಸಿದ್ದ ಪ್ರಕರಣದಲ್ಲಿ ಇಬ್ಬರು ಆರೋಪಿಗಳನ್ನು ಸೈಬರ್ ಅಪರಾಧ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬೆಳಗಾವಿಯ ಇಸ್ಮಾಯಿಲ್ ರಶೀದ್ ಅತ್ತಾರ್ (27) ಹಾಗೂ ರಾಜಸ್ಥಾನದ ಉದಯಪುರದ ಸಂಜಯ್ ಪಾಟೀಲ್ (43) ಬಂಧಿತರು. ಬಂಧಿತರಿಂದ ಹಣ, ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಜಪ್ತಿ ಮಾಡಲಾಗಿದೆ.

ವಿಸ್ಡಮ್ ಫೈನಾನ್ಸ್‌ನ ಹಿರಿಯ ವ್ಯವಸ್ಥಾಪಕ ಪ್ರಕಾಶ್ ಅವರು ಈ ಸಂಬಂಧ ದೂರು ನೀಡಿದ್ದರು. ಆಗಸ್ಟ್ 6 ಹಾಗೂ 7ರಂದು ರಾತ್ರಿ ಅನಧಿಕೃತ ಖಾತೆಗಳಿಗೆ ಫೈನಾನ್ಸ್ ಹಣವು ವರ್ಗಾವಣೆ ಆಗಿದೆ ಎಂಬುದಾಗಿ ದೂರಿನಲ್ಲಿ ಉಲ್ಲೇಖಿಸಿದ್ದರು. ಆ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಸೀಮಾಂತ್‌ಕುಮಾರ್ ಸಿಂಗ್ ಅವರು ಮಾಧ್ಯಮಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಈ ಕೃತ್ಯದಲ್ಲಿ ಇನ್ನೂ ಹಲವರ ಪಾತ್ರವಿರುವುದು ಕಂಡುಬಂದಿದ್ದು, ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ವಿದೇಶಿ ಐಪಿ ವಿಳಾಸ ಬಳಸಿ ಕಂಪನಿಯ ಖಾತೆಗಳಿಂದ 656 ಖಾತೆಗಳಿಗೆ ಹಣ ವರ್ಗಾವಣೆ ಮಾಡಿಕೊಂಡಿರುವುದು ತನಿಖೆಯಿಂದ ಗೊತ್ತಾಗಿದೆ ಎಂದು ಮಾಹಿತಿ ನೀಡಿದರು.

'ಎಂಟನೇ ತರಗತಿ ಓದಿರುವ ಸಂಜಯ್ ಪಾಟೀಲ್ ಪ್ಲಂಬಿಂಗ್ ಕೆಲಸ ಮಾಡುತ್ತಿದ್ದ. ಎಸ್‌ಎಸ್‌ಎಲ್‌ಸಿ ಓದಿರುವ ಇಸ್ಮಾಯಿಲ್ ರಶೀದ್ ಅತ್ತಾರ್ ಡಿಜಿಟಲ್ ಮಾರ್ಕೆಟಿಂಗ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ. ದುಬೈ, ಹಾಂಕಾಂಗ್ ಹಾಗೂ ಚೀನಾದಲ್ಲಿ ಕುಳಿತು ಬ್ಯಾಂಕ್ ಖಾತೆಗಳನ್ನು ಹ್ಯಾಕ್ ಮಾಡುತ್ತಿದ್ದವರಿಗೆ ಇಬ್ಬರೂ ನೆರವು ನೀಡಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.



ವಂಚನೆಗೆ ಬಳಸಲಾಗಿದ್ದ 600 ಬ್ಯಾಂಕ್ ಖಾತೆಗಳಲ್ಲಿ ಹಣ ವರ್ಗಾವಣೆ ಸ್ಥಗಿತಗೊಳಿಸಲಾಗಿದೆ. ಇದುವರೆಗೂ ₹10 ಕೋಟಿ ಹಣವನ್ನು ಹಿಂದಕ್ಕೆ ಪಡೆಯಲಾಗಿದೆ. ದುಬೈನಲ್ಲಿ ಕುಳಿತು ವಂಚನೆಯ ಜಾಲ ನಡೆಸುತ್ತಿದ್ದ ಭಾರತ ಮೂಲದ ಮತ್ತಿಬ್ಬರ ಮಾಹಿತಿ ಲಭ್ಯವಾಗಿದ್ದು, ಶೀಘ್ರದಲ್ಲೇ ಅವರನ್ನೂ ಬಂಧಿಸುತ್ತೇವೆ ಎಂದು ಹೇಳಿದರು.

ವಂಚನೆಗಾಗಿ ವರ್ಚುವಲ್ ಪ್ರೈವೆಟ್ ನೆಟ್‌ವರ್ಕ್‌ನ ವಿಪಿಎನ್ ಬಳಸಿದ್ದ ಸೈಬರ್ ವಂಚಕರು, ಫೈನಾನ್ಸ್ ಕಂಪನಿಯ ಅಪ್ಲಿಕೇಶನ್‌ನ ಎಪಿಐ ಗೇಟ್‌ವೇ ದುರುಪಯೋಗ ಮಾಡಿಕೊಂಡಿದ್ದರು. ಈ ಕೃತ್ಯಕ್ಕಾಗಿ ಹಾಂಕಾಂಗ್, ಫಿಲಿಪ್ಪೀನ್ಸ್ ಮೂಲದ ಹ್ಯಾಕರ್ಸ್‌ಗಳನ್ನು ಬಳಸಿಕೊಂಡಿದ್ದರು. ಬಳಿಕ ಕಂಪನಿಯ ಖಾತೆಯಿಂದ ವಿವಿಧ ಖಾತೆಗಳಿಗೆ ಹಣ ವರ್ಗಾಯಿಸಿದ್ದರು. ನಂತರ, ಆ ಹಣ ವಂಚಕರ ಖಾತೆಗಳಿಗೆ ಜಮೆ ಆಗಿತ್ತು ಎಂಬುದು ತನಿಖೆಯಿಂದ ಗೊತ್ತಾಗಿದೆ.

ಹಣ ವರ್ಗ: ಆಂತರಿಕ ತನಿಖೆಯಿಂದ ಪತ್ತೆ

ಮಾರತ್‌ಹಳ್ಳಿಯ ಹೊರವರ್ತುಲ ರಸ್ತೆಯಲ್ಲಿರುವ ಫೈನಾನ್ಸ್ ಕಂಪನಿಯ ಖಾತೆಗಳಿಗೆ ಸೈಬರ್ ವಂಚಕರು ಕನ್ನ ಹಾಕಿದ್ದರು. ಆಗಸ್ಟ್ 6 ಮತ್ತು 7ರಂದು ಕಂಪನಿಯ ಅನುಮತಿಯಿಲ್ಲದೇ ಕೆಲವು ಖಾತೆಗಳಿಗೆ ಅನಿಯಮಿತ ಮತ್ತು ಅನುಮಾನಾಸ್ಪದವಾಗಿ ₹47 ಕೋಟಿ ವರ್ಗಾವಣೆ ಆಗಿತ್ತು. ಆಗಸ್ಟ್ 7ರಂದು ಸಂಸ್ಥೆಯ ಅಧಿಕಾರಿಗಳು ಖಾತೆ ಪರಿಶೀಲಿಸಿದಾಗ ಅಕ್ರಮವಾಗಿ ಹಣ ವರ್ಗಾವಣೆ ಆಗಿರುವುದು ಗೊತ್ತಾಗಿತ್ತು. ಅದಾದ ಮೇಲೆ ಸಂಸ್ಥೆ, ಆಂತರಿಕ ತನಿಖೆ ನಡೆಸಿತ್ತು. ತನಿಖೆ ನಡೆಸಿದಾಗ ವಿದೇಶಿ ಐಪಿ ವಿಳಾಸ ಬಳಸಿ ಹಣ ವರ್ಗಾವಣೆ ಮಾಡಿಕೊಂಡಿರುವುದು ಗೋಚರಿಸಿತ್ತು. ಬಳಿಕ ಹಿರಿಯ ವ್ಯವಸ್ಥಾಪಕರು ದೂರು ನೀಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ದುಬೈ ವ್ಯಕ್ತಿಯ ಜತೆಗೆ ನಿಕಟ ಸಂಪರ್ಕ

ಹಣ ವರ್ಗಾವಣೆಯಾದ ಬ್ಯಾಂಕ್ ಖಾತೆಗಳ ವಿವರ ಆಧರಿಸಿ ಸಂಜಯ್ ಪಾಟೀಲ್ ಹಾಗೂ ಇಸ್ಮಾಯಿಲ್ ರಶೀದ್ ಅತ್ತಾರ್‌ನನ್ನು ಬಂಧಿಸಲಾಗಿದೆ. ದುಬೈನಲ್ಲಿರುವ ವಂಚಕರ ತಂಡದೊಂದಿಗೆ ಇಸ್ಮಾಯಿಲ್ ನಿಕಟ ಸಂಪರ್ಕ ಹೊಂದಿರುವುದು ತನಿಖೆಯಿಂದ ಗೊತ್ತಾಗಿದೆ

ಸೀಮಾಂತ್‌ಕುಮಾರ್ ಸಿಂಗ್, ನಗರ ಪೊಲೀಸ್ ಕಮಿಷನರ್

ಒಂದೇ ಖಾತೆಗೆ ₹27 ಲಕ್ಷ ವರ್ಗ

ಸಂಜಯ್ ಪಾಟೀಲ್‌ನನ್ನು ಬಂಧಿಸಿ ತನಿಖೆ ನಡೆಸಿದಾಗ ಆತನ ಹೆಸರಿನಲ್ಲಿ ಎಸ್‌ಬಿಐ ಬ್ಯಾಂಕ್‌ನಲ್ಲಿದ್ದ ಖಾತೆಗೆ ₹27.39 ಲಕ್ಷ ವರ್ಗಾವಣೆ ಆಗಿರುವುದು ಪತ್ತೆಯಾಯಿತು. ತನಿಖೆ ಮುಂದುವರಿಸಿದಾಗ ಕಂಪನಿಗೆ ಸೇರಿದ ₹5.5 ಕೋಟಿಯನ್ನು ಹೈದಾರಾಬಾದ್‌ನ ಇಚಿಲೋನ್ ಸೈನ್ಸ್ ಟೆಕ್ ಸಂಸ್ಥೆಯ ಖಾತೆಗೆ ವರ್ಗಾಯಿಸಿ, ನಂತರ ಫ್ಲಿಪೊ ಪೇ (ಐಡಿಎಫ್‌ಸಿ ಬ್ಯಾಂಕ್ ಖಾತೆಗೆ) ಖಾತೆಗೆ ವರ್ಗಾವಣೆ ಮಾಡಿರುವುದು ದೃಢಪಟ್ಟಿತ್ತು. ಇಚಿಲೋನ್ ಸೈನ್ಸ್ ಟೆಕ್ ಸಂಸ್ಥೆಯು, ವೆಬ್‌ಯಾನೆ ಡಾಟಾ ಸೆಂಟರ್‌ಗೆ ಸೇರಿದ ಐಪಿ ವಿಳಾಸಗಳ ಮೂಲಕ ವ್ಯವಹಾರ ನಡೆಸಿದೆ. ಆ ಐಪಿ ವಿಳಾಸವನ್ನು ಮತ್ತೊಬ್ಬ ವ್ಯಕ್ತಿ ಖರೀದಿಸಿರುವುದು ತನಿಖೆಯಿಂದ ದೃಢಪಟ್ಟಿದೆ ಎಂದು ಪೊಲೀಸರು ಹೇಳಿದರು.


ಸುದ್ದಿ 2 ನಿಮಿಷ

₹25.30 ಕೋಟಿ ಭೂ ಕಂದಾಯ ಬಾಕಿ: ಖೂಬಾಗೆ ನೋಟಿಸ್

ಕಲಬುರಗಿ: ಜಿಲ್ಲೆಯ ಕಾಳಗಿ ತಾಲ್ಲೂಕಿನ ವಚ್ಚಾ ಗ್ರಾಮ ವ್ಯಾಪ್ತಿಯಲ್ಲಿ ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸಿದ ಪ್ರಕರಣದ ಸಂಬಂಧ ಕೇಂದ್ರದ ಮಾಜಿ ಸಚಿವ ಭಗವಂತರಾಯ ಖೂಬಾ ಅವರಿಗೆ ₹25.30 ಕೋಟಿ ಪಾವತಿಸುವಂತೆ ಕಾಳಗಿ ತಹಶೀಲ್ದಾರ್ ನೋಟಿಸ್ ನೀಡಿದ್ದಾರೆ.

2014ರ ಜುಲೈ 19ರಿಂದ 2019ರ ಜುಲೈ 18ರವರೆಗೆ ಗ್ರಾಮದ ಸರ್ವೆ ನಂಬರ್ 24/4ರಲ್ಲಿ 2 ಎಕರೆಯಲ್ಲಿ ಕಟ್ಟಡದ ಕಲ್ಲು ಗಣಿಗಾರಿಕೆಗೆ ಖೂಬಾ ಅನುಮತಿ ಪಡೆದಿದ್ದರು. ಅನುಮತಿ ಪಡೆದಿದ್ದ ಪ್ರದೇಶಕ್ಕಿಂತಲೂ ಹೆಚ್ಚಿನ ಪ್ರದೇಶದಲ್ಲಿ ಕಲ್ಲು ಗಣಿಗಾರಿಕೆ ನಡೆಸಿದ ಆರೋಪ ಕೇಳಿ ಬಂದಿತ್ತು. ಈ ಕುರಿತು ಸಂಜೀವಕುಮಾರ ಜವಕರ ಎಂಬುವರು ದೂರು ನೀಡಿದ್ದರು.

ಬಳಿಕ ಭೂ ದಾಖಲೆಗಳ ಸಹಾಯಕ ನಿರ್ದೇಶಕರ ಕಚೇರಿ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯಿಂದ ಜಂಟಿ ಸಮೀಕ್ಷೆ ನಡೆದಿದ್ದು, 7.19 ಲಕ್ಷ ಟನ್ ಕಲ್ಲು ಅಕ್ರಮ ಗಣಿಗಾರಿಕೆ ನಡೆಸಿದ್ದು ಕಂಡು ಬಂದಿತ್ತು. ಈ ಕೃತ್ಯಕ್ಕೆ ದಂಡ, ರಾಜಧನ ಹಾಗೂ ಸ್ಥಿರ ಬಾಡಿಗೆ ರೂಪದಲ್ಲಿ ₹25.30 ಕೋಟಿ ಪಾವತಿಸುವಂತೆ ಖೂಬಾ ಅವರಿಗೆ ಕಾಳಗಿ ತಹಶೀಲ್ದಾರ್ ಹಲವು ನೋಟಿಸ್ ನೀಡಿದ್ದರು. ಅದನ್ನು ಪಾವತಿಸಲು ಖೂಬಾ ವಿಫಲರಾಗಿದ್ದರು.



ಬಳಿಕ ದಂಡ, ರಾಜಧನ ಹಾಗೂ ಸ್ಥಿರ ಬಾಡಿಗೆ ರೂಪದಲ್ಲಿ ಬರಬೇಕಿದ್ದ ₹25.30 ಕೋಟಿ ಮೊತ್ತವನ್ನು ಕರ್ನಾಟಕ ಉಪ ಖನಿಜ ನಿಯಮಾವಳಿಯಂತೆ ಭೂ ಕಂದಾಯ ಬಾಕಿ ಎಂದು ಪರಿಗಣಿಸಲು ನೋಟಿಸ್‌ನಲ್ಲಿ ಸೂಚಿಸಲಾಗಿದೆ. ಪ್ರತಿಕ್ರಿಯೆಗೆ ಖೂಬಾ ಅವರನ್ನು ಸಂಪರ್ಕಿಸಿದರೂ ಅವರು ಮೊಬೈಲ್ ಕರೆ ಸ್ವೀಕರಿಸಲಿಲ್ಲ.

ಬೆಂಗಳೂರು ಕೃಷಿ ವಿ.ವಿ: ಐವರು ಸಾಧಕರಿಗೆ ರಾಜ್ಯ ಮಟ್ಟದ ಪ್ರಶಸ್ತಿ

ಬೆಂಗಳೂರು: ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯವು ಕೃಷಿಮೇಳ–2025ರ ಪ್ರಯುಕ್ತ ರಾಜ್ಯಮಟ್ಟದ ರೈತ ಮತ್ತು ರೈತ ಮಹಿಳೆ ಪ್ರಶಸ್ತಿಗಳಿಗೆ ಐವರು ಕೃಷಿ ಸಾಧಕರನ್ನು ಆಯ್ಕೆ ಮಾಡಿದೆ.

ಎಚ್.ಡಿ. ದೇವೇಗೌಡ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಗೆ ಕೋಲಾರ ತಾಲ್ಲೂಕು ಮದನಹಳ್ಳಿ ಗ್ರಾಮದ ರವಿಶಂಕರ್ ಎಂ.ಎನ್., ಎಂ.ಎಚ್. ಮರೀಗೌಡ ರಾಜ್ಯಮಟ್ಟದ ಅತ್ಯುತ್ತಮ ತೋಟಗಾರಿಕೆ ರೈತ ಪ್ರಶಸ್ತಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕು ಬೀಡಿಗಾನಹಳ್ಳಿಯ ಮಂಜುನಾಥ ಬಿ.ಆರ್. ಅವರನ್ನು ಆಯ್ಕೆ ಮಾಡಲಾಗಿದೆ.

ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಪ್ರಶಸ್ತಿಗೆ ಬೆಂಗಳೂರು ದಕ್ಷಿಣ ಜಿಲ್ಲೆ ರಾಮನಗರ ತಾಲ್ಲೂಕು ಲಕ್ಷ್ಮೀಪುರ ಗ್ರಾಮದ ಶಿವರಾಜು ಎಲ್.ವಿ., ಕ್ಯಾನ್ ಬ್ಯಾಂಕ್ ರಾಜ್ಯ ಮಟ್ಟದ ಅತ್ಯುತ್ತಮ ರೈತ ಮಹಿಳೆ ಪ್ರಶಸ್ತಿಗೆ ಪದ್ಮಿನಿ, ಆರ್. ದ್ವಾರಕಿನಾಥ್ ಅತ್ಯುತ್ತಮ ರೈತ ಪ್ರಶಸ್ತಿಗೆ ಗೋವಿಂದಪ್ಪ ಎಚ್.ಎಲ್. ಅವರನ್ನು ಆಯ್ಕೆ ಮಾಡಲಾಗಿದೆ.

ಇದಲ್ಲದೇ ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆ ಪ್ರಶಸ್ತಿಗೆ ಆನೇಕಲ್ ತಾಲ್ಲೂಕು ಹಳೇಹಳ್ಳಿ ತಾಲ್ಲೂಕಿನ ಸತೀಶ್ ಕುಮಾರ್, ಯಲಹಂಕ ತಾಲ್ಲೂಕು ಚೊಕ್ಕನಹಳ್ಳಿ ಲಕ್ಷ್ಮಮ್ಮ ಸೇರಿದಂತೆ 12 ಸಾಧಕರನ್ನು ಆಯ್ಕೆ ಮಾಡಲಾಗಿದೆ.

ತಾಲ್ಲೂಕು ಮಟ್ಟದ ಯುವ ರೈತ ಮತ್ತು ಯುವ ರೈತ ಮಹಿಳೆ ಪ್ರಶಸ್ತಿಗೆ 74 ಮಂದಿಯನ್ನು ಆಯ್ಕೆ ಮಾಡಲಾಗಿದೆ ಎಂದು ಬೆಂಗಳೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಸಚಿವರು ತಿಳಿಸಿದ್ದಾರೆ.

ಸಾಲ: ಗುತ್ತಿಗೆದಾರ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಹುಬ್ಬಳ್ಳಿಯ ಹೋಟೆಲ್ ಉದ್ಯಮಿ ಹಾಗೂ ಸಿವಿಲ್ ಕಾಮಗಾರಿಗಳ ಗುತ್ತಿಗೆದಾರ ಆನಂದ ಉಮೇಶ್ ಹೆಗಡೆ (40) ಅವರು ಪಟ್ಟಣದ ದಾಕ್ಷಾಯಣಿ ಲಾಡ್ಜ್‌ನಲ್ಲಿ ಭಾನುವಾರ ರಾತ್ರಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹುಬ್ಬಳ್ಳಿಯ ಭವಾನಿ ನಗರ ನಿವಾಸಿಯಾಗಿದ್ದ ಅವರಿಗೆ ಪತ್ನಿ, ಪುತ್ರ, ಪುತ್ರಿ ಇದ್ದಾರೆ.

'ಆನಂದ ಅವರು ಖಾಸಗಿ ಫೈನಾನ್ಸ್ ಕಂಪನಿಗಳಿಂದ ₹85 ಲಕ್ಷ ಸಾಲ ಮಾಡಿಕೊಂಡಿದ್ದರು. ವಾಪಸಾತಿಗೆ ಕಂಪನಿಗಳಿಂದ ಒತ್ತಡವಿತ್ತು. ಅದರಿಂದ ನೊಂದು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ಇದೆ' ಎಂದು ಅವರ ಸಂಬಂಧಿ ಪರಮೇಶ್ವರ ಹೆಗಡೆ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಇಲ್ಲಿನ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



ಆನಂದ ಉಮೇಶ್

ಪಟ್ಟಣದ ತಾಲ್ಲೂಕು ಕ್ರೀಡಾಂಗಣ ಅಭಿವೃದ್ಧಿ ಹಾಗೂ ನವೀಕರಣ ಕಾಮಗಾರಿಯ ಟೆಂಡರ್ ಪಡೆದು ಕಾಮಗಾರಿ ನಿರ್ವಹಿಸುತ್ತಿದ್ದರು. ಸ್ನೇಹಿತರಾದ ಸುಧೀಂದ್ರ, ಗೌರೀಶ ಜತೆಗೂಡಿ ಕಂಪನಿಯನ್ನು ಸ್ಥಾಪಿಸಿದ್ದು, ಗುತ್ತಿಗೆ ಕಾಮಗಾರಿಯನ್ನು ನಿರ್ವಹಿಸುತ್ತಿದ್ದರು.

'ಹುಬ್ಬಳ್ಳಿಯಿಂದ ಭಾನುವಾರ ಬೆಳಿಗ್ಗೆ ಪಟ್ಟಣಕ್ಕೆ ಬಂದಿದ್ದ ಆನಂದ, ಲಾಡ್ಜ್‌ನಲ್ಲಿ ತಂಗಿದ್ದರು. ಸೋಮವಾರ ಬೆಳಿಗ್ಗೆ ಕುಟುಂಬದವರ ಹಲವು ಕರೆ ಮಾಡಿದ್ದರೂ ಸ್ವೀಕರಿಸಿಲ್ಲ. ಕೊಠಡಿ ಬಾಗಿಲು ತೆರೆದು ನೋಡಿದಾಗ ಕೃತ್ಯ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಮಳೆರಾಯ...

ಪ್ರಜಾವಾಣಿ ಚಿತ್ರ: ಸತೀಶ್ ಬಡಿಗೇರ



ದಾವಣಗೆರೆಯ ನಿಜಲಿಂಗಪ್ಪ ಬಡಾವಣೆ ಮುಖ್ಯರಸ್ತೆಯಲ್ಲಿ ಸೋಮವಾರ ಸುರಿಯುತ್ತಿದ್ದ ಮಳೆಯಲ್ಲಿ ಶಾಲೆಯಿಂದ ಹಿಂದಿರುಗಿದ ಮಕ್ಕಳನ್ನು ಪಾಲಕರೊಬ್ಬರು ಕೊಡೆ ಹಿಡಿದು ಕರೆದೊಯ್ಯುತ್ತಿರುವುದು

ಸ್ಪರ್ಧೆ ಮಾಡಲೇಬೇಕೆಂದು ಸ್ನೇಹಿತರು, ಬೆಂಬಲಿಗರು ಒತ್ತಾಯಿಸುತ್ತಿದ್ದಾರೆ: ಸಿ.ಎಂ

'2028ರಲ್ಲಿ ಸ್ಪರ್ಧೆ: ಇನ್ನೂ ನಿರ್ಧರಿಸಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: '2028ರ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಬಗ್ಗೆ ಇನ್ನೂ ನಿರ್ಧರಿಸಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

'ನ್ಯೂಸ್ 18' ಕನ್ನಡ ಸುದ್ದಿವಾಹಿನಿ ಆಯೋಜಿಸಿದ್ದ 'ರೈಸಿಂಗ್ ಕರ್ನಾಟಕ' ಕಾರ್ಯಕ್ರಮದಲ್ಲಿ ಸೋಮವಾರ ಮಾತನಾಡಿದ ಅವರು, 'ಹಿಂದೆ ನಾನು 2028ರ ಚುನಾವಣೆಯಲ್ಲಿ ಸ್ಪರ್ಧೆ ಮಾಡಲ್ಲ ಎಂದು ಹೇಳಿದ್ದೆ' ಎಂದರು.

'ಆದರೆ ಈಗ, 2028ರ ವಿಧಾನಸಭಾ ಚುನಾವಣೆಯಲ್ಲೂ ಸ್ಪರ್ಧೆ ಮಾಡಲೇಬೇಕು ಎಂದು ನನ್ನ ಸ್ನೇಹಿತರು, ಬೆಂಬಲಿಗರು ಹೇಳುತ್ತಿದ್ದಾರೆ. ನೀವು ಸ್ಪರ್ಧಿಸಿದರೆ ಪಕ್ಷಕ್ಕೆ ಅನುಕೂಲವಾಗುತ್ತದೆ. ಅಧಿಕಾರಕ್ಕೆ ಬರಲು ಅನುಕೂಲವಾಗುತ್ತದೆ ಎಂದು ಒತ್ತಾಯಿಸುತ್ತಿದ್ದಾರೆ. ಆದರೆ, ನಾನು ಇದರ ಬಗ್ಗೆ ಇನ್ನೂ ಗಂಭೀರವಾಗಿ ಯೋಚಿಸಿಲ್ಲ' ಎಂದಿದ್ದಾರೆ.

'ಸಂಪುಟ ಪುನರ್ ರಚನೆ ಮಾಡಿ, ಹೊಸಬರಿಗೆ ಅವಕಾಶ ಕೊಡಿ ಎಂದು ಹೈಕಮಾಂಡ್‌ನವರು 3– 4 ತಿಂಗಳ ಹಿಂದೆಯೇ ಹೇಳಿದ್ದಾರೆ. ಆಗ ನಾನು ಸರ್ಕಾರಕ್ಕೆ ಎರಡೂವರೆ ವರ್ಷ ತುಂಬಲಿ ಎಂದು ಹೇಳಿದ್ದೆ. ಈಗ ಹೈಕಮಾಂಡ್‌ನವರು ಒಪ್ಪಿಗೆ ಕೊಟ್ಟರೆ ಸಂಪುಟ ಪುನರ್ ರಚನೆ ಮಾಡುತ್ತೇನೆ' ಎಂದರು.



ಸಿದ್ದರಾಮಯ್ಯ

'ಜನಾಶೀರ್ವಾದ ಎಲ್ಲಿಯವರೆಗೆ ಇರುತ್ತೊ ಅಲ್ಲಿವರೆಗೆ ನಾನು ಅಧಿಕಾರದಲ್ಲಿರುತ್ತೇನೆ. ಯಾವುದೇ ದಾಖಲೆಯ (ದೇವರಾಜ ಅರಸು ಅವರ ದಾಖಲೆ) ಮೇಲೆ ನಂಬಿಕೆ ಇಲ್ಲ. ಜನರ ಕಷ್ಟಗಳು, ಕಾರ್ಪಣ್ಯಗಳಿಗೆ ನೆರವಾಗುವುದು ಮುಖ್ಯ' ಎಂದೂ ಹೇಳಿದ್ದಾರೆ.

> ಡಿ.ಕೆ. ಶಿವಕುಮಾರ್ ದೇವರ ಮೇಲೆ, ಗುರುಗಳ ಮೇಲೆ, ಹೈಕಮಾಂಡ್ ಮೇಲೆ ನಂಬಿಕೆ ಇಟ್ಟಿದ್ದಾರೆ. ಒಬ್ಬೊಬ್ಬರು ಒಂದೊಂದು ರೀತಿ ಪ್ರಯತ್ನ ನಡೆಸುತ್ತಾರೆ. ಅದರಲ್ಲಿ ತಪ್ಪೇನಿದೆ?
>
> **ಎನ್. ಚಲುವರಾಯಸ್ವಾಮಿ,** ಕೃಷಿ ಸಚಿವ

'ಮುನಿಯಪ್ಪ ಸಿ.ಎಂ ಆದರೆ ಸಂತೋಷ'



'ಸಚಿವ ಕೆ.ಎಚ್. ಮುನಿಯಪ್ಪ ಅವರು ಮುಖ್ಯಮಂತ್ರಿ ಆದರೆ ಸಂತೋಷ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

'ಮುನಿಯಪ್ಪ ಮುಖ್ಯಮಂತ್ರಿ ಆಗಲಿ' ಎಂದು ಶಿವಮೊಗ್ಗದಲ್ಲಿ ಘೋಷಣೆ ಕೂಗಿರುವ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ 'ಮುನಿಯಪ್ಪ ಅವರು ಏಳು ಬಾರಿ ಸಂಸದರಾಗಿದ್ದವರು. ಇದು ಸಾಮಾನ್ಯವಲ್ಲ. ಪಕ್ಷದಲ್ಲಿ ಹಿರಿಯರು, ಕೇಂದ್ರದಲ್ಲಿ ಸಚಿವರಾಗಿದ್ದರು. ಅವರು ಸಮರ್ಥರಿದ್ದು, ಅರ್ಹತೆಯೂ ಇದೆ' ಎಂದರು.

'ನಾವೆಲ್ಲ ಒಂದು ವರ್ಗಕ್ಕೆ ಸೇರಿದ್ದೇವೆ. ಆ ವರ್ಗಕ್ಕೆ ಅವಕಾಶ ಸಿಕ್ಕಿತಲ್ಲ ಎಂದೂ ಸಂತೋಷ ಆಗುತ್ತದೆ. ಯಾವ ವರ್ಗ ತುಳಿತಕ್ಕೆ ಒಳಗಾಗಿತ್ತು, ಆ ವರ್ಗಕ್ಕೆ ಆಡಳಿತ ಸಿಗುತ್ತದೆ ಅಂದರೆ ಸಂತೋಷ ಅಲ್ಲವೇ? ಆದರೆ, ನಾವು ಇಲ್ಲಿ ಕುಳಿತುಕೊಂಡು ನಾಲ್ಕು ಜನ ಹೇಳಿದರೆ ಆಗುವುದಿಲ್ಲ. ಹೈಕಮಾಂಡ್‌ನವರು ವಿಶ್ಲೇಷಣೆ ಮಾಡುತ್ತಾರೆ' ಎಂದರು.

'ಸಂಪುಟ ಪುನರ್ ರಚನೆ, ನಾಯಕತ್ವ ಬದಲಾವಣೆ ಬಗ್ಗೆ ಹೈಕಮಾಂಡ್‌ನಿಂದ ಯಾವುದೇ ಮಾಹಿತಿ ಇಲ್ಲ. ಈ ಬಗ್ಗೆ ಮುನ್ಸೂಚನೆಯೂ ಇಲ್ಲ. ಹೈಕಮಾಂಡ್ ತಿಳಿಸುವವರೆಗೂ ಯಾವುದಕ್ಕೂ ಮಹತ್ವ ಇರುವುದಿಲ್ಲ' ಎಂದರು.

'ಹೈಕಮಾಂಡ್ ಸ್ಪಷ್ಟನೆ ಕೊಡಬೇಕು'



'ನಾಯಕತ್ವ ಬದಲಾವಣೆ ಬಗ್ಗೆ ಚರ್ಚೆಗಳಾಗುತ್ತಿವೆ. ಇದಕ್ಕೆ ಹೈಕಮಾಂಡ್ ಸ್ಪಷ್ಟನೆ ಕೊಡಬೇಕು. ಈಗ ನಾನು ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ಧನಾಗುವ ಪ್ರಶ್ನೆಯೇ ಬರುವುದಿಲ್ಲ. ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯನವರು ಗಟ್ಟಿಯಾಗಿ ಇದ್ದಾರೆ. ಹೀಗಾಗಿ, ಅವರೇ 5 ವರ್ಷ ಮುಖ್ಯಮಂತ್ರಿಯಾಗಿ ಇರುತ್ತಾರೆ' ಎಂದು ಸಚಿವ ಸತೀಶ ಜಾರಕಿಹೊಳಿ ಹೇಳಿದರು.

'ಡಿ.ಕೆ. ಶಿವಕುಮಾರ್ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಆಸೆ ಪಡುವುದರಲ್ಲಿ ತಪ್ಪಿಲ್ಲ. ಆದರೆ, ಈಗ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾರೆ. ಈಗ ನಮಗೆ ನಾಯಕತ್ವ ಬದಲಾವಣೆಯ ಸನ್ನಿವೇಶ ಕಾಣುತ್ತಿಲ್ಲ' ಎಂದರು.

ಅಹಿಂದ ನಾಯಕತ್ವಕ್ಕೂ, ಸಿ.ಎಂ ಗಾದಿಗೂ ಯಾವುದೇ ಸಂಬಂಧ ಇಲ್ಲ: 'ಜಾತ್ಯತೀತ ಜನತಾದಳದಲ್ಲಿ ಇದ್ದಾಗಿನಿಂದಲೂ ಅಹಿಂದ ಭಾಗವಾಗಿದ್ದೇವೆ. ಅಹಿಂದ ನಾಯಕತ್ವಕ್ಕೂ, ಮುಖ್ಯಮಂತ್ರಿ ಗಾದಿಗೂ ಯಾವುದೇ ಸಂಬಂಧವಿಲ್ಲ. ಡಾ.ಯತೀಂದ್ರ ಸಿದ್ದರಾಮಯ್ಯ ಅವರ ಹೇಳಿಕೆಯನ್ನು ಯಾರೆಲ್ಲ ವಿರೋಧಿಸುತ್ತಿದ್ದಾರೊ ಅವರು ತಪ್ಪು ತಿಳಿದುಕೊಂಡಿದ್ದಾರೆ. ಅವರ ಹೇಳಿಕೆ ಕುರಿತು ವ್ಯಾಖ್ಯಾನ ಅನಗತ್ಯ' ಎಂದರು.

'ದಲಿತರಿಗೆ ಸಿ.ಎಂ ಸ್ಥಾನ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಮುಂದುವರಿಯುವುದಿದ್ದರೆ ನಮ್ಮ ತಕರಾರು ಇಲ್ಲ. ಅವರನ್ನು ಬದಲಾಯಿಸುವುದಿದ್ದರೆ ದಲಿತರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು' ಎಂದು ದಲಿತ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಒಕ್ಕೂಟದ ಅಧ್ಯಕ್ಷ ಎಂ. ವೆಂಕಟಸ್ವಾಮಿ ಮಾತನಾಡಿ, 'ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎರಡೂವರೆ ವರ್ಷ ಸಮೀಪಿಸುತ್ತಿದ್ದಂತೆ ಮುಂದಿನ ಮುಖ್ಯಮಂತ್ರಿ ಯಾರಾಗಬೇಕು ಎಂಬ ಚರ್ಚೆಗಳು ಆರಂಭವಾಗಿವೆ. ಜೊತೆಗೆ 2028ರ ಚುನಾವಣೆಯ ನಂತರ ಯಾರು ಮುಖ್ಯಮಂತ್ರಿ ಎಂಬ ಚರ್ಚೆಯೂ ನಡೆಯುತ್ತಿದೆ' ಎಂದು ತಿಳಿಸಿದರು. 'ಈ ಹಿಂದೆ ದಲಿತ ಸಂಘಟನೆಗಳು ದಲಿತ ಮುಖ್ಯಮಂತ್ರಿ ಹೋರಾಟ ಆರಂಭಿಸಿದ್ದರ ಫಲವಾಗಿ ಕಾಂಗ್ರೆಸ್ ಮತ್ತು ಬಿಜೆಪಿ ಉಪ ಮುಖ್ಯಮಂತ್ರಿ ಸ್ಥಾನವನ್ನು ದಲಿತರಿಗೆ ನೀಡುವಂತಾಗಿತ್ತು. ಈ ಬಾರಿ ಉಪ ಮುಖ್ಯಮಂತ್ರಿಯಲ್ಲ, ಮುಖ್ಯಮಂತ್ರಿ ಸ್ಥಾನವನ್ನೇ ನೀಡಬೇಕು' ಎಂದು ಒತ್ತಾಯಿಸಿದರು.

ಬಿ. ಬಸವಲಿಂಗಪ್ಪ, ಮಲ್ಲಿಕಾರ್ಜುನಸ್ವಾಮಿ, ಎನ್. ರಾಚಯ್ಯ, ಬಿ.ರಾಚಯ್ಯ, ಕೆ.ಎಚ್. ರಂಗನಾಥ್, ಮಲ್ಲಿಕಾರ್ಜುನ ಖರ್ಗೆ ಮುಂತಾದವರು ಮುಖ್ಯಮಂತ್ರಿಯಾಗಲು ಅರ್ಹರಾಗಿದ್ದರು ಮತ್ತು ಅಂಥ ಸಂದರ್ಭಗಳು ಕೂಡಿ ಬಂದಿದ್ದವು. ಆದರೂ ಪ್ರಬಲ ಜಾತಿಗಳ ಒತ್ತಡಕ್ಕೆ ಮಣಿದು ಕಾಂಗ್ರೆಸ್ ದಲಿತರನ್ನು ಮುಖ್ಯಮಂತ್ರಿ ಮಾಡಲಿಲ್ಲ. ಈಗ ಮಲ್ಲಿಕಾರ್ಜುನ ಖರ್ಗೆ, ಕೆ.ಎಚ್. ಮುನಿಯಪ್ಪ, ಜಿ. ಪರಮೇಶ್ವರ, ಸತೀಶ್ ಜಾರಕಿಹೊಳಿ ಕಾಂಗ್ರೆಸ್‌ನ ಶಿಸ್ತಿನ ಸಿಪಾಯಿಗಳಾಗಿ ಮುಖ್ಯಮಂತ್ರಿ ಸ್ಥಾನವನ್ನು ತುಂಬಲು ಸಮರ್ಥರಾಗಿದ್ದಾರೆ ಎಂದು ವಿವರಿಸಿದರು.

ಮುಖ್ಯಮಂತ್ರಿಯನ್ನು ಬದಲಾಯಿಸುವುದಿದ್ದರೆ ಈ ಬಾರಿ ದಲಿತರಿಗೇ ನೀಡಬೇಕು. ಇಲ್ಲದೇ ಇದ್ದರೆ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಕಷ್ಟವಾಗಲಿದೆ. ದಲಿತ ಮುಖ್ಯಮಂತ್ರಿಗಾಗಿ ದಲಿತ ಸಂಘಟನೆಗಳು ಐಕ್ಯ ಹೋರಾಟ ಮಾಡಲಿವೆ ಎಂದು ಎಚ್ಚರಿಸಿದರು.

'ಅರ್ಹತೆ ಆಧರಿಸಿ ತೀರ್ಮಾನ'

ಮೈಸೂರು ವರದಿ: 'ಕಾಂಗ್ರೆಸ್‌ನಲ್ಲಿ ಪ್ರತಿಯೊಬ್ಬರ ಅರ್ಹತೆ ಆಧರಿಸಿ ಸ್ಥಾನಮಾನ ಬಗ್ಗೆ ಹೈಕಮಾಂಡ್ ನಿರ್ಧರಿಸುತ್ತದೆ. ಯಾರೂ ಅಪಸ್ವರ ಎತ್ತುವ ಅಥವಾ ಅಪನಂಬಿಕೆ ಹೊಂದುವ ಅಗತ್ಯವಿಲ್ಲ' ಎಂದು ಶಾಸಕ ಪಿ.ಎಂ.ನರೇಂದ್ರಸ್ವಾಮಿ ಇಲ್ಲಿ ಹೇಳಿದರು.

ಸೋಮವಾರ ಇಲ್ಲಿ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ರಾಜಕಾರಣಕ್ಕೆ ಬಂದ ನಾವ್ಯಾರೂ ಸನ್ಯಾಸಿಗಳಲ್ಲ. ಅರ್ಹತೆ, ಸಂದರ್ಭ ಕೂಡಿಬಂದಾಗ ಎಲ್ಲರಿಗೂ ಅವಕಾಶ ಸಿಗಲಿದೆ. ಅದಕ್ಕಾಗಿ ಅರ್ಜಿ ಸಲ್ಲಿಸುವ ಅಗತ್ಯ ಇಲ್ಲ' ಎಂದು ಪ್ರತಿಪಾದಿಸಿದರು.

'ನಾವು ಪಕ್ಷದ ಶಿಸ್ತಿನ ಸಿಪಾಯಿಗಳು. ಹೈಕಮಾಂಡ್ ನಿರ್ಧಾರದಂತೆ ನಡೆಯುತ್ತೇವೆ. ಅಧಿಕಾರ ಹಂಚಿಕೆ, ಆಡಳಿತದ ಅವಧಿ ಎಲ್ಲ ಪಕ್ಷದ ಆಂತರಿಕ ವಿಚಾರಗಳು' ಎಂದರು.

ನಾಪತ್ತೆ ಪ್ರಕರಣ: ಬಾಲಕಿಯರೇ ಅಧಿಕ

ಒಂದನೇ ಪುಟದಿಂದ...

'ನಾಪತ್ತೆಯಾದ ಮಾಹಿತಿ ಲಭಿಸಿದ ಕೂಡಲೇ ದೂರು ನೀಡಿದರೆ ಮಕ್ಕಳನ್ನು ಪತ್ತೆ ಮಾಡಬಹುದು. ಕೆಲವರು ತಡವಾಗಿ ದೂರು ನೀಡುತ್ತಾರೆ. ನಾಪತ್ತೆಯಾದ ಮೊದಲ 24 ಗಂಟೆಗಳಲ್ಲಿ (ಗೋಲ್ಡನ್ ಅವರ್) ಪೊಲೀಸರಿಗೆ ದೂರು ಸಲ್ಲಿಸಬೇಕು. ಫೋಟೊ, ಇತರೆ ಮಾಹಿತಿ ನೀಡಬೇಕು. ಇಲಾಖೆಯ ಅಧಿಕೃತ ಗ್ರೂಪ್‌ನಲ್ಲಿ ಮಾಹಿತಿ ಹಂಚಿಕೊಳ್ಳಲಾಗುವುದು. ಪತ್ತೆಯಾದ ಬಳಿಕ ಅವರನ್ನು ಪಾಲಕರಿಗೆ ಒಪ್ಪಿಸಲಾಗುವುದು ' ಎಂದು ಪೊಲೀಸ್ ಅಧಿಕಾರಿಗಳು ಹೇಳುತ್ತಾರೆ.



'ಸಾಮಾಜಿಕ ಜಾಲತಾಣದ ಬಳಕೆ ಹೆಚ್ಚಾದ ಬಳಿಕೆ ನಾಪತ್ತೆಯಾಗುವ ಮಕ್ಕಳ ಸಂಖ್ಯೆ ಏರುಗತಿಯಲ್ಲಿದೆ. ನಾಪತ್ತೆಯಾದವರನ್ನು ಸಿಸಿ ಟಿವಿ ಕ್ಯಾಮೆರಾ, ಮೊಬೈಲ್ ನೆಟ್‌ವರ್ಕ್ ಸುಳಿವು ಆಧರಿಸಿ ಪತ್ತೆ ಮಾಡಲಾಗುತ್ತದೆ' ಎಂದು ಹೇಳಿದರು.

ಮಕ್ಕಳ ನಾಪತ್ತೆಗೆ ಮುಖ್ಯ ಕಾರಣ?: 'ಪೋಷಕರ ನಿರ್ಲಕ್ಷ್ಯ, ಬಡತನದ ನೋವು ಹಾಗೂ ನಗರದ ವ್ಯಾಮೋಹಕ್ಕೆ ಮನೆ ಬಿಟ್ಟು ಹೋಗುವುದು ಮಕ್ಕಳ ನಾಪತ್ತೆಗೆ ಪ್ರಮುಖ ಕಾರಣ. ಸ್ನೇಹಿತರ ಸಹವಾಸ, ದುಶ್ಚಟಗಳ ಕಾರಣದಿಂದ ಮನೆ ಬಿಡುವ ಮಕ್ಕಳೂ ಇದ್ದಾರೆ. ಪರೀಕ್ಷಾ ಭಯ ಹಾಗೂ ಅನುತ್ತೀರ್ಣಗೊಂಡಿದ್ದರಿಂದ ಪೋಷಕರಿಂದ ಏಟು ತಿನ್ನಬೇಕಾಗುತ್ತದೆ ಎಂಬ ಆತಂಕದಿಂದ ಮನೆ ಬಿಟ್ಟು ಓಡಿ ಹೋಗುತ್ತಾರೆ. ಚಿಣ್ಣರನ್ನು ಭಿಕ್ಷಾಟನೆಗೆ ಬಳಸಿಕೊಳ್ಳುವ, ಅಪಹರಣ ಮಾಡುವ ಸಿಂಡಿಕೇಟ್‌ಗಳು ಸಕ್ರಿಯವಾಗಿವೆ' ಎಂಬುದು ಮಕ್ಕಳ ಹಕ್ಕುಗಳ ಹೋರಾಟಗಾರರ ಆರೋಪ.

'ಪತ್ತೆ ಹಚ್ಚಿ ಪೋಷಕರಿಗೆ ಒಪ್ಪಿಸಿ'

ಒಂದನೇ ಪುಟದಿಂದ...

'ನಾಪತ್ತೆಯಾದವರಲ್ಲಿ ಬಹಳ ಮಂದಿ ಕಳ್ಳಸಾಗಣೆಯಾಗಿ ಲೈಂಗಿಕವಾಗಿ ಶೋಷಣೆಗೆ ಒಳಗಾಗುತ್ತಿದ್ದಾರೆ. ಕೆಲವರು ಬಾಲಕಾರ್ಮಿಕರಾಗುತ್ತಿದ್ದಾರೆ. ಅನೇಕ ಹೆಣ್ಣು ಮಕ್ಕಳನ್ನು ವೇಶ್ಯಾವೃತ್ತಿಗೆ ತಳ್ಳಲಾಗುತ್ತಿದೆ. ಭಿಕ್ಷಾಟನೆ, ಮನೆಗೆಲಸ, ಜೀತಕ್ಕೂ ಇವರನ್ನು ಬಳಸಿಕೊಳ್ಳಲಾಗುತ್ತಿದೆ. ಅಂತಹ ಮಕ್ಕಳ ಕೈಕಾಲುಗಳನ್ನು ತಿರುಚುವ ಹಾಗೂ ಕಣ್ಣು ಕೀಳುವ ಕೆಲಸವನ್ನು ಕೆಲವರು ಮಾಡುತ್ತಿದ್ದಾರೆ ಎಂಬ ಆರೋಪವೂ ಇದೆ' ಎಂದು ಹೇಳಿದರು.

ಯೋಜನೆ ವ್ಯಾಪ್ತಿಗೆ ಇನ್ನಷ್ಟು ಆಸ್ಪತ್ರೆಗಳು • ಚಿಕಿತ್ಸಾ ವೆಚ್ಚಗಳ ದರ ಶೀಘ್ರ ಪರಿಷ್ಕರಣೆ

ಆರೋಗ್ಯ ಸಂಜೀವಿನಿ: 4.83 ಲಕ್ಷ ನೌಕರರ ಸಮ್ಮತಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರು ಹಾಗೂ ಅವರ ಕುಟುಂಬದ ಅವಲಂಬಿತ ಸದಸ್ಯರಿಗೆ ನಗದು ರಹಿತ ಚಿಕಿತ್ಸೆ ಒದಗಿಸುವ 'ಕರ್ನಾಟಕ ಆರೋಗ್ಯ ಸಂಜೀವಿನಿ ಯೋಜನೆ' (ಕೆಎಎಸ್‌ಎಸ್) ಅ.1 ರಿಂದ ಜಾರಿಯಾಗಿದ್ದು, ಇದುವರೆಗೆ 4.83 ಲಕ್ಷ ನೌಕರರು ಸಮ್ಮತಿ ಸೂಚಿಸಿದ್ದಾರೆ.

ಹಲವು ವರ್ಷಗಳ ಹಿಂದೆಯೇ ಯೋಜನೆ ರೂಪಿಸಲಾಗಿತ್ತಾದರೂ ಕೆಲ ತಾಂತ್ರಿಕ ಕಾರಣಗಳಿಂದ ಅನುಷ್ಠಾನ ವಿಳಂಬವಾಗಿತ್ತು. ಅಂತಿಮವಾಗಿ ಅ.1 ರಿಂದ ಅನುಷ್ಠಾನಗೊಳಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿತ್ತು. ಸುವರ್ಣ ಕರ್ನಾಟಕ ಆರೋಗ್ಯ ಸುರಕ್ಷಾ ಟ್ರಸ್ಟ್ (ಎಸ್‌ಎಎಸ್‌ಟಿ) ಯೋಜನೆಯ ಅನುಷ್ಠಾನದ ಸಂಸ್ಥೆಯಾಗಿ ಹೊಣೆ ನಿರ್ವಹಿಸುತ್ತಿದೆ.

ಎಲ್ಲ ವರ್ಗದ ನೌಕರರು ಪ್ರತಿ ತಿಂಗಳು ತಮ್ಮ ಪಾಲಿನ ಕಂತು ಪಾವತಿಸಬೇಕಿದೆ. ಪತಿ–ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ ಯಾರಾದರೂ ಒಬ್ಬರ ವೇತನದಿಂದ ಮಾತ್ರ ಒಂದು ಕಂತು ಪಾವತಿಸಬಹುದು.

ಅಂಕಿ ಅಂಶಗಳು

4,83,116 ಯೋಜನೆ ಒಪ್ಪಿಕೊಂಡವರು	**803** ತಿರಸ್ಕರಿಸಿದವರು	**212** ಸೇವೆ ಆರಂಭಿಸಿದ ಆಸ್ಪತ್ರೆಗಳು
68 ಯೋಜನೆಗೆ ಒಳಪಡುತ್ತಿರುವ ಆಸ್ಪತ್ರೆಗಳು	**115** ಯೋಜನೆಗೆ ಪ್ರಸ್ತಾವ ಸಲ್ಲಿಸಿದ ಆಸ್ಪತ್ರೆಗಳು	**2,000** ಯೋಜನೆಯ ಪಟ್ಟಿಯಲ್ಲಿರುವ ಕಾಯಿಲೆಗಳು

ಎಚ್‌ಆರ್‌ಎಂಎಸ್ ವ್ಯಾಪ್ತಿಯಲ್ಲಿ ಇರದ ಇತರೆ ಸರ್ಕಾರಿ ಸಂಸ್ಥೆಗಳ ನೌಕರರ ಕಂತಿನ ಮೊತ್ತವನ್ನು ಆಯಾ ಸಂಸ್ಥೆಗಳು ಹಿಡಿದು ಕೊಂಡು ಟ್ರಸ್ಟ್ ಖಾತೆಗೆ ಜಮೆ ಮಾಡಬೇಕು. ಯೋಜನೆ ವ್ಯಾಪ್ತಿಗೆ ಒಳಪಡುವ ಎಲ್ಲ ನೌಕರರ ಕಂತನ್ನು ಅಕ್ಟೋಬರ್ ತಿಂಗಳ ವೇತನದಿಂದಲೇ ಕಡಿತ ಮಾಡಲಾಗುತ್ತದೆ. ನಂತರ ಒಟ್ಟು ಮೊತ್ತವನ್ನು ಖಜಾನೆ–2 ಮೂಲಕ ಟ್ರಸ್ಟ್ ಖಾತೆಗೆ ಜಮೆ ಮಾಡಲಾಗುತ್ತದೆ.




ಆರಂಭಿಕ ತೊಡಕು, ಮರುಪಾವತಿ ಸೌಲಭ್ಯ ವಿಸ್ತರಣೆ: ಸರ್ಕಾರಿ ನೌಕರರು ಯಾವುದೇ ಸಾರ್ವಜನಿಕ ಆಸ್ಪತ್ರೆಗಳು, ಬೋಧನಾ ಆಸ್ಪತ್ರೆಗಳು, ಸ್ಥಳೀಯ ಸಂಸ್ಥೆಗಳ ಆಸ್ಪತ್ರೆಗಳು ಹಾಗೂ ಯೋಜನೆಗೆ ನೋಂದಾಯಿಸಿಕೊಂಡ ಖಾಸಗಿ ಆಸ್ಪತ್ರೆ ಗಳಲ್ಲಿ ನಗದು ರಹಿತ ಚಿಕಿತ್ಸಾ ಸೌಲಭ್ಯ ಪಡೆಯಬಹುದು. ಸರ್ಕಾರಿ ನೌಕರರ ಹೆಸರು ಎಚ್‌ಆರ್‌ಎಂಎಸ್‌ನಲ್ಲೇ ದಾಖಲಾಗಿರುತ್ತದೆ. ಆರೋಗ್ಯ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾದರೆ ನಗದುರಹಿತ ಚಿಕಿತ್ಸೆಗೆ ಸಮಸ್ಯೆ ಯಾಗದು. ಜ್ಯೋತಿ ಸಂಜೀವಿನಿ ಯೋಜನೆಯಲ್ಲಿ ಪುರುಷ ನೌಕರರ ತಂದೆ–ತಾಯಿಗೆ ಮಾತ್ರ ಸಿಗುತ್ತಿದ್ದ ಆರೋಗ್ಯ ಸೌಲಭ್ಯವನ್ನು ಈ ಬಾರಿ ಮಹಿಳಾ ನೌಕರರ ತಂದೆ– ತಾಯಿಗೂ ವಿಸ್ತರಿಸಲಾಗಿದೆ. ಈ ಎಲ್ಲ ಅವಲಂಬಿತರ ಹೆಸರು ಸೇರ್ಪಡೆ ಕಾರ್ಯವನ್ನು ಹಲವು ನೌಕರರು ಪೂರ್ಣಗೊಳಿಸಿಲ್ಲ. ಇದರಿಂದ ಅವಲಂಬಿತರನ್ನು ಆಸ್ಪತ್ರೆಗೆ ದಾಖಲಿಸಿದಾಗ ಸಮಸ್ಯೆ ಎದುರಿಸುವಂತಾಗಿದೆ. ಇಂತಹ ತಾಂತ್ರಿಕ ಕಾರಣಗಳಿಂದಾಗಿ ನಗದು ಚಿಕಿತ್ಸಾ ಸೌಲಭ್ಯ ಆರಂಭವಾಗಿ ದ್ದರೂ, ವೈದ್ಯಕೀಯ ವೆಚ್ಚ ಮರು ಪಾವತಿ ಸೌಲಭ್ಯವನ್ನೂ ಸರ್ಕಾರ 6 ತಿಂಗಳ ವರೆಗೆ ವಿಸ್ತರಿಸಿದೆ. ಮುಂಗಡ ಪಾವತಿಸಿ, ಚಿಕಿತ್ಸೆ ಪಡೆದ ನೌಕರರು ತಾವು ಮಾಡಿದ ವೆಚ್ಚದ ಮೊತ್ತವನ್ನು ಮರಳಿ ಪಡೆಯಬಹುದು.

'ಯೋಜನೆ ವ್ಯಾಪ್ತಿಗೆ ಇನ್ನಷ್ಟು ಆಸ್ಪತ್ರೆಗಳನ್ನು ಸೇರ್ಪಡೆ ಮಾಡುವ ಕೆಲಸ ನಡೆದಿದೆ. ಚಿಕಿತ್ಸಾ ವೆಚ್ಚಗಳ ದರ ಪರಿಷ್ಕರಣೆಗೆ ರಾಜ್ಯ ಸರ್ಕಾರ ಸಮ್ಮತಿ ನೀಡುವ ಭರವಸೆ ಇದೆ. ಅವಲಂಬಿತ ಹೆಸರು ಸೇರ್ಪಡೆ ಕಾರ್ಯವೂ ಪ್ರಗತಿಯಲ್ಲಿದೆ. ಯೋಜನೆಯಿಂದ ನೌಕರರ ಕುಟುಂಬಗಳಿಗೆ ಹೆಚ್ಚಿನ ಪ್ರಯೋಜನವಾಗಲಿದೆ' ಎನ್ನುತ್ತಾರೆ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ.

ನಿರ್ಧಾರದ ಅವಧಿ ವಿಸ್ತರಣೆಗೆ ಪತ್ರ

ಯೋಜನೆ ವ್ಯಾಪ್ತಿಗೆ ಒಳಪಡಿಸಲು ಇಚ್ಛಿಸದವರು ಅ.18ರ ಒಳಗೆ ತಮ್ಮ ಮೇಲಧಿಕಾರಿಗಳ ಮೂಲಕ ಲಿಖಿತ ಆಕ್ಷೇಪ ಸಲ್ಲಿಸಲು ಅವಕಾಶ ನೀಡಲಾಗಿತ್ತು. ಇದುವರೆಗೆ 803 ನೌಕರರು 'ಒಪ್ಪಿಗೆ ಇಲ್ಲ' ಎಂದು ನಮೂದಿಸಿದ್ದಾರೆ.

'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ಕಾರ್ಯದಲ್ಲಿ ಸುಮಾರು ಒಂದು ಲಕ್ಷ ಶಿಕ್ಷಕರು ಭಾಗವಹಿಸಿದ್ದರು. ಹಾಗಾಗಿ, ಯೋಜನೆ ಕುರಿತು ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಆಗಿಲ್ಲ. 30 ದಿನಗಳ ಕಾಲಕಾವಕಾಶ ನೀಡಬೇಕು' ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚಂದ್ರಶೇಖರ ನುಗ್ಗಲಿ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.



> ಯೋಜನೆಗೆ ನೌಕರರ ಅವಲಂಬಿತರ ಸೇರ್ಪಡೆ ಕಾರ್ಯ ಪ್ರಗತಿಯಲ್ಲಿದೆ. ಕೇಂದ್ರ ಆರೋಗ್ಯ ಯೋಜನೆ ಪರಿಷ್ಕೃತ ಚಿಕಿತ್ಸಾ ವೆಚ್ಚ ಪ್ರಕಟವಾಗಿದ್ದು, ರಾಜ್ಯವೂ ಅದನ್ನು ಅಳವಡಿಸಿಕೊಳ್ಳುವಂತೆ ಮನವಿ ಮಾಡಿದ್ದೇವೆ
>
> **ಸಿ.ಎಸ್.ಷಡಾಕ್ಷರಿ,** ಅಧ್ಯಕ್ಷ, ರಾಜ್ಯ ಸರ್ಕಾರಿ ನೌಕರರ ಸಂಘ

ಅ.31ರಿಂದ ಪ್ರೈಮ್‌ನಲ್ಲಿ ಕಾಂತಾರ-ಚಾಪ್ಟರ್ 1



ನಟ ರಿಷಬ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ ಕಾಂತಾರ-ಚಾಪ್ಟರ್ 1 ಸಿನಿಮಾ ಅ.31ರಿಂದ ಪ್ರೈಮ್ ವಿಡಿಯೊದಲ್ಲಿ ಕನ್ನಡ ಸೇರಿದಂತೆ ನಾಲ್ಕು ಭಾಷೆಗಳಲ್ಲಿ ಸ್ಟ್ರೀಮ್ ಆಗಲಿದೆ.

‘ರಘು ಒಟಿಟಿಗೆ ಇನ್ನೂ ಮಗು’



ರಂಗಾಯಣ ರಘು

• ಅಭಿಲಾಷ್ ಪಿ.ಎಸ್.

‘ಅಯ್ಯನ ಮನೆ’, ‘ಶೋಧ’ ವೆಬ್‌ಸರಣಿಗಳ ಮೂಲಕ ಕನ್ನಡ ವೆಬ್‌ಸರಣಿಯ ರುಚಿ ಹಚ್ಚಿಸಿರುವ ಜೀ5 ಇದೀಗ ಮತ್ತೊಂದು ವೆಬ್‌ಸರಣಿಯೊಂದಿಗೆ ಬಂದಿದೆ. ‘ಪಿಆರ್‌ಕೆ ಪ್ರೊಡಕ್ಷನ್ಸ್’ ಸಹಯೋಗದಲ್ಲಿ ನಿರ್ಮಾಣವಾಗಿರುವ ‘ಮಾರಿಗಲ್ಲು’ ಅ.31ರಿಂದ ಜೀ5ನಲ್ಲಿ ಸ್ಟ್ರೀಮ್ ಆಗಲಿದ್ದು, ಈ ಮೂಲಕ ನಟ ರಂಗಾಯಣ ರಘು ಅವರು ವೆಬ್‌ಸರಣಿ ಲೋಕಕ್ಕೆ ಮೊದಲ ಹೆಜ್ಜೆ ಇಡಲಿದ್ದಾರೆ. ರಂಗಭೂಮಿ, ಕಿರುತೆರೆ, ಬೆಳ್ಳಿತೆರೆಯಲ್ಲಿ ಮಿಂಚಿರುವ ರಘು ಅವರಿಗೆ ಇದು ಹೊಸ ಲೋಕ. ಆ ಲೋಕದ ಅನುಭವವನ್ನು ಅವರಿಲ್ಲಿ ಬಿಚ್ಚಿಟ್ಟಿದ್ದಾರೆ.

‘ಕಲಾವಿದರಾದ ನಾವು ಒಂಥರಾ ರೈತರ ರೀತಿ. ಬದನೆಕಾಯಿನೂ ಬೆಳಿತೀವಿ, ತೆಂಗಿನಕಾಯಿನೂ ಬೆಳಿತೀವಿ. ಭತ್ತನೂ, ರಾಗಿನೂ ಬೆಳಿತೀವಿ. ವೇದಿಕೆ ಯಾವುದೇ ಆಗಿದ್ದರೂ ನಟನೆ ಮಾಡುತ್ತಲೇ ಇರುತ್ತೇವೆ. ನಾನು ರಂಗಭೂಮಿ ಹಿನ್ನೆಲೆಯಿಂದ ಬಂದವನು. ನಾಟಕಗಳನ್ನೂ ಮಾಡಿದ್ದೇನೆ, ಬೀದಿ ನಾಟಕಗಳಲ್ಲೂ ಅಭಿನಯಿಸಿದ್ದೇನೆ. ನಂತರದಲ್ಲಿ ಧಾರಾವಾಹಿಗಳಲ್ಲಿ ಕಾಣಿಸಿಕೊಂಡು ಸಿನಿಮಾ ಕ್ಷೇತ್ರಕ್ಕೆ ಹೆಜ್ಜೆ ಇಟ್ಟೆ. ಈ ವೆಬ್‌ಸರಣಿಗಾಗಿ ಸುಮಾರು ಹದಿನೈದು ದಿನ ಬಣ್ಣಹಚ್ಚಿದ್ದೆ. ಸಿನಿಮಾಗೆ ಹೋಲಿಸಿದರೆ ಒಟಿಟಿಯಲ್ಲಿ ಸಮಯದ ಮಿತಿ ಇಲ್ಲ. ಒಂದು ಕಥೆ ಹೇಳಲು ನಾಲ್ಕೈದು ಗಂಟೆ ಸಿಗುತ್ತದೆ. ಸೂಕ್ಷ್ಮತೆಗೆ ಹಾಗೂ ವಿಸ್ತಾರಕ್ಕೆ ಇಲ್ಲಿ ಅವಕಾಶವಿದೆ’ ಎನ್ನುತ್ತಾ ತಮ್ಮೊಳಗಿನ ಆಸೆಯತ್ತ ಮಾತು ಹೊರಳಿಸಿದರು ರಘು.

ನಮ್ಮ ಕಥೆಗಳು ಸರಣಿಯಾಗಲಿ

‘ನನಗೆ ಬಹಳ ಖುಷಿಯಾಗಿದ್ದೇನೆಂದರೆ, ಅಪ್ಪು(ಪುನೀತ್ ರಾಜ್‌ಕುಮಾರ್) ಅವರ ಜೊತೆಗೆ ಹಲವು ಸಿನಿಮಾಗಳಲ್ಲಿ ನಟಿಸಿದ್ದೇನೆ. ಇದೀಗ ಅವರದೇ ಹೆಸರಿನಲ್ಲಿರುವ ನಿರ್ಮಾಣ ಸಂಸ್ಥೆಯ ವೆಬ್ ಸರಣಿಯಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಈ ರಘು ಒಟಿಟಿಗಿನ್ನೂ ಮಗು. ಇದು ನನ್ನ ಮೊದಲ ಪಾದಾರ್ಪಣೆ. ಜೀ5 ಕನ್ನಡದಲ್ಲಿ ವೆಬ್‌ಸೀರೀಸ್‌ನ ಸರಣಿ ಆರಂಭಿಸಿದೆ. ನಮ್ಮ ಕನ್ನಡ ಸಾಹಿತ್ಯ ಬಹಳ ಶ್ರೀಮಂತವಾಗಿದೆ. ಎಂಟು ಜ್ಞಾನಪೀಠ ಪ್ರಶಸ್ತಿ ಪಡೆದ ನಾಡು ನಮ್ಮದು. ಸಾಕಷ್ಟು ಕಾದಂಬರಿಕಾರರ ಕಾದಂಬರಿಗಳು ಇವೆ. ಸಣ್ಣಕಥೆಗಳು ಸಾವಿರಾರಿವೆ. ಇವೆಲ್ಲಾ ಕಥೆಗಳು ಈ ವೆಬ್‌ಸರಣಿಗಳ ಮುಖಾಂತರ ಜನರಿಗೆ ತಲುಪಬೇಕು ಎನ್ನುವ ಸಣ್ಣ ಆಸೆ ನನಗಿದೆ. ಇದರಿಂದ ಸ್ಥಳೀಯ ಕಲಾವಿದರಿಗೂ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಅಪ್ಪು ಅವರ ಕನಸುಗಳನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ನನಸು ಮಾಡುತ್ತಿರುವುದು ಮತ್ತೊಂದು ಖುಷಿಯ ವಿಚಾರ’ ಎಂದರು.

‘ದೇವರಾಜ್ ಪೂಜಾರಿ ‘ಮಾರಿಗಲ್ಲು’ ಸರಣಿಗೆ ಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಸರಣಿಯೊಳಗಿನ ಪಾತ್ರವೊಂದನ್ನು ನಾನೇ ಮಾಡಬೇಕು ಎಂದು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರು ಬಯಸಿದ್ದರು. ಇದು ಹೊಸಬರ ತಂಡ. ನಾನು, ಗೋಪಾಲಕೃಷ್ಣ ದೇಶಪಾಂಡೆ, ಪ್ರಶಾಂತ್ ಸಿದ್ದಿ ಅವರಷ್ಟೇ ಹಳಬರು. ಇಂತಹ ತಂಡದ ಜೊತೆಗೂಡಿ ಹೊಸ ಪ್ರಯೋಗಗಳನ್ನು, ಸುಧಾರಣೆಗಳನ್ನು ಮಾಡಿಕೊಂಡ ಅನುಭವ ಚೆನ್ನಾಗಿತ್ತು. ಚಿತ್ರೀಕರಣದ ಸಮಯದಲ್ಲಿ ಶಿರಸಿಯ ಮಳೆ ಭಯಬೀಳಿಸಿತು. ಮೂರ್ನಾಲ್ಕು ಗಂಟೆ ಸತತ ಮಳೆಯಾಗುವುದನ್ನು ಕಂಡು ‘ಗಾಳಿಪಟ’ದ ನನ್ನದೇ ಡೈಲಾಗ್ ನೆನಪಾಯಿತು. ‘ಟಗರುಪಲ್ಯ’ ಸಿನಿಮಾದ ಛಾಯಾಚಿತ್ರಗ್ರಹಣ ಮಾಡಿದ್ದ ಎಸ್.ಕೆ.ರಾವ್ ಅವರೇ ಇಲ್ಲಿ ಕ್ಯಾಮೆರಾ ಹಿಡಿದಿದ್ದರು. ವಿರುದ್ಧವಾದ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ನಾನು, ಗೋಪಾಲಕೃಷ್ಣ ದೇಶಪಾಂಡೆ ಅವರು ಇಲ್ಲಿ ಬೈದಾಡಿಕೊಂಡು ಲವ್ ಮಾಡಿದ್ದೇವೆ! ಇದನ್ನು ಸರಣಿಯಲ್ಲೇ ನೋಡಿ ಆನಂದಿಸಬೇಕು. ಮಂಡ್ಯದಿಂದ ಬಂದು ಪುರಾತತ್ವ ಇಲಾಖೆಯಲ್ಲಿ ಕೆಲಸ ಮಾಡುವ ಅಧಿಕಾರಿಯಾಗಿ ನಾನು ಕಾಣಿಸಿಕೊಂಡಿದ್ದೇನೆ. ಗೋಪಾಲಕೃಷ್ಣ ದೇಶಪಾಂಡೆ ಅವರು ಸ್ಥಳೀಯ ವ್ಯಕ್ತಿಯಾಗಿ ನಟಿಸಿದ್ದಾರೆ. ಈ ಪ್ರದೇಶದಲ್ಲಿ ಹೆಜ್ಜೆ ಹೆಜ್ಜೆಗೂ ಸಾಕ್ಷಿ ಕಲ್ಲುಗಳು, ಶಿಲಾಶಾಸನಗಳು ಸಿಗುತ್ತವೆ. ನಿಧಿ ಹುಡುಕುವ ಕಥೆ ಸರಣಿಯಲ್ಲಿದ್ದು, ಆ ನಿಧಿಗೆ ದೈವದ ರಕ್ಷಣೆ ಹೇಗಿದೆ? ಆಸೆ-ದುರಾಸೆಯ ವಿಷಯಗಳು ಮಿಳಿತವಾಗಿದೆ. ಮಯೂರವರ್ಮನಾಗಿ ಪುನೀತ್ ಅವರು ಗ್ಲಿಮ್ಸ್‌ನಲ್ಲಿ ಕಾಣಿಸಿಕೊಂಡಿರುವುದು ಸರಣಿಯ ಹೈಲೈಟ್’ ಎಂದು ಮಾತಿಗೆ ವಿರಾಮವಿತ್ತರು ರಘು.

‘ಮಾರಿಗಲ್ಲು’ ಕಥೆಯೇನು?



ಕದಂಬರ ಸಿರಿ ಸಂಪತ್ತು ಹುಡುಕಿದರೆ ಮತ್ತೆ ಸಿಗಬಹುದೇ ಎನ್ನುವ ಪ್ರಶ್ನೆಯನ್ನೆತ್ತುತ್ತಾ ಈ ಸರಣಿ ಆರಂಭವಾಗುತ್ತದೆ. 4ನೇ ಶತಮಾನದ ಕದಂಬರ ಆಳ್ವಿಕೆಯ ಕಾಲದ ಹಿನ್ನೆಲೆಯ ಕಥೆ ಇದರಲ್ಲಿ ಇದೆ. 1990ರ ಕಾಲಘಟ್ಟದಲ್ಲಿ ಕದಂಬರ ಕಾಲದ ನಿಧಿ ಹುಡುಕಲು ಹೊರಟ ಶಿರಸಿಯ ಹುಡುಗರ ಸುತ್ತ ಕಥೆ ಸಾಗುತ್ತದೆ. ಶಿರಸಿಯ ಪ್ರಖ್ಯಾತ ಬೇಡರ ವೇಷವನ್ನೂ ಈ ಸರಣಿಯಲ್ಲಿ ಕಾಣಬಹುದು. ಶಿರಸಿ ಬಳಿಯ ಮಾರಿಗಲ್ಲು ಎಂಬ ಕಾಲ್ಪನಿಕ ಹಳ್ಳಿಯೊಂದರಲ್ಲಿ ನಡೆದ ಕಥೆಯನ್ನು ಸರಣಿಯಲ್ಲಿ ಕಟ್ಟಿಕೊಡಲಾಗಿದೆ. ರಂಗಾಯಣ ರಘು, ಗೋಪಾಲಕೃಷ್ಣ ದೇಶಪಾಂಡೆ ಈ ಸರಣಿ ಮೂಲಕ ವೆಬ್‌ಸರಣಿ ಲೋಕಕ್ಕೆ ಹೆಜ್ಜೆ ಇಟ್ಟಿದ್ದಾರೆ. ಪ್ರವೀಣ್ ತೇಜ್, ಎ.ಎಸ್.ಸೂರಜ್, ಪ್ರಶಾಂತ್ ಸಿದ್ದಿ, ನಿನಾದ್ ಹೃತ್ಸಾ ಹಾಗೂ ಸ್ಥಳೀಯ ರಂಗಭೂಮಿ ಕಲಾವಿದರು ಇದರಲ್ಲಿ ನಟಿಸಿದ್ದಾರೆ.

ಸೆನ್ಸಾರ್ ಪಾಸಾದ ಕೋಣ




ತನಿಷಾ, ಕೋಮಲ್

ಕುಪ್ಪಂಡಾಸ್ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿರುವ ಕೋಮಲ್ ನಟನೆಯ ‘ಕೋಣ’ ಸಿನಿಮಾ ಇದೇ 31ರಂದು ತೆರೆಕಾಣುತ್ತಿದ್ದು, ಚಿತ್ರಕ್ಕೆ ಸೆನ್ಸಾರ್ ಮಂಡಳಿಯು ಯು/ಎ ಪ್ರಮಾಣಪತ್ರ ನೀಡಿದೆ.

‘ಬಿಗ್‌ಬಾಸ್’ ಖ್ಯಾತಿಯ ತನಿಷಾ ಕುಪ್ಪಂಡ, ಕಾರ್ತಿಕ್ ಕಿರಣ್ ಸಂಕಪಾಲ್, ರವಿಕಿರಣ್ ಎನ್. ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಸಿನಿಮಾದಲ್ಲಿ ‘ಲಕ್ಷ್ಮಿ’ ಎಂಬ ಪಾತ್ರದಲ್ಲಿ ತನಿಷಾ ನಟಿಸಿದ್ದಾರೆ. ಡಾರ್ಕ್ ಕಾಮಿಡಿ ಶೈಲಿಯಲ್ಲಿರುವ ಈ ಚಿತ್ರದಲ್ಲಿ ಕೀರ್ತಿರಾಜ್, ರಿತ್ವಿ ಜಗದೀಶ್, ರಾಘು ರಾಮನಕೊಪ್ಪ, ವಿಜಯ್ ಚೆಂಡೂರ್, ಎಂ.ಕೆ. ಮಠ್, ರಂಜಿತ್ ಗೌಡ, ತುಕಾಲಿ ಸಂತೋಷ್, ಹುಲಿ ಕಾರ್ತಿಕ್, ನಿರಂಜನ್, ಅನಂತ್, ಶಿಶಿರ್ ಶಾಸ್ತ್ರಿ, ಗೋಲ್ಡ್ ಸುರೇಶ್, ಸುಷ್ಮಿತಾ, ಜಗಪ್ಪ, ಮಂಜು ಪಾವಗಡ, ಕುರಿ ಸುನಿಲ್, ನಮ್ರತಾ ಗೌಡ, ವಿನಯ್ ಗೌಡ, ಮೋಹನ್ ಕೃಷ್ಣರಾಜ್ ನಟಿಸಿದ್ದಾರೆ. ಹರಿಕೃಷ್ಣ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾಗೆ ಶಶಾಂಕ್ ಶೇಷಗಿರಿ ಸಂಗೀತ ನಿರ್ದೇಶನವಿದೆ.

‘ಬಾರ್ಡರ್ ಡೈರೀಸ್’ ಪೋಸ್ಟರ್ ಬಿಡುಗಡೆ



ಬಾರ್ಡರ್ ಡೈರೀಸ್

ಇತ್ತೀಚೆಗೆ ತೆರೆಕಂಡ ‘ಏಳುಮಲೆ’ ಸಿನಿಮಾ ಕರ್ನಾಟಕ–ತಮಿಳುನಾಡು ಗಡಿಭಾಗದಲ್ಲಿ ನಡೆಯುವ ಕಥೆಯೊಂದನ್ನು ಹೊತ್ತುಬಂದಿತ್ತು. ಇದೀಗ ಮತ್ತೊಂದು ಸಿನಿಮಾ ಇದೇ ವಿಷಯವನ್ನಿಟ್ಟುಕೊಂಡು ಬರಲಿದೆ.

‘ರಂಗಸಮುದ್ರ’ ಎಂಬ ಸಿನಿಮಾ ನಿರ್ಮಿಸುವ ಮೂಲಕ ಕನ್ನಡ ಚಿತ್ರರಂಗ ಪ್ರವೇಶಿಸಿದ್ದ ಹೊಯ್ಸಳ ಫಿಲ್ಮ್ಸ್ ಸಂಸ್ಥೆ ಹೊಸ ಚಿತ್ರ ಘೋಷಿಸಿದೆ. ಈ ಬಾರಿ ಹೊಸಬರಿಗೆ ವೇದಿಕೆ ಕಲ್ಪಿಸಿರುವ ಈ ನಿರ್ಮಾಣ ಸಂಸ್ಥೆ, ‘ಬಾರ್ಡರ್ ಡೈರೀಸ್’ ಎನ್ನುವ ಶೀರ್ಷಿಕೆಯನ್ನು ಅನಾವರಣಗೊಳಿಸಿದೆ.

ಗದ್ದಲದ ಊರಿನಲ್ಲಿ ಸದ್ದಿಲ್ಲದೆ ಅರಳಿದ ಪ್ರೇಮಕಥೆಯನ್ನು ಹೇಳಹೊರಟಿದ್ದಾರೆ ನಿರ್ದೇಶಕ ಎ.ಎಸ್.ಜಿ. ಇದು ಇವರ ಚೊಚ್ಚಲ ಸಿನಿಮಾ. ಕಳೆದ ಏಳೆಂಟು ವರ್ಷಗಳಿಂದ ‘ಸಾಹೇಬ’, ‘ನನ್ನ ಪ್ರಕಾರ’, ‘ತೂತು ಮಡಿಕೆ’ ಸೇರಿದಂತೆ ಹಲವು ಸಿನಿಮಾಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕೆಲಸ ಮಾಡಿದ ಅನುಭವ ಇವರಿಗಿದೆ.

‘ಬಾರ್ಡರ್ ಡೈರೀಸ್’ ಸಿನಿಮಾದಲ್ಲಿ ನಟ ಅಂಜನ್ ನಾಗೇಂದ್ರ ನಾಯಕನಾಗಿ ನಟಿಸುತ್ತಿದ್ದಾರೆ. ಅಶ್ವಿತ ಹೆಗಡೆ ನಾಯಕಿಯಾಗಿ ಸಾಥ್ ಕೊಡಲಿದ್ದಾರೆ. ಉಳಿದಂತೆ ಗೋಪಾಲಕೃಷ್ಣ ದೇಶಪಾಂಡೆ, ತಬಲ ನಾಣಿ, ಶರತ್ ಲೋಹಿತಾಶ್ವ, ಮೇಘ ಜಾದವ್, ವೀಣಾ ಸುಂದರ್, ಆನಂದ್ ನೀನಾಸಂ, ಕಾಳಿಪ್ರಸಾದ್, ಕುಶಾಲ್ ಬಿಕೆ, ನಾಗರಾಜ ಶಿವ ಸಿಂಪಿ ತಾರಾಬಳಗದಲ್ಲಿದ್ದಾರೆ. ಚಿತ್ರಕ್ಕೆ ‘ಚಮಕ್’, ‘ಸಖತ್’ ಖ್ಯಾತಿಯ ಜುಡಾ ಸ್ಯಾಂಡಿ ಸಂಗೀತ ನೀಡಿದ್ದು, ಅಚ್ಯುತ್ ಬಿ.ಎಸ್. ಛಾಯಾಚಿತ್ರಗ್ರಹಣ, ಆಕಾಶ್ ಹಿರೇಮಠ ಸಂಕಲನವಿದೆ.

ಚಿತ್ರದ ಚಿತ್ರೀಕರಣ ಕರ್ನಾಟಕ ಮತ್ತು ತಮಿಳುನಾಡು ಗಡಿಯಲ್ಲಿರುವ ಹೊಸೂರಿನ ಕೈಗಾರಿಕ ಪ್ರದೇಶ, ಚನ್ನಪಟ್ಟಣ, ಮಾಗಡಿ ಮತ್ತು ಬೆಂಗಳೂರಿನ ಸುತ್ತಮುತ್ತ ನಡೆದಿದೆ. ಸದ್ಯ ಸಿನಿಮಾದ ಕೊನೆಯ ಹಂತದ ಚಿತ್ರೀಕರಣದ ತಯಾರಿ ನಡೆಯುತ್ತಿದ್ದು, ಜೊತೆಗೆ ಪೋಸ್ಟ್ ಪ್ರೊಡಕ್ಷನ್ ಕೆಲಸವನ್ನೂ ಚಿತ್ರತಂಡ ಆರಂಭಿಸಿದೆ.

ಆಂಧ್ರಕ್ಕೆ ಅಪ್ಪಳಿಸಲಿದೆ ‘ಮೊಂಥಾ’

ಆಂಧ್ರ, ಒಡಿಶಾ ಸರ್ಕಾರಗಳ ಮುನ್ನೆಚ್ಚರಿಕೆ ಕ್ರಮ • ನಾಯ್ಡು ಜತೆ ಮೋದಿ ಮಾತುಕತೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ಬಂಗಾಳಕೊಲ್ಲಿಯಲ್ಲಿ ಎದ್ದಿರುವ ‘ಮೊಂಥಾ’ ಚಂಡಮಾರುತ ಮಂಗಳವಾರ ಆಂಧ್ರ ಪ್ರದೇಶದ ಕರಾವಳಿಗೆ ಅಪ್ಪಳಿಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮೊಂಥಾದ ಪ್ರಭಾವವು ತಮಿಳುನಾಡು, ಒಡಿಶಾ, ಪಶ್ಚಿಮ ಬಂಗಾಳದ ಮೇಲೂ ಆಗಲಿದೆ ಎಂದು ಹೇಳಿದೆ.

ಆಂಧ್ರ ಪ್ರದೇಶ ಹಾಗೂ ಒಡಿಶಾ ಸರ್ಕಾರಗಳು ಮುನ್ನೆಚ್ಚರಿಕಾ ಕ್ರಮವಾಗಿ ಹಲವು ಸಿದ್ಧತೆಗಳನ್ನು ಮಾಡಿಕೊಂಡಿವೆ. ಆಂಧ್ರ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಸಿದ್ಧತಾ ಕಾರ್ಯಗಳ ಬಗ್ಗೆ ಅಧಿಕಾರಿಗಳ ಜೊತೆ ಸಭೆ ನಡೆಸಿದರು. ಕೇಂದ್ರ ಸರ್ಕಾರದಿಂದ ಎಲ್ಲ ರೀತಿಯ ಸಹಕಾರ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ನಾಯ್ಡು ಅವರಿಗೆ ಭರವಸೆ ನೀಡಿದ್ದಾರೆ.

ಆಂಧ್ರದಲ್ಲಿ ಸಿದ್ಧತೆ
- 50 ಸಾವಿರ ಜನರ ಸ್ಥಳಾಂತರ
- 39 ಲಕ್ಷ ಜನರ ಮೇಲೆ ಪರಿಣಾಮ

ಪ್ರತಿ ಗಂಟೆಗೆ 90 ಕಿ.ಮೀನಿಂದ 100 ಕಿ.ಮೀವರೆಗೂ ಗಾಳಿ ಬೀಸಲಿದೆ. ಗಾಳಿಯ ವೇಗವು ಗಂಟೆಗೆ 110 ಕಿ.ಮೀವರೆಗೂ ತಲುಪಬಹುದು ಎಂದು ಹವಾಮಾನ ಇಲಾಖೆ ಅಂದಾಜಿಸಿದೆ. ಚಂಡಮಾರುತದ ಪ್ರಭಾವವು ಆಂಧ್ರದಲ್ಲಿ ಈಗಾಗಲೇ ಆರಂಭವಾಗಿದ್ದು, ಸೋಮವಾರ ಬೆಳಿಗ್ಗೆಯಿಂದ ಕರಾವಳಿ ಭಾಗದಲ್ಲಿ ಮಳೆಯಾಗುತ್ತಿದೆ. ಮಂಗಳವಾರದಿಂದ ಶುಕ್ರವಾರದವರೆಗೆ ಪಶ್ಚಿಮ ಬಂಗಾಳದಲ್ಲಿ ಮಳೆಯಾಗಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಒಡಿಶಾದ ದಕ್ಷಿಣ ಭಾಗದ ಎಂಟು ಜಿಲ್ಲೆಗಳಲ್ಲಿ ಹವಾಮಾನ ಇಲಾಖೆಯು ರೆಡ್ ಅಲರ್ಟ್ ಘೋಷಿಸಿದೆ. ಈ ಭಾಗದ ಜನರನ್ನು ಸ್ಥಳಾಂತರಿಸುವ ಕಾರ್ಯವನ್ನು ಸರ್ಕಾರ ಆರಂಭಿಸಿದೆ. ಆಂಧ್ರದಲ್ಲಿ ಸರ್ಕಾರಿ ನೌಕರರ ರಜೆಗಳನ್ನು ರದ್ದು ಮಾಡಲಾಗಿದ್ದು, ಮುನ್ನೆಚ್ಚರಿಕಾ ಕಾರ್ಯದಲ್ಲಿ ತೊಡಗಿಕೊಳ್ಳುವಂತೆ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರು ಸೂಚಿಸಿದ್ದಾರೆ.

ಮುಂದಿನ ಎರಡು ದಿನಗಳಲ್ಲಿ ತೆಲಂಗಾಣದ ಕೆಲವು ಪ್ರದೇಶಗಳಲ್ಲಿಯೂ ಭಾರಿ ಮಳೆಯಾಗಲಿದೆ.

ಮೊಂಥಾ ಎಂದರೆ?: ಥಾಯ್ ಭಾಷೆಯಲ್ಲಿ ಮೊಂಥಾ ಎಂದರೆ ಸುಂದರ ಹೂವು ಅಥವಾ ಸುವಾಸನೆ ಭರಿತ ಹೂವು ಎಂದರ್ಥ.



ಮೊಂಥಾ ಚಂಡಮಾರುತ ಎದ್ದಿರುವ ಕಾರಣ ತಮಿಳುನಾಡಿನ ಚೆನ್ನೈನಲ್ಲಿರುವ ಮರೀನಾ ಕಿನಾರೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ಮೀನುಗಾರರ ದೋಣಿಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರ ಮಾಡಲಾಯಿತು ಪಿಟಿಐ ಚಿತ್ರ

ಕೇರಳದ ಹಲವೆಡೆ ಭಾರಿ ಮಳೆ: ಇಬ್ಬರ ಸಾವು

ತಿರುವನಂತಪುರ (ಪಿಟಿಐ): ಕೇರಳ ರಾಜ್ಯದ ಬಹುತೇಕ ಎಲ್ಲ ಜಿಲ್ಲೆಗಳಲ್ಲಿ ಸೋಮವಾರ ಭಾರಿ ಮಳೆ ಸುರಿದಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ದೋಣಿ ಮಗುಚಿ ಮೀನುಗಾರರೊಬ್ಬರು ಮೃತಪಟ್ಟಿದ್ದು, ಪಶ್ಚಿಮ ಬಂಗಾಳ ಮೂಲದ ವ್ಯಕ್ತಿ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಆರ್ತುಂಗಲ್ ಕರಾವಳಿ ಪ್ರದೇಶದ ಪೌಲ್ ದೇವಸ್ಯ ಎಂಬುವರು ಸೋಮವಾರ ಬೆಳಿಗ್ಗೆ ಮೀನುಗಾರಿಕೆಗಾಗಿ ಸಮುದ್ರಕ್ಕೆ ಇಳಿದಿದ್ದರು. ಈ ವೇಳೆ ವೇಗವಾಗಿ ಗಾಳಿ ಬೀಸಿದ್ದರಿಂದ ಇವರಿದ್ದ ದೋಣಿಯು ಮುಗುಚಿದೆ. ಇತರೆ ಮೀನುಗಾರರು ಇವರನ್ನು ರಕ್ಷಿಸಿದರಾದರೂ ಬಳಿಕ ಮೃತಪಟ್ಟರು. ಅಂಗಮಾಲಿ ಬಳಿಯ ಪಶ್ಚಿಮ ಬಂಗಾಳದ ಕೊಕ್ಕನ್ ಮಿಸ್ತ್ರಿ ಎಂಬುವರು ಮನೆಯಲ್ಲಿದ್ದಾಗ ಬೆಳಿಗ್ಗೆ ಸಿಡಿಲು ಬಡಿದು ಮೃತಪಟ್ಟಿದ್ದಾರೆ.

ಕೋಯಿಕ್ಕೋಡ್, ಕಣ್ಣೂರು, ಕಾಸರಗೋಡು, ಕೊಟ್ಟಾಯಂ ಮತ್ತು ಪತ್ತನಂತಿಟ್ಟ ಜಿಲ್ಲೆಗಳಿಗೆ ಭಾರತೀಯ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಈ ಜಿಲ್ಲೆಗಳಲ್ಲಿ ಮುಂದಿನ 24 ಗಂಟೆಗಳಲ್ಲಿ 11.5 ಸೆಂ.ಮೀನಿಂದ 20.4 ಸೆಂ.ಮೀನಷ್ಟು ಮಳೆ ಸುರಿಯಲಿದೆ ಎಂದು ಇಲಾಖೆ ಅಂದಾಜಿಸಿದೆ. ವಯನಾಡ್, ಮಲಪ್ಪುರಂ, ಪಾಲಕ್ಕಾಡ್, ತ್ರಿಶ್ಶೂರ್, ಎರ್ನಾಕುಳಂ, ಇಡುಕ್ಕಿ ಮತ್ತು ಆಲಪ್ಪುಳ ಜಿಲ್ಲೆಗಳಿಗೆ ಯೆಲ್ಲೊ ಅಲರ್ಟ್ ಘೋಷಿಸಲಾಗಿದೆ. 6.4 ಸೆಂ.ಮೀನಿಂದ 11.5 ಸೆಂ.ಮೀನಷ್ಟು ಮಳೆಯಾಗಲಿದೆ ಎಂದು ಇಲಾಖೆ ಮುನ್ನೆಚ್ಚರಿಕೆ ನೀಡಿದೆ. ಮಂಗಳವಾರವೂ ಭಾರಿ ಮಳೆಯಾಗಬಹುದು ಎಂದೂ ಹೇಳಿದೆ.

ಚಿಟಿಕೆ ಸುದ್ದಿ

‘ಒಂದೇ ಪಥದಲ್ಲಿ ಕಾಂಗ್ರೆಸ್–ಡಿಎಂಕೆ’

ಚೆನ್ನೈ (ಪಿಟಿಐ): ‘ಮೈತ್ರಿ ಪಕ್ಷ ಕಾಂಗ್ರೆಸ್ ಮತ್ತು ಡಿಎಂಕೆ ಒಂದು ಕಾಲಕ್ಕೆ ಭಿನ್ನ ಪಥಗಳಲ್ಲಿ ಹೆಜ್ಜೆ ಹಾಕುತ್ತಿದ್ದವು. ದೇಶದ ಹಿತದೃಷ್ಟಿಯಿಂದ ಇಂದು ಒಂದು ತಂಡವಾಗಿ ಸಾಗುತ್ತಿದ್ದೇವೆ’ ಎಂದು ತಮಿಳುನಾಡು ಮುಖ್ಯಮಂತ್ರಿ ಮತ್ತು ಡಿಎಂಕೆ ಅಧ್ಯಕ್ಷ ಎಂ.ಕೆ. ಸ್ಟಾಲಿನ್ ಸೋಮವಾರ ಹೇಳಿದ್ದಾರೆ.

ವಿರುಧುನಗರ ಜಿಲ್ಲಾ ಕಾಂಗ್ರೆಸ್ ಮುಖಂಡರೊಬ್ಬರ ಪುತ್ರನ ವಿವಾಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ತಮಿಳುನಾಡಿನ ಅಭಿವೃದ್ಧಿ ಮತ್ತು ಭಾರತದ ಏಕತೆಗಾಗಿ ಉಭಯ ಪಕ್ಷಗಳು ಒಟ್ಟಾಗಿವೆ. ಸಮಾನ ಮನಸ್ಕ ಚಿಂತನೆಗಳೊಂದಿಗೆ ಇದೇ ತಂಡದಲ್ಲಿ ಮುಂದುವರಿಯುತ್ತೇವೆ’ ಎಂದರು.

‘ರಾಹುಲ್ ಗಾಂಧಿ ಅವರು ತೋರುವ ಪ್ರೀತಿಯನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ನಾನು ಯಾವುದೇ ರಾಜಕೀಯ ನಾಯಕರನ್ನು ಸೋದರ ಎಂದು ಸಂಭೋದಿಸುವುದಿಲ್ಲ. ಆದರೆ, ರಾಹುಲ್ ಗಾಂಧಿ ಅವರನ್ನು ಸೋದರ ಎನ್ನುತ್ತೇನೆ. ದೂರವಾಣಿ ಕರೆ ಮಾಡಿ ಮಾತನಾಡುವಾಗ ಮತ್ತು ಖುದ್ದು ಭೇಟಿಯಾದಾಗ ಅವರು ನನ್ನನ್ನು ಪ್ರೀತಿಯ ಸಹೋದರ ಎಂದೇ ಕರೆಯುತ್ತಾರೆ. ಇಂತಹ ಸಂಗತಿಗಳನ್ನು ಮರೆಯಲು ಸಾಧ್ಯವಿಲ್ಲ’.

‘ಇದು ಕೇವಲ ರಾಜಕೀಯ ಸ್ನೇಹವಲ್ಲ. ಸೈದ್ಧಾಂತಿಕ ಸಂಬಂಧ. ಇಡೀ ದೇಶದಲ್ಲಿ ಅದು ಪ್ರತಿಧ್ವನಿಸುತ್ತಿದೆ’ ಎಂದರು.

ದುಬೈ ವಿಮಾನ ಚೆನ್ನೈನಲ್ಲಿ ಭೂಸ್ಪರ್ಶ

ಚೆನ್ನೈ (ಪಿಟಿಐ): ಮದುರೈನಿಂದ ದುಬೈಗೆ ಹೊರಟಿದ್ದ ಸ್ಪೈಸ್‌ಜೆಟ್ ವಿಮಾನವೊಂದು ತಾಂತ್ರಿಕ ಕಾರಣದಿಂದಾಗಿ ಚೆನ್ನೈನಲ್ಲಿ ಸೋಮವಾರ ಭೂಸ್ಪರ್ಶ ಮಾಡಿದೆ.

‘160 ಪ್ರಯಾಣಿಕರಿದ್ದ ವಿಮಾನದ ಹಾರಾಟದ ವೇಳೆ ತಾಂತ್ರಿಕ ದೋಷ ಪತ್ತೆಯಾಗಿದ್ದು, ಮಾರ್ಗ ಬದಲಾವಣೆ ಮಾಡಿ ಚೆನ್ನೈನಲ್ಲಿ ಇಳಿಸಲಾಗಿದೆ’ ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ಹೇಳಿದ್ದಾರೆ.

ಪ್ರಜಾವಾಣಿ ಮಂಗಳವಾರ ● ಅಕ್ಟೋಬರ್ 28, 2025


ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 **editpage@prajavani.co.in**

ಅಭಿಮತ

ಸಂಪಾದಕೀಯ

ಮರಣದಂಡನೆ ಜಾರಿ ಪ್ರಕ್ರಿಯೆ ಮಾನವೀಯಗೊಳ್ಳುವುದು ಅಗತ್ಯ

ಮರಣದಂಡನೆಗೆ ಗುರಿಯಾದವರನ್ನು ಗಲ್ಲಿಗೇರಿಸಿ ಜೀವಹರಣ ಮಾಡುವುದರ ಬಗ್ಗೆ ಸುಪ್ರೀಂ ಕೋರ್ಟ್ ಈಚೆಗೆ ಆಡಿರುವ ಕೆಲವು ಮಾತುಗಳು, ಈ ಚರ್ಚಾರ್ಹ ವಿಷಯದ ಕುರಿತ ಮಾತುಕತೆಗಳಿಗೆ ಮುಖ್ಯವಾದ ತಿರುವೊಂದನ್ನು ನೀಡಿವೆ. ಮರಣದಂಡನೆಗೆ ಗುರಿಯಾದವರನ್ನು ಗಲ್ಲಿಗೇರಿಸಿ ಪ್ರಾಣಹರಣ ಮಾಡುವ ಪದ್ಧತಿಯನ್ನು ಕೊನೆಗೊಳಿಸಬೇಕು; ಬದಲಿಗೆ ಅಪರಾಧಿಗೆ ಗುಂಡು ಹಾರಿಸಿ, ಪ್ರಾಣಾಂತಿಕ ಚುಚ್ಚುಮದ್ದು ನೀಡಿ ಅಥವಾ ವಿದ್ಯುತ್ ಶಾಕ್ ನೀಡಿ ಕೊಲ್ಲಬೇಕು ಎಂಬ ಮನವಿ ಇರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರ (ಪಿಐಎಲ್) ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಈಚೆಗೆ ನಡೆಸಿತು. ಗಲ್ಲಿನ ಬದಲು ಈ ಮಾರ್ಗವನ್ನು ಅನುಸರಿಸಿದರೆ ಅಪರಾಧಿಯ ಜೀವಹರಣ ಅತಿ ಕಡಿಮೆ ಸಮಯದಲ್ಲಿ ಆಗುತ್ತದೆ ಎಂಬ ವಾದವು ಅರ್ಜಿಯಲ್ಲಿದೆ. ಸಾಯಲು ಕಡಿಮೆ ನೋವಿನ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಲು ಅಪರಾಧಿಗೆ ಅವಕಾಶ ಕಲ್ಪಿಸಬೇಕು ಎಂಬ ಮನವಿಯೂ ಅರ್ಜಿಯಲ್ಲಿದೆ. ಈ ಸಲಹೆಗಳನ್ನು ಆಲಿಸಲು ಕೇಂದ್ರ ಸರ್ಕಾರ ಸಿದ್ಧವಿಲ್ಲದ್ದನ್ನು ಗಮನಿಸಿದ ಕೋರ್ಟ್, ವಿಚಾರಣೆಯನ್ನು ಮುಂದಿನ ತಿಂಗಳಿಗೆ ನಿಗದಿಪಡಿಸಿದೆ. ಹೊಸ ಆಲೋಚನೆಗಳಿಗೆ ಕಿವಿಗೊಡಲು ಕೇಂದ್ರವು ಮುಂದಾಗದೆ ಇರುವುದರ ಬಗ್ಗೆ ಹೇಳಿದಾಗ ಕೋರ್ಟ್, ಮರಣದಂಡನೆಯ ಸುತ್ತಲಿನ ಚರ್ಚೆಗಳು ದೊಡ್ಡ ಮಟ್ಟದಲ್ಲಿ ಬದಲಾವಣೆಗಳನ್ನು ಕಂಡಿದ್ದರೂ ಸರ್ಕಾರವು ತನ್ನ ಆಲೋಚನೆಗಳನ್ನು ವಿಶಾಲಗೊಳಿಸಿಕೊಳ್ಳಲು ಸಿದ್ಧವಿಲ್ಲ ಎಂದು ಹೇಳಿದೆ.




ಮರಣದಂಡನೆ ಜಾರಿಗೊಳಿಸುವ ಸಾಂಪ್ರದಾಯಿಕ ವಿಧಾನಕ್ಕೆ ಅಂಟಿಕೊಂಡಿರುವ ಸರ್ಕಾರದ ನಿರ್ಧಾರದಲ್ಲಿ ಮಾನವೀಯ ಅಂಶಗಳ ಕೊರತೆಯಿದೆ.

ಅಪರಾಧಿಯನ್ನು ಗಲ್ಲಿಗೇರಿಸುವ ಮೂಲಕ ಮರಣದಂಡನೆ ಜಾರಿಗೊಳಿಸುವುದು ತ್ವರಿತವಾದ ಹಾಗೂ ಸುರಕ್ಷಿತವಾದ ಕ್ರಮ ಎಂದು ಕೋರ್ಟ್‌ಗೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಕೇಂದ್ರ ಸರ್ಕಾರ ಹೇಳಿತ್ತು. ಆದರೆ, ಮನಕಲಕುವ ಸಂಗತಿಯೆಂದರೆ, ಮರಣದಂಡನೆಯನ್ನು ಜಾರಿಗೊಳಿಸುವ ಪ್ರಕ್ರಿಯೆಯನ್ನು 'ಮೇಲ್ನೋಟಕ್ಕೆ ಶಾಂತ ರೀತಿಯಲ್ಲಿ, ನೋವಿಲ್ಲದಂತೆ ಕಾಣುವ ಬಗೆಯಲ್ಲಿ ಮಾಡುವುದು' ಆ ಶಿಕ್ಷೆಯು ಇತರರಿಗೆ ರವಾನಿಸಬೇಕಿರುವ ಸಂದೇಶದ ತೀವ್ರತೆಯನ್ನು ಕಡಿಮೆ ಮಾಡಬಹುದು ಎಂದು ಕೂಡ ಕೇಂದ್ರ ವಾದಿಸಿತ್ತು. ಶಿಕ್ಷೆಯ ತೀವ್ರತೆಯ ಬಗ್ಗೆ ಸಮಾಜದಲ್ಲಿ ಭೀತಿ ಮೂಡಿಸುವ ಉದ್ದೇಶದಿಂದ ಅಪರಾಧಿಗಳ ಜೀವವನ್ನು ಯಾತನಾಮಯವಾದ ಬಗೆಯಲ್ಲಿ ಹರಣಮಾಡುವ ಪ್ರಕ್ರಿಯೆಯನ್ನು ಬೆಂಬಲಿಸುವುದು ಮಾನವೀಯ ನಡೆಯಾಗುವುದಿಲ್ಲ. 'ಜೈಲಿನಲ್ಲಿರುವ ವ್ಯಕ್ತಿಯಲ್ಲಿ ಇರುವ ಭೀತಿಯನ್ನು ಅನಗತ್ಯವಾಗಿ ಹೆಚ್ಚು ಮಾಡುವಂತಹ ಯಾವುದೂ ಗಲ್ಲಿಗೇರಿಸುವ ಪ್ರಕ್ರಿಯೆಯಲ್ಲಿ ಇಲ್ಲ' ಎಂದು ಕೇಂದ್ರ ಸರ್ಕಾರವು ಹೇಳಿಕೆ ನೀಡಿತ್ತು. ಇದರ ಬಗ್ಗೆ ಅದು ಹೆಚ್ಚಿನ ವಿವರಣೆ ನೀಡಬೇಕಿದೆ. ಮರಣದಂಡನೆಗೆ ಗುರಿಯಾದವರ ಪ್ರಾಣಹರಣದ ಪ್ರಕ್ರಿಯೆಯು ಇನ್ನಷ್ಟು ಮಾನವೀಯ ಬಗೆಯಲ್ಲಿ ಇರಲಿ ಎಂಬುದು ಅರ್ಜಿದಾರರ ಕೋರಿಕೆ. ಗಲ್ಲಿಗೇರಿಸಿ, ಪ್ರಾಣ ತೆಗೆಯುವ ಪ್ರಕ್ರಿಯೆಯು ಮನಕಲಕುವಂಥದ್ದು, ಶಿಕ್ಷೆಯನ್ನು ಜಾರಿಗೊಳಿಸಿದ ನಂತರವೂ ಅರ್ಧ ತಾಸಿನವರೆಗೆ ಮೃತದೇಹವನ್ನು ನೇಣಿನ ಕುಣಿಕೆಯಲ್ಲೇ ಬಿಟ್ಟಿರಲಾಗುತ್ತದೆ ಎಂಬ ವಿವರವು ಅರ್ಜಿಯಲ್ಲಿದೆ. ಮರಣದಂಡನೆಯನ್ನು ಜಾರಿಗೆ ತರುತ್ತಿರುವ ಬಗೆಯು ಮಾನವೀಯವಾಗಿ ಇಲ್ಲ, ಅದು ಸಂವಿಧಾನದ 21ನೇ ವಿಧಿಯನ್ನು ಉಲ್ಲಂಘಿಸುವ ಬಗೆಯಲ್ಲಿ ಇದೆ ಎಂಬುದು ಅರ್ಜಿಯಲ್ಲಿನ ವಾದ.

ಮರಣದಂಡನೆ ಎಷ್ಟರಮಟ್ಟಿಗೆ ಮಾನವೀಯ ಎಂಬ ಬಗ್ಗೆ ವ್ಯಾಪಕ ಚರ್ಚೆಗಳು ಆಗುತ್ತಿರುವ ಹೊತ್ತಿನಲ್ಲಿ, ಪ್ರಾಣವನ್ನು ತೆಗೆಯಲು ಸರಿಯಾದ ಪ್ರಕ್ರಿಯೆ ಯಾವುದು ಎಂಬ ಬಗ್ಗೆ ಚರ್ಚೆ ನಡೆಯುತ್ತಿರುವುದು, ತೀರಾ ಹೆಚ್ಚು ಯಾತನೆ ನೀಡುವ ಪ್ರಕ್ರಿಯೆಯನ್ನು ಸರ್ಕಾರವು ಬೆಂಬಲಿಸುತ್ತಿರುವುದು ಒಂದು ವ್ಯಂಗ್ಯದಂತೆ ಕಾಣುತ್ತಿದೆ. ಮರಣದಂಡನೆಯು ಸಮಾಜದಲ್ಲಿ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುವುದರ ವಿರುದ್ಧ ಭೀತಿಯನ್ನು ಸೃಷ್ಟಿಸುತ್ತದೆ ಎಂದು ಸರ್ಕಾರ ಹೇಳಿದ್ದರೂ, ವಾಸ್ತವ ಬೇರೆಯದೇ ಆಗಿದೆ. ಮರಣದಂಡನೆಯು ನ್ಯಾಯಸಮ್ಮತ ಅಲ್ಲ, ಅದು ತಾರತಮ್ಯದ ಶಿಕ್ಷೆ. ಏಕೆಂದರೆ, ಮರಣದಂಡನೆಗೆ ಗುರಿಯಾದವರಲ್ಲಿ ಬಹುತೇಕರು ಸಮಾಜದ ಅಂಚಿನ ಸಮುದಾಯಗಳಿಗೆ ಸೇರಿದವರು. ನ್ಯಾಯದಾನ ವ್ಯವಸ್ಥೆಯು ವ್ಯಕ್ತಿಯಲ್ಲಿ ಸುಧಾರಣೆ ತರುವುದಕ್ಕೆ ಆದ್ಯತೆ ನೀಡಬೇಕೇ ವಿನಾ ಪ್ರತೀಕಾರ ತೀರಿಸಿಕೊಳ್ಳುವುದು ಆ ವ್ಯವಸ್ಥೆಯ ಉದ್ದೇಶ ಆಗಬಾರದು ಎಂಬ ತತ್ತ್ವಕ್ಕೆ ಮರಣದಂಡನೆಯು ವಿರುದ್ಧವಾಗಿದೆ. ಮರಣದಂಡನೆಯನ್ನು ರದ್ದುಪಡಿಸುವ ದಿಕ್ಕಿನಲ್ಲಿ ಜಗತ್ತು ಸಾಗುತ್ತಿರುವಾಗ ನಮ್ಮಲ್ಲಿ ಸರ್ಕಾರವು ಮರಣದಂಡನೆಯ ಪ್ರಕ್ರಿಯೆಯನ್ನು ಯಾತನೆಯಿಂದ ಮುಕ್ತವಾಗಿಸುವಲ್ಲಿ ಇರುವ ಸಮಸ್ಯೆಗಳ ಬಗ್ಗೆ ಮಾತನಾಡುತ್ತಿದೆ. ಇದು ದುರದೃಷ್ಟಕರ. ಸರ್ಕಾರದ ವಾದವು ನ್ಯಾಯದ ಪರಿಕಲ್ಪನೆಯಲ್ಲಿನ ದೋಷವನ್ನು ಹೇಳುತ್ತಿದೆ. ಕೋರ್ಟ್ ಹೇಳಿರುವಂತೆ, ಈ ವಿಚಾರದಲ್ಲಿ ಸರ್ಕಾರ ತಾಳಿರುವ ನಿಲುವು ಕಾಲದೊಂದಿಗೆ ವಿಕಾಸ ಹೊಂದಿಲ್ಲದಿರುವುದನ್ನು ತೋರಿಸುತ್ತಿದೆ. ಅದಕ್ಕೂ ಮುಖ್ಯವಾಗಿ, ಈ ನಿಲುವಿನಲ್ಲಿ ಮಾನವೀಯತೆಯ ಅಂಶವು ಇಲ್ಲದಿರುವುದು ಗೋಚರಿಸುತ್ತಿದೆ.

ಜಾಲತಾಣ


ಪ್ರತಿಭಟನೆಯ ವಿರೋಧಿ



ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಅದರ ಪೊಲೀಸ್ ನೀತಿಯ ಬಗ್ಗೆ ಬಹಳ ಪ್ರಶ್ನೆಗಳಿವೆ. ಪ್ರತಿಭಟನೆಗಳ ಬಗ್ಗೆ ಈ ಸರ್ಕಾರಕ್ಕೂ, ಬಿಜೆಪಿ ಸರ್ಕಾರಕ್ಕೂ ಹೆಚ್ಚೇನೂ ವ್ಯತ್ಯಾಸವಿಲ್ಲ. ಮಾತ್ರವಲ್ಲ, ಬಿಜೆಪಿ ಸರ್ಕಾರಕ್ಕಿಂತಲೂ ಪ್ರತಿಭಟನೆಗಳ ವಿರೋಧಿಯಾಗಿದೆ.

ಜಿ.ಎನ್. ನಾಗರಾಜ್, ಲೇಖಕ, ಫೇಸ್‌ಬುಕ್‌ನಿಂದ

ಕಿಡಿನುಡಿ



ಬುಡಕಟ್ಟು ಜನರಿಗೆ ಪೌಷ್ಟಿಕ ಆಹಾರ ಪೂರೈಸಲು ರಾಜ್ಯ ಸರ್ಕಾರ ವಾರ್ಷಿಕವಾಗಿ ₹120 ಕೋಟಿ ವ್ಯಯಿಸುತ್ತಿದೆ. ಹೀಗಿದ್ದರೂ, ಆದಿವಾಸಿ ಸಮುದಾಯದ ಬಡವರಿಗೆ ಗುಣಮಟ್ಟದ ಆಹಾರ ಪೂರೈಕೆಯಾಗುತ್ತಿಲ್ಲ. ಆಡಳಿತ ಯಂತ್ರ ತುಕ್ಕು ಹಿಡಿದಿರುವುದನ್ನು ಇದು ಸಾಕ್ಷೀಕರಿಸುತ್ತದೆ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಶನಿವಾರ, 28-10-2000

● **ಹಿರಿಯ ವಿದ್ವಾಂಸ, ಸಾಹಿತಿ ಪರಮೇಶ್ವರ ಭಟ್ಟರ ನಿಧನ**

ಮೈಸೂರು, ಅ. 27– ಹೆಸರಾಂತ ಸಾಹಿತಿ, ವಿದ್ವಾಂಸ ಪ್ರೊ. ಎಸ್.ವಿ. ಪರಮೇಶ್ವರ ಭಟ್ಟ (87) ಅವರು, ಇಲ್ಲಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಇಂದು ಬೆಳಿಗ್ಗೆ 9.30ರ ಸಮಯದಲ್ಲಿ ನಿಧನರಾದರು.

ಅವರು ಇಬ್ಬರು ಗಂಡು ಹಾಗೂ ಇಬ್ಬರು ಹೆಣ್ಣುಮಕ್ಕಳನ್ನು ಅಗಲಿದ್ದಾರೆ.

ಶೃಂಗೇರಿ ವಿದ್ಯಾರಣ್ಯಪುರ (ಎಸ್.ವಿ.) ಪರಮೇಶ್ವರ ಭಟ್ಟ ಅವರು, 1914ರ ಫೆಬ್ರುವರಿ 8ರಂದು ಶಿವಮೊಗ್ಗ ಜಿಲ್ಲೆಯ ಮಾಳೂರಿನಲ್ಲಿ ಜನಿಸಿದರು. ತಂದೆ ಸದಾಶಿವರಾವ್, ತಾಯಿ ಲಕ್ಷ್ಮಮ್ಮ.

75 ವರ್ಷಗಳ ಹಿಂದೆ

ಶನಿವಾರ, 28-10-1950

● **ಹೋಟೆಲ್‌ಗಳ ಬೋರ್ಡಿನಲ್ಲಿ ಜಾತಿ ಸೂಚಕಗಳು ರದ್ದಾಗಲಿ**

ಬೆಂಗಳೂರು, ಅ. 27– ಮೇಯೊ ಹಾಲಿನಲ್ಲಿ ಗುರುವಾರ ಸೇರಿದ್ದ ಕಾರ್ಪೊರೇಷನ್ ಸಾಮಾನ್ಯ ಸಭೆಯಲ್ಲಿ, ಗೃಹ ಸೌಕರ್ಯ ಸಮಿತಿ ಕುರಿತು ಮೇಯರ್ ಎನ್. ಕೇಶವಯ್ಯಂಗಾರ್‌ರವರು ಸಭೆ ಮುಂದಿಟ್ಟ ಸಲಹೆ ಅಂಗೀಕಾರವಾಯ್ತು.

ಉಪಾಹಾರ ಏರ್ಪಾಡಿನ ವಿಚಾರದಲ್ಲಿ ಹಿಂದಿನ ಪದ್ಧತಿಯನ್ನೇ ಅನುಸರಿಸುವುದೆಂದು ಅಭಿಪ್ರಾಯ ಪಡಲಾಯ್ತು.

ಅತಿಥಿಗಳು ಬಂದಾಗ ಅವರುಗಳಿಗೆ ಅರ್ಪಿಸುವ ಪುಷ್ಪಹಾರದ ವಿಚಾರ ಚರ್ಚೆಗೆ ಬಂದು, ಪರಿಶೀಲನೆಯಾದ ಬಳಿಕ ಅತಿಥಿಗಳಾಗಿ ಬರುವವರಿಗೆ 15 ರೂಪಾಯಿಗಳ ವೆಚ್ಚದಲ್ಲಿ ಮಾತ್ರ ಪುಷ್ಪಹಾರ ಅರ್ಪಿಸಬೇಕೆಂದು ತೀರ್ಮಾನಿಸಲಾಯಿತು.

ಫಲಾಹಾರ ಮತ್ತು ಭೋಜನ ಗೃಹಗಳ ಮುಂದೆ ಗುರ್ತಿಗಾಗಿ ಹಾಗೂ ಪ್ರದರ್ಶನಕ್ಕಾಗಿ ತಗಲು ಹಾಕುವ ಬೋರ್ಡ್‌ಗಳಲ್ಲಿ ಬ್ರಾಹ್ಮಣ, ವೀರಶೈವ, ಮುಸ್ಲಿಂ, ಇತ್ಯಾದಿ ಜಾತಿಸೂಚಕ ಶಬ್ದಗಳನ್ನು ರದ್ದು ಮಾಡಬೇಕೆಂದು ಕಾರ್ಪೊರೇಷನ್ ಅಡ್ವೋಕೇಟರು ಮಾಡಿದ್ದ ಸಲಹೆಯು ಸಭೆಯಲ್ಲಿ ಅಂಗೀಕಾರವಾಯ್ತು.

ಈ ಮೂವರು ದಲಿತರಲ್ಲದಿದ್ದರೆ?



ವಿಶ್ಲೇಷಣೆ

ಯೋಗೇಂದ್ರ ಯಾದವ್

ಇತ್ತೀಚಿನ ಮೂರು ಘಟನೆಗಳು 25 ವರ್ಷಗಳ ಹಿಂದೆ ನಾನು ಕೇಳಿದ ಕಥೆಯೊಂದನ್ನು ನೆನಪಿಸಿದವು. ಸ್ಪರ್ಧಾತ್ಮಕ ಪರೀಕ್ಷೆ ಉತ್ತೀರ್ಣನಾಗಿ ಅಧಿಕಾರಿಯಾಗಿ ನೇಮಕವಾಗಿರುವ ಬುದ್ಧಿವಂತ ಮತ್ತು ಬಿಚ್ಚು ಮಾತಿನ ದಲಿತ ಯುವಕ ನನಗೆ ಮೊದಲಿನಿಂದಲೂ ಗೊತ್ತು. ಹೋಲಿಕೆಯಲ್ಲಿ ತನಗಿಂತ ಸ್ವಲ್ಪ ಉತ್ತಮ ಹಿನ್ನೆಲೆಯ ಹುಡುಗಿಯನ್ನು ಮದುವೆಯಾದ ಬಳಿಕ ನಾನು ಅವರನ್ನು ಭೇಟಿಯಾಗಿದ್ದೆ. ಆ ಹುಡುಗಿಗೆ 'ಎಸ್‌ಸಿ' ಎಂಬ ಹಣೆಪಟ್ಟಿ ಕಳಚಿ 'ಸಾಮಾನ್ಯ' ಅಧಿಕಾರಿ ವರ್ಗದ ಜೊತೆಗೆ ಸೇರಿಕೊಳ್ಳುವ ಇಚ್ಛೆ ಇತ್ತು. ಬಹುಶಃ ಆತನಿಗೂ ಇತ್ತೇನೊ. ಆತನ ಸ್ಥಿತಿಯ ಕುರಿತು ಏನನ್ನಾದರೂ ನಾನು ಹೇಳುವ ಮುನ್ನವೇ 'ಹೇಗೋ ಅಡ್ಜಸ್ಟ್‌ಮೆಂಟ್ ಮಾಡ್ಕೊಂಡೆ ಸಾರ್' ಅಂದ. ಸೇರ್ಪಡೆಯೊ ಅಂತರ್ಗತಗೊಳಿಸುವಿಕೆಯೊ ಶರಣಾಗತಿಯೊ, ಯಾವುದಾದರೂ ಆಗಬಹುದಾದ ಆತನ ಭಾರತೀಯ ಅಭಿವ್ಯಕ್ತಿಯ ಹೊಂದಾಣಿಕೆ ಗುಣಕ್ಕೆ ಚಕಿತನಾದೆ.

ಕೆಲವು ವರ್ಷಗಳ ಬಳಿಕ ಮತ್ತೆ ಅವರ ಮನೆಗೆ ಹೋದಾಗ ಪಡಸಾಲೆಯಲ್ಲಿ ಅಂಬೇಡ್ಕರ್ ಭಾವಚಿತ್ರ ನೋಡಿ ಆಶ್ಚರ್ಯವಾಯಿತು. ನನ್ನ ಕಣ್ಣುಗಳಲ್ಲಿದ್ದ ಪ್ರಶ್ನೆ ಅವರಿಗೆ ಅರ್ಥವಾಯಿತು ಮತ್ತು ನಾನು ಏನನ್ನಾದರೂ ಕೇಳುವ ಮುನ್ನವೇ ಅವರೇ ವಿವರಿಸಿದರು. ತಮ್ಮ ಮೊದಲ ಮಗು ನಡೆಯಲು ಆರಂಭಿಸಿದ್ದನ್ನು ಅಧಿಕಾರಿಗಳ ಕಾಲೊನಿಯ ತಮ್ಮ ನೆರೆಯವರೊಂದಿಗೆ ಹಂಚಿಕೊಳ್ಳಲು ಅವರು ಬಯಸಿದರು. ಅದಕ್ಕಾಗಿ ತಮ್ಮ ಪದ್ಧತಿಯಂತೆ ಬೆಲ್ಲ ಮತ್ತು ಕಡಲೆಯನ್ನು ಎಲ್ಲರಿಗೂ ಹಂಚಿದರು. ಸಂಜೆಯ ವಾಯುವಿಹಾರಕ್ಕೆ ಹೋಗಿದ್ದಾಗ, ಒಬ್ಬರಿಗಿಂತ ಹೆಚ್ಚು ನೆರೆಮನೆಯವರು 'ಬೆಲ್ಲ–ಕಡಲೆ'ಯನ್ನು ಮನೆಮುಂದೆ ಇದ್ದ ಕಸದ ಗುಪ್ಪೆಗೆ ಎಸೆದಿರುವುದು ಕಂಡಿತು. ಯಾರೊಬ್ಬರೂ ಒಂದೇ ಒಂದು ಮಾತು ಆಡಿರಲಿಲ್ಲ, ಜಾತಿನಿಂದನೆಯಂತೂ ಇರಲೇ ಇಲ್ಲ. ಹಾಗಿದ್ದರೂ ಕ್ಷಣಮಾತ್ರದಲ್ಲಿ ಆ ಸತ್ಯ ಅವರಿಗೆ ಅರಿವಾಯಿತು: 'ಈ ಜಾತಿ ಎಂಬುದು ಇಲ್ಲಿಂದ ತೊಲಗುವುದೇ ಇಲ್ಲ'. ಅವರು ಕಳೆದುಕೊಳ್ಳಲು ಬಯಸಿದ್ದ ಹಣೆಪಟ್ಟಿ ಅವರನ್ನು ಬಿಟ್ಟುಹೋಗಲು ಸಿದ್ಧವಿಲ್ಲ. ಹಾಗಾಗಿ, ಅದೇ ಜಾತಿಯನ್ನು ಅವರು ಅಪ್ಪಿಕೊಂಡರು.

ಮೂರು ಸರಳ ವಿಚಾರಗಳನ್ನು ಮನದಟ್ಟು ಮಾಡುವುದಕ್ಕಾಗಿ ಈ ಕಥೆಯನ್ನು ನಾನು ಅಸಂಖ್ಯ ಬಾರಿ ಹೇಳಿದ್ದೇನೆ. ಮೊದಲನೆಯದು, ಜಾತಿ ಎಂಬುದು ನಮ್ಮ ಭೂತಕಾಲ ಅಲ್ಲ, ಅದು ನಮ್ಮೊಂದಿಗೇ ವರ್ತಮಾನದಲ್ಲಿ ಇರುವ ವಾಸ್ತವ. ಭವಿಷ್ಯದಲ್ಲಿಯೂ ಇದು ಜೊತೆಯಲ್ಲಿಯೇ ಇರಲಿದೆ ಎಂಬ ಭೀತಿಯೂ ಇದೆ. ಎರಡನೆಯದಾಗಿ, ಇದು ಗ್ರಾಮೀಣ ಪ್ರದೇಶಗಳಿಗೆ ಅಥವಾ ಸಾಂಪ್ರದಾಯಿಕವಾಗಿ 'ಹಿಂದುಳಿದ' ಪ್ರದೇಶಗಳಿಗೆ ಸೀಮಿತವೂ ಅಲ್ಲ; ನಮ್ಮ ಸಮಾಜದ ಆಧುನಿಕ ವರ್ಗಗಳಲ್ಲಿ ಜಾತಿಯು ಹೊಸ ರೂಪ ಧರಿಸಿ ಬಂದಿದೆ. ಜಾತಿ ಆಧಾರಿತ ದೌರ್ಜನ್ಯ ಮತ್ತು ಅನ್ಯಾಯ ಬಹಿರಂಗವಾಗಿ ಗೋಚರಿಸುವುದು ಬಹಳ ವಿರಳ. ಪದರ ಪದರಗಳಲ್ಲಿ ಮುಚ್ಚಿರುವ ಇದನ್ನು ಕಾಣಬೇಕಾದರೆ ಪದರಗಳನ್ನು ಬಿಚ್ಚಬೇಕಾಗುತ್ತದೆ. ಮೂರನೆಯದಾಗಿ, ಜಾತಿಯು ಅಂಟಿನಂತೆ, ಅದರ ಪರಿಣಾಮವನ್ನು ನಿರ್ಮೂಲನೆ ಮಾಡುವುದು ಸರಳವಲ್ಲ. ಶಿಕ್ಷಣ ಮತ್ತು ಉದ್ಯೋಗಗಳು ಜಾತಿಯ ಅಸಮಾನತೆಯನ್ನು ಎದುರಿಸಲು ಅಗತ್ಯ. ಆದರೆ, ಅವಷ್ಟೇ ಸಾಲದು.

ಈ ಮೂರೂ ಪಾಠಗಳು ಇತ್ತೀಚೆಗಿನ, ಮೂರು ಘಟನೆಗಳಿಂದಾಗಿ ನನ್ನ ಮನಸ್ಸಿಗೆ ಬಂದವು. ಆ ಘಟನೆಗಳೆಂದರೆ: ರಾಯಬರೇಲಿಯಲ್ಲಿ ಹರಿಓಂ ವಾಲ್ಮೀಕಿ ಅವರ ಮೇಲೆ ಹಲ್ಲೆ, ಚಂಡೀಗಢದಲ್ಲಿ ಐಪಿಎಸ್ ಅಧಿಕಾರಿ ವೈ. ಪೂರನ್ ಕುಮಾರ್ ಆತ್ಮಹತ್ಯೆ ಮತ್ತು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಬಿ.ಆರ್. ಗವಾಯಿ ಅವರ ಮೇಲೆ ನ್ಯಾಯಾಲಯದಲ್ಲಿ ಚಪ್ಪಲಿ ಎಸೆಯುವ ಯತ್ನ.

ಇವರೆಲ್ಲರೂ ದಲಿತರು ಎಂಬುದನ್ನು ಬಿಟ್ಟರೆ, ಸಂಪೂರ್ಣವಾಗಿ ಭಿನ್ನವಾದ ಮೂವರು ವ್ಯಕ್ತಿಗಳಿಗೆ ಸಂಬಂಧಿಸಿದ ಈ ಘಟನೆಗಳನ್ನು ಜೋಡಿಸುವ ತಂತು ಯಾವುದೂ ಇಲ್ಲ. ಸಂತ್ರಸ್ತರು ದಲಿತರು ಎಂಬ ಒಂದು ಸತ್ಯವು ಈ ಎಲ್ಲ ಪ್ರಕರಣಗಳನ್ನು ಜಾತಿ ಆಧಾರಿತ ದೌರ್ಜನ್ಯದ ವರ್ಗಕ್ಕೆ ಸೇರಿಸುವುದಿಲ್ಲ. ಮಾಧ್ಯಮ ವರದಿಗಳ ಪ್ರಕಾರ, ಹರಿಓಂ ಮೇಲೆ ಹಲ್ಲೆ ನಡೆಯಲು ಆತ ದಲಿತ ಎಂಬುದು ಕಾರಣವಲ್ಲ; ಬದಲಿಗೆ ಆತ ಕಳ್ಳ ಎಂಬ ಸಂದೇಹವಿದ್ದ ಜನರ ಗುಂಪಿಗೆ ಸಮಂಜಸ ಉತ್ತರ ನೀಡಿಲ್ಲ ಎಂಬುದು ಕಾರಣ. ನ್ಯಾಯಮೂರ್ತಿ ಗವಾಯಿ ಅವರ ಮೇಲೆ ದಾಳಿ ನಡೆಸಿದಾತ ಅವರ ಜಾತಿಯ ಹೆಸರು ಹೇಳಿಲ್ಲ, ಬದಲಿಗೆ ಹಿಂದೂ ಧರ್ಮಕ್ಕೆ ಅವರು ಅವಮಾನ ಮಾಡಿದ್ದಾರೆ ಎಂದ. ಅಧಿಕಾರಶಾಹಿಯಲ್ಲಿ ಕೇಳಿಸಿದ ಪಿಸುಗುಡುವಿಕೆ ಪ್ರಕಾರ, ಪೂರನ್ ಕುಮಾರ್ ಮರಣ ಪತ್ರದಲ್ಲಿ ಉಲ್ಲೇಖಿಸಿದ ಜಾತಿ ತಾರತಮ್ಯಕ್ಕಿಂತ ಅಧಿಕಾರಿಗಳ ನಡುವಿನ ಸ್ಪರ್ಧೆಯೇ ಸಾವಿಗೆ ಕಾರಣ. ನಾವು ಇದನ್ನು ನಂಬಬೇಕು ಎಂದು ಪ್ರಬಲ ಸಂಕಥನವನ್ನು ನಮ್ಮ ಮೇಲೆ ಹೇರಲಾಗಿದೆ. ಪ್ರತಿ ಪ್ರಶ್ನೆಗಳನ್ನು ಕೇಳುವ ಮೂಲಕ ಈ ಕೃತ್ರಿಮವನ್ನು ನಾವು ಸುಲಿದು ಹಾಕಬಹುದು: ಈ ಎಲ್ಲರೂ ದಲಿತರು ಅಲ್ಲದೇ ಇದ್ದರೆ ಏನಾಗುತ್ತಿತ್ತು? ಅವರಿಗೆ ಇದೇ ಗತಿ ಬರುತ್ತಿತ್ತೇ? ಕಳ್ಳ ಎಂಬ ಸಂದೇಹದಲ್ಲಿ ಗುಂಪು ಹರಿಓಂನನ್ನು ಸುತ್ತುವರಿದಿದ್ದಾಗ ಆತ ತಾನು ಠಾಕೂರ್ ಎಂದು ಕೂಗಿದ್ದರೆ ಏನಾಗುತ್ತಿತ್ತು? ಸ್ವಲ್ಪ ಅವಮಾನ ಮತ್ತು ಹೊಡೆತದಿಂದ ತಪ್ಪಿಸಿಕೊಳ್ಳುವುದು ಸಾಧ್ಯವಾಗದಿರಬಹುದಿತ್ತು. ಆದರೆ, ಯಾರೂ ಸಹಾಯಕ್ಕೆ ಇಲ್ಲದೆ ಆತ ಹೊಡೆತ ತಿಂದು ಸಾಯುತ್ತಿದ್ದನೇ? ಮರುದಿನ ಪೊಲೀಸರು ಬರುವವರೆಗೆ ದೇಹವನ್ನು ಕೊಳೆಯಲು ಬಿಡಲಾಗುತ್ತಿತ್ತೇ? ಕ್ರಮ ಕೈಗೊಳ್ಳಲು ಪೊಲೀಸರು ಮತ್ತು ಆಡಳಿತ ವ್ಯವಸ್ಥೆಯು ಇಷ್ಟೊಂದು ವಿಳಂಬ ಮಾಡುತ್ತಿತ್ತೇ? ಹರಿಓಂಗೆ ಈ ಗತಿ ಬರಲು ಆತ ಕಳ್ಳ ಎಂಬುದಾಗಲಿ, ಮಾನಸಿಕ ಅಸ್ವಸ್ಥ ಎಂಬುದಾಗಲಿ ಕಾರಣ ಅಲ್ಲ, ಬದಲಿಗೆ ಆತ ವಾಲ್ಮೀಕಿ ಎಂಬುದು ಕಾರಣ.

> ಸಂವಿಧಾನದ ಬಲದಿಂದ 'ಜಾತ್ಯತೀತ ಭಾರತ' ಎಂದು ಸುಲಭವಾಗಿ ಹೇಳುತ್ತೇವೆಯಾದರೂ, ಆ ಆದರ್ಶವನ್ನು ಇಲ್ಲಿಯವರೆಗೂ ಸಮಾಜ ಮುಟ್ಟಿಸಿಕೊಂಡಿರುವುದು ಕಡಿಮೆ. ಜನಸಾಮಾನ್ಯರಿಂದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಯವರೆಗೆ, ಯಾರೊಬ್ಬರೂ ಜಾತಿಯ ಕಬಂಧಬಾಹುಗಳಿಂದ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ.

ಅಥವಾ, ಮುಖ್ಯ ನ್ಯಾಯಮೂರ್ತಿ ಗವಾಯಿ ಅವರಿಗೆ ನ್ಯಾಯಾಲಯದಲ್ಲಿ ಏನಾಯಿತು ಎಂಬುದನ್ನು ನೋಡಿ. ತಲೆಕೆಟ್ಟ ವ್ಯಕ್ತಿಯೊಬ್ಬ ಯಾವುದೇ ನ್ಯಾಯಾಲಯದಲ್ಲಿ ನ್ಯಾಯಮೂರ್ತಿಯ ಸಾಮಾಜಿಕ ಹಿನ್ನೆಲೆ ಏನು ಎಂಬುದನ್ನು ನೋಡದೆಯೇ ಹೀಗೆ ಮಾಡಬಹುದು ಎಂಬುದನ್ನು ಅಲ್ಲಗಳೆಯಲಾಗದು. ಬೇರೆ ಸಂದರ್ಭಗಳಲ್ಲಿ 'ಸಮತೋಲನ' ಹೊಂದಿದ್ದ ವಕೀಲನೊಬ್ಬನ ಕಣ್ಣಿನಲ್ಲಿ ಮುಖ್ಯ ನ್ಯಾಯಮೂರ್ತಿಯ ಘನತೆ ಅಷ್ಟೊಂದು ಕುಗ್ಗಲು ಕಾರಣವೇನು? ಸನಾತನ ಧರ್ಮಕ್ಕೆ ಮಾಡಿದ್ದಾರೆ ಎನ್ನಲಾದ ಅವಮಾನವು ಧಾರ್ಮಿಕ ಪರಂಪರೆಗಷ್ಟೇ ಸೀಮಿತವೇ? ಅಥವಾ ಅವರು ಹೇಳಿದ್ದರಲ್ಲಿ ಜಾತಿ ಶ್ರೇಷ್ಠತೆಯ ಉಪಪತ್ಯವೂ ಇದೆಯೇ? ಅಂದರೆ, ಏನು ಹೇಳಿದರು ಎನ್ನುವುದಕ್ಕಿಂತ ಯಾರು ಹೇಳಿದರು ಎಂಬುದಕ್ಕೆ ಆತ ನೀಡಿದ ಪ್ರತಿಕ್ರಿಯೆ ಅಲ್ಲವೇ ಇದು? ಎನ್. ಸುಕುಮಾರ್ ಹೇಳುವಂತೆ ಇದು, ನಮ್ಮ ಕಾಲದಲ್ಲಿ ಸಹಜವೇ ಆಗಿರುವ 'ದ್ವೇಷದ ಜಾತೀಯತೆಯ ಅಭಿವ್ಯಕ್ತಿ'.

ಇಂತಹುದೊಂದು ಘಟನೆಯು ಡಿ.ವೈ. ಚಂದ್ರಚೂಡ್ ಮುಖ್ಯ ನ್ಯಾಯಮೂರ್ತಿ ಆಗಿದ್ದಾಗ ನಡೆದಿದ್ದರೆ ಮತ್ತು ಚಪ್ಪಲಿ ಎಸೆಯಲು ಯತ್ನಿಸಿದಾತ ಮುಸ್ಲಿಂ ಆಗಿದ್ದರೆ ಏನಾಗುತ್ತಿತ್ತು? ಇಡೀ ದೇಶವು ಇಷ್ಟೊಂದು ನಿಸ್ತೇಜವಾಗಿ ಪ್ರತಿಕ್ರಿಯೆ ನೀಡುತ್ತಿತ್ತೇ? ಗೃಹ ಸಚಿವಾಲಯ ಮತ್ತು ರಾಷ್ಟ್ರೀಯ ಭದ್ರತಾ ಸಂಸ್ಥೆಗಳು ಈಗ ನಡೆದುಕೊಂಡ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದವೇ? ಸುದ್ದಿ ವಾಹಿನಿಗಳು ಇದನ್ನು ದಿನಗಟ್ಟಲೆ ಹಬ್ಬ ಮಾಡುತ್ತಿರಲಿಲ್ಲವೇ? ಆರೋಪಿಯು ಕೆಲವೇ ಕೆಲವು ಸೌಮ್ಯ ಪ್ರಶ್ನೆಗಳಿಗೆ ಉತ್ತರಿಸಿ ನಡೆದುಹೋಗುವುದನ್ನು ನಾವು ಕಾಣಲಾಗುತ್ತಿತ್ತೇ? ನ್ಯಾಯಮೂರ್ತಿ ಗವಾಯಿ ಅವರು ನ್ಯಾಯಾಂಗದ ಅತ್ಯುನ್ನತ ಹುದ್ದೆಗೆ ಏರಿರಬಹುದು. ಆದರೆ, ಅದು ಸಾಮಾಜಿಕ ಸ್ಥಾನಮಾನವನ್ನು ಬದಲಾಯಿಸದು ಎಂಬುದು ಇದರಿಂದ ತಿಳಿಯುತ್ತದೆ.

ಕೊನೆಯದಾಗಿ, ಪ್ರಶ್ನೆಗಳನ್ನು ಕೇಳೋಣ: ಪೂರನ್ ಕುಮಾರ್ ದಲಿತ ಅಲ್ಲದೇ ಇದ್ದರೆ ಏನಾಗುತ್ತಿತ್ತು? ಅಧಿಕಾರಿಗಳ ನಡುವೆ ಪೈಪೋಟಿ ಮತ್ತು ಅಪಥ್ಯ ಎನಿಸುವ ಧ್ವನಿಗಳಿಗೆ ಕಿರುಕುಳ ನೀಡುವುದು ಅಧಿಕಾರಶಾಹಿ ಜಗತ್ತಿನಲ್ಲಿ ಹೊಸದೇನೂ ಅಲ್ಲ. ಆದರೆ, ಪೂರನ್ ಕುಮಾರ್ ಅವರ ಮರಣಪತ್ರವು ತಮ್ಮ ಮೇಲಧಿಕಾರಿಗಳು ಪದೇ ಪದೇ ತಮ್ಮನ್ನು ಏಕಾಂಗಿಯಾಗಿಸಿ ಮತ್ತು ಮೂಲೆಗುಂಪು ಮಾಡಿದ ಕಥೆ ಹೇಳುತ್ತದೆ. ಏಕಾಂಗಿಯಾಗಿಸುವಿಕೆಯ ಹಿಂದೆ ಭಿನ್ನ ದನಿಯನ್ನು ದೂರ ಇರಿಸುವ ಪ್ರಯತ್ನ ಮಾತ್ರ ಇದೆಯೇ ಅಥವಾ ಸಾಮಾಜಿಕ ಮೂಲೆಗುಂಪು ಮಾಡುವಿಕೆಯೂ ಇದೆಯೇ? ತಮ್ಮದೇ ಸಮುದಾಯದ ಅಧಿಕಾರಿಗಳು ಅವರ ಸುತ್ತ ಇದ್ದಿದ್ದರೆ ಅವರು ಇದೇ ಪರಿಸ್ಥಿತಿಯನ್ನು ಎದುರಿಸಬೇಕಾಗುತ್ತಿತ್ತೇ? ತಮಗೆ ಆದ ಕಿರುಕುಳಕ್ಕೆ ಜಾತಿ ತಾರತಮ್ಯವೇ ಕಾರಣ ಎಂದು ಅವರೇ ಗುರುತಿಸಿದ್ದಾರೆ. ಈ ಘಟನೆಯ ಕುರಿತು ವ್ಯಾಪಕವಾದ ಕಳಕಳಿ ವ್ಯಕ್ತವಾಗಿದೆ ಮತ್ತು ಘಟನೆಗೆ ಪ್ರಚಾರವೂ ಸಿಕ್ಕಿದೆ. ಐಎಎಸ್ ಅಧಿಕಾರಿಗಳ ಸಂಘವು ಶೋಕಪತ್ರ ಬರೆದುಕೊಟ್ಟಿದೆ; ಐಪಿಎಸ್ ಅಧಿಕಾರಿಗಳ ಸಮೂಹವು ಶಿಷ್ಟಾಚಾರದ ಸಂತಾಪ ಸೂಚಿಸಿದೆ. ಹಾಗಿದ್ದರೂ ಈ ಘಟನೆಯ ಹಿಂದೆ ಜಾತಿ ತಾರತಮ್ಯದ ಆಯಾಮವೂ ಇದೆ ಎಂಬುದನ್ನು ಯಾರೂ ಗುರುತಿಸಲೂ ಇಲ್ಲ, ಆ ಕುರಿತು ಚರ್ಚೆಯೂ ಆಗಿಲ್ಲ. ಸುಮೀತ್ ಮಸ್ಸರ್ ಮತ್ತು ಪ್ರಬೋಧನ್ ಪಾಲ್ ಅವರು ಹೇಳಿರುವಂತೆ, 'ಜಾತಿರಹಿತ ಅಧಿಕಾರಿ ಎಂಬುದು ಮಿಥ್ಯೆ'. ನಾನು ಕೇಳಿದ ಕಡಲೆ–ಬೆಲ್ಲದ ಕಥೆಯು ಬಾಬಾಸಾಹೇಬ್ ಅವರ ಚಿತ್ರವನ್ನು ಮತ್ತೆ ಹಾಕಲು ಕಾರಣವಾಗಿದೆ.

ಈ ಮೂರು ಕಥನಗಳು ಬಾಬಾಸಾಹೇಬ್ ಅವರ ಜಾತಿ ವಿನಾಶದ ಸಂಕಲ್ಪವನ್ನು ಮರುಸ್ಥಾಪಿಸಬಹುದೇ?





ಸುಭಾಷಿತ

ಪರಾನುಕರಣೆಯ ಪರಮಾನ್ನಕ್ಕಿಂತ ಸ್ವಸಾಧನೆಯ ಸಾರು ಅನ್ನ ಸ್ವಾದಿಷ್ಟ. **ಕೆ.ಎಸ್. ನಿಸಾರ್ ಅಹಮದ್**

ವಾಚಕರ ವಾಣಿ

ಖಾಂಡವವನ ಸ್ಥಿತಿ ಲಾಲ್‌ಬಾಗ್‌ಗೆ ಬೇಕೆ?

ಸರ್ಕಾರವು ಲಾಲ್‌ಬಾಗ್‌ನೊಳಗೆ ಜೋಡಿ ಸುರಂಗ ರಸ್ತೆ ನಿರ್ಮಾಣಕ್ಕೆ ಮುಂದಾಗಿರುವುದು ದುರದೃಷ್ಟಕರ. ಬೆಂಗಳೂರಿಗರಿಗೆ ಉಸಿರಾಡಲು ಶುದ್ಧ ಗಾಳಿ ಬೇಡವೆ? ಪರಿಸರ ಪ್ರೇಮಿಗಳು ಲಾಲ್‌ಬಾಗಿನ ದಯನೀಯ ಸ್ಥಿತಿ ಕಂಡು ನೀರವ ಮೌನಕ್ಕೆ ಜಾರಿದ್ದಾರೆ. ಕಬ್ಬನ್ ಪಾರ್ಕ್ ಪರಿಸ್ಥಿತಿ ಇದಕ್ಕಿಂತ ಭಿನ್ನವಿಲ್ಲ. ಈಗಾಗಲೇ, ಉದ್ಯಾನದ 330 ಎಕರೆ ವಿಸ್ತೀರ್ಣವು, 196 ಎಕರೆಗೆ ಇಳಿದಿರುವುದು ನಮ್ಮೆಲ್ಲರ ಪರಿಸರ ಪ್ರಜ್ಞಾಶೂನ್ಯತೆಗೆ ಹಿಡಿದ ಕನ್ನಡಿ. ಬ್ರಿಟಿಷರು ಇಡೀ ಬೆಂಗಳೂರನ್ನೇ ಲಾಲ್‌ಬಾಗ್ ಮಾಡಲು ಬಯಸಿದ್ದರಂತೆ. ಅಂತಹ ಲಾಲ್‌ಬಾಗನ್ನೇ ಇಲ್ಲವಾಗಿಸುವ ಹುಂಬತನ ಸರಿಯಲ್ಲ. ಇಂದ್ರಪ್ರಸ್ಥ ನಿರ್ಮಾಣಕ್ಕಾಗಿ ಖಾಂಡವವನ ಧ್ವಂಸ ಮಾಡಿದ ಮಹಾ ಭಾರತದ ಕಥೆಯಂತೆ ಈ ಎರಡೂ ಉದ್ಯಾನಗಳನ್ನು ಬಲಿ ನೀಡಬಾರದು. ರಾಜ್ಯದಲ್ಲಿ ಪರಿಸರ ಉಳಿಸುವ ಹೋರಾಟಕ್ಕೆ ದೊಡ್ಡ ಪರಂಪರೆ ಇದೆ. ಪರಿಸರವಾದಿಗಳು ಮತ್ತು ಲಾಲ್‌ಬಾಗ್ ಉಳಿಸಿ ಮನಃಸ್ಥಿತಿಯ ಜನರನ್ನು ಸರ್ಕಾರವು ಆಹ್ವಾನಿಸಿ ಪರ್ಯಾಯ ಮಾರ್ಗ ಕಂಡುಕೊಳ್ಳುವ ಅವಶ್ಯಕತೆ ಇದೆ.

ಟಿ. ನಾರಾಯಣ ಗೌಡ, ಬೆಂಗಳೂರು

ನಿಜವಾದ ಸಾಧಕರಿಗೆ ಪ್ರಶಸ್ತಿ ದೊರಕಲಿ

ನವೆಂಬರ್ 1ರಂದು ಕರ್ನಾಟಕ ರಾಜ್ಯೋತ್ಸವವನ್ನು ಅತ್ಯಂತ ಸಡಗರದಿಂದ ಆಚರಿಸುತ್ತೇವೆ. ಅದರ ಅಂಗವಾಗಿ ವಿವಿಧ ಕ್ಷೇತ್ರದಲ್ಲಿ ಅತ್ಯುನ್ನತ ಸಾಧನೆ ಮಾಡಿದವರಿಗೆ ಪ್ರಶಸ್ತಿ ಪ್ರದಾನ ಮಾಡುವ ಪರಿಪಾಟವಿದೆ. ಪ್ರಶಸ್ತಿಯು ಅನರ್ಹರ ಪಾಲಾಗದಂತೆ ಸರ್ಕಾರ ಎಚ್ಚರವಹಿಸಲಿ. ಆಗಷ್ಟೇ ಅದರ ಮೌಲ್ಯ ಹೆಚ್ಚಲಿದೆ.

ಪ್ರೊ. ಟಿ. ನಾರಾಯಣಪ್ಪ, ಬೆಂಗಳೂರು

ತುಂಗಭದ್ರಾ ಕ್ರಸ್ಟ್ ಗೇಟ್ ದುರಸ್ತಿ ವಿಳಂಬ

ತುಂಗಭದ್ರಾ ನದಿಯ ಸುತ್ತಮುತ್ತ ಕಾರ್ಖಾನೆಗಳು ತಲೆಯೆತ್ತಿವೆ. ವ್ಯಾಪಕ ಪ್ರಮಾಣದಲ್ಲಿ ಅನುಪಯುಕ್ತ ತ್ಯಾಜ್ಯ, ಮಾಲಿನ್ಯಕಾರಕ ಕರಿಬೂದಿ ಹಾಗೂ ದೂಳು ನದಿಯ ಒಡಲು ಸೇರುತ್ತಿವೆ. ನದಿಯಲ್ಲಿ ಹೂಳು ತುಂಬಿ ನೀರಿನ ಸಂಗ್ರಹ ಪ್ರಮಾಣ ಕಡಿಮೆಯಾಗುತ್ತಿದೆ. ಕ್ರಸ್ಟ್‌ಗೇಟ್‌ಗಳು ದುರಸ್ತಿಯಾಗದೆ ನಲುಗುತ್ತಿವೆ. ಈ ಬಗ್ಗೆ ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ. ಗಡ್ಡಕ್ಕೆ ಬೆಂಕಿ ಬಿದ್ದಾಗ ಬಾವಿ ತೋಡುವ ಕೆಲಸ ಮಾಡುವುದನ್ನು ಬಿಟ್ಟು ಕೂಡಲೇ ತುಂಗಭದ್ರಾ ಉಳಿಸುವ ಕೆಲಸ ಆಗಬೇಕಿದೆ.

ಎಸ್.ಜಿ. ಗಡ್ಡಿ, ಹೊಸಪೇಟೆ

ಮತದಾರರ ಪಟ್ಟಿಯಲ್ಲಿ ಅಕ್ರಮ ತಪ್ಪಿಸಿ

ವಿಧಾನ ಪರಿಷತ್ ತನ್ನದೇ ಆದ ಘನತೆ ಹೊಂದಿದೆ. ಪರಿಷತ್‌ಗೆ ಆಯ್ಕೆ ಆಗುವವರು ಹಾಗೂ ಆಯ್ಕೆ ಮಾಡುವ ಮತದಾರರು ಸಾರ್ವಜನಿಕರಿಗಿಂತ ಭಿನ್ನರು. ಅಭ್ಯರ್ಥಿಗಳು ಪರಿಷತ್ ಚುನಾವಣೆಯಲ್ಲಿ ಶತಾಯಗತಾಯ ಗೆಲುವು ಸಾಧಿಸಲು ತಂತ್ರಗಾರಿಕೆ ರೂಪಿಸುವುದು ಒಂದೆಡೆಯಾದರೆ, ಚುನಾವಣಾ ಅಕ್ರಮಗಳು ಇನ್ನೊಂದೆಡೆ. ಪರಿಷತ್‌ನ ಪದವಿ ಹಾಗೂ ಶಿಕ್ಷಕರ ಕ್ಷೇತ್ರದ ಚುನಾವಣೆಗಳಲ್ಲಿ ನಕಲಿ ಮತದಾರರ ಸೃಷ್ಟಿಯು ವ್ಯವಸ್ಥೆಯನ್ನೇ ಅಣಕಿಸುವಂತಿದೆ. ಪ್ರತಿ ಚುನಾವಣೆಯಲ್ಲೂ ಮತದಾರರ ಪಟ್ಟಿ ಸಿದ್ಧಪಡಿಸುವಾಗ ನಕಲಿ ಮತದಾರರು ಸೇರ್ಪಡೆಗೊಳ್ಳುತ್ತಾರೆ. ಇದು ನಿಜಕ್ಕೂ ಕೌತುಕ. ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಯು ನಿಧಾನವಾಗಿ ನಡೆಯುತ್ತದೆ. ಈ ಪ್ರಕ್ರಿಯೆಯನ್ನು ಆನ್‌ಲೈನ್ ಮಾಡಿದರೆ ಅಕ್ರಮಗಳಿಗೆ ಕಡಿವಾಣ ಬೀಳಲಿದೆ.

ಪ್ರಹ್ಲಾದ ವಾ. ಪತ್ತಾರ, ಬೆಂಗಳೂರು

ಮತಕ್ಕಾಗಿ ರೀಲ್ಸ್ ಪ್ರಚೋದನೆ ಸರಿಯಲ್ಲ

ಬಿಹಾರದ ಚುನಾವಣಾ ಪ್ರಚಾರ ರ‍್ಯಾಲಿಯಲ್ಲಿ ಪ್ರಧಾನಿ ನರೇಂದ್ರ ಮೋದಿ, 'ರೀಲ್ಸ್ ಮಾಡುವುದರಿಂದ ಬಿಹಾರದ ಯುವಜನತೆ ಸಾಕಷ್ಟು ಒಳ್ಳೆಯ ಸಂಪಾದನೆ ಮಾಡುತ್ತಿದ್ದಾರೆ. ದಿನದ ಒಂದು ಜಿಬಿ ಡೇಟಾ ಬೆಲೆ ಒಂದು ಕಪ್ ಚಹಾದ ದರಕ್ಕಿಂತಲೂ ಕಡಿಮೆಯಿದೆ. ಇದರಿಂದ ರೀಲ್ಸ್ ಹಾಗೂ ಇಂಟರ್‌ನೆಟ್ ಬಳಕೆ ಹೆಚ್ಚಾಗುತ್ತಿದೆ. ಇದಕ್ಕೆ ಬಿಜೆಪಿ ಸರ್ಕಾರವೇ ಕಾರಣ' ಎಂದಿದ್ದಾರೆ. ಪ್ರಧಾನಿ ಅವರ ಈ ಹೇಳಿಕೆಯು ಯುವಜನರನ್ನು ಹಾದಿ ತಪ್ಪಿಸುವಂತಿದೆ. ಯುವಜನರಿಗೆ ಉದ್ಯೋಗ ಸೃಷ್ಟಿಸಲು ಬೇಕಾದ ಮಾರ್ಗ, ಅವಕಾಶ ಕಲ್ಪಿಸಿಕೊಡಬೇಕಾದವರೇ ನೇರವಾಗಿ ರೀಲ್ಸ್ ಮಾಡಲು ಪ್ರೋತ್ಸಾಹ ನೀಡುವುದು ಎಷ್ಟು ಸರಿ? ರೀಲ್ಸ್‌ನಿಂದ ನಿರುದ್ಯೋಗ ಪ್ರಮಾಣ ಕಡಿಮೆಯಾಗಿದ್ದರೆ ದೇಶದಲ್ಲಿರುವ ನಿರುದ್ಯೋಗಿ ಯುವಜನರಿಗೆ ಯುವನಿಧಿ ಘೋಷಿಸುವ ಅವಶ್ಯಕತೆಯಾದರೂ ಇದೆಯೇ? ಮತಕ್ಕಾಗಿ ರೀಲ್ಸ್ ಮಾಡುವಂತೆ ಪ್ರಚೋದಿಸುವುದು ಸರಿಯಲ್ಲ.

ಸುರೇಂದ್ರ ಪೈ, ಭಟ್ಕಳ

ಭ್ರೂಣಹತ್ಯೆ

ಹೆಣ್ಣು
ಜಗದ ಬೆಡಗು
ಜಗದ ಸೊಬಗು
ಜಗದ ಬೆರಗು
ಜಗದ ಬೆಳಕಾಗಿ
ಹೆಣ್ಣೇ ನೀ ಮಿನುಗು
ತೊಲಗಲಿ
ಭ್ರೂಣಹತ್ಯೆ ಪಿಡುಗು!


ಆರ್. ನಾಗರಾಜ್, ಗೊರೂರು

ಸಾವಯವ ಕೃಷಿ ಅಭಿಯಾನ ನಡೆಯಲಿ

ನೆಲ ಮತ್ತು ಜಲ ಸಂರಕ್ಷಣೆ ಹಾಗೂ ಪರಿಸರ ಸಮತೋಲನಕ್ಕಾಗಿ ಶ್ರಮಿಸುತ್ತಿರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ತನ್ನ ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿರುವುದು ಸರಿಯಷ್ಟೆ. ವಾಸ್ತವವಾಗಿ ಈ ಮಂಡಳಿಯು ವಿಷಯುಕ್ತ ಆಹಾರ ಸೇವನೆಯ ನಿಯಂತ್ರಣದ ಬಗ್ಗೆ ಪ್ರಸ್ತಾಪಿಸದೆ ಇರುವುದು ನಿಜಕ್ಕೂ ಸೋಜಿಗ. ರಾಸಾಯನಿಕ ಹಾಗೂ ಕೀಟನಾಶಕಗಳ ವಿಪರೀತ ಬಳಕೆಯಿಂದಾಗಿ ಭೂಮಿ ತನ್ನ ಫಲವತ್ತತೆ ಕಳೆದುಕೊಳ್ಳುತ್ತಿದೆ. ವಿಷಯುಕ್ತ ಆಹಾರ ಸೇವನೆ ಮೂಲಕ ಜನರ ಆರೋಗ್ಯ ತೀವ್ರವಾಗಿ ಹದಗೆಡುತ್ತಿದೆ. ಜಲಮಾಲಿನ್ಯದ ಜೊತೆಗೆ ಇತರ ಜೀವಸಂಕುಲದ ನಾಶವೂ ಆಗುತ್ತಿದೆ. ಇನ್ನಷ್ಟು ಭೀಕರ ಅನಾಹುತಗಳು ಸಂಭವಿಸುವ ಮುನ್ನವೇ ಸಾವಯವ ಕೃಷಿಗೆ ಪ್ರೋತ್ಸಾಹಿಸುವ ಅಭಿಯಾನ ಆರಂಭಿಸಬೇಕಿದೆ. ಆ ಮೂಲಕ ಸುವರ್ಣ ಮಹೋತ್ಸವಕ್ಕೆ ನಿಜವಾದ ಘನತೆ ಪ್ರಾಪ್ತಿಯಾಗುತ್ತದೆ.

ಭೀಮಾನಂದ ಮೌರ್ಯ, ಮೈಸೂರು

ಚುರುಮುರಿ



ಹೋಗದಿರಿ...

● ಲಿಂಗರಾಜು ಡಿ.ಎಸ್.

ಹಾಸನಾಂಬೆ ಗುಡಿ ಬಾಗಿಲು ಹಾಕಿದ ಮಾರನೇಗೆ ಹೋಗಿ ಗುಡಿ ಅಂಗಳದೇಲಿ ಕುಂತುದ್ದೆ. ಗುಡಿ ಒಳಗಿಂದ ದೊಡ್ಡ ಕುಂಕುಮ ಹಚ್ಚಿಕ್ಯಂದು ದೇವತೆಗಳಂಗಿದ್ದ ಏಳು ಜನ ಹೆಣ್ಮಕ್ಕಳು, ಇಬ್ಬರು ಗಣುಸ್ರು ತೇಲಿಕ್ಯಂದು ಬಂದಂಗೆ ಆಚೆಗೆ ಕಡೆದ್ರು. ಅಯ್ಯೋ ನನ್ನಪ್ಪನೇ ಏನಿದು ಮಾಯಕ ಅಂತ ಬಾಯಮ್ಯಾಗೆ ಬೆರಳಿಟ್ಟೆ. ನನ್ನ ಮುಂದ್ಲಿಂದ ಅವರೆಲ್ಲಾ ಹೋಗುವಾಗ 'ಅವ್ವೈ ಗುಡಿ ಒಳಗಿಂದ ಈಥರಕೆ ಬಂದ್ರಲ್ಲ ತಾಯಿ, ಯಾರು ನೀವು?' ಅಂತಂದೆ.

'ಲೇ ಯಾರ ಕಣ್ಣಿಗೂ ಕಾಣದೇ ಇರೋ ನಾವು ಇವನ ಕಣ್ಣಿಗೆ ಕಂಡುದ್ದೀವಲ್ಲ. ಲೋ ಮಗಾ, ನಾನು ಹಾಸನಾಂಬೆ. ಇವರು ಸಪ್ತ ಮಾತೃಕೆಯರು ಕನಪ್ಪಾ. ಇವರು ಸಿದ್ದೇಶ್ವರ, ಗಣೇಶ ದೇವರು' ಅಂದರು.

'ಅಡ್ಡಬಿದ್ದೆ ಕವ್ವಾ. ಜನ ನಿಮ್ಮನ್ನ ನೋಡಕ್ಕೆ ಅಂತ ತೆಂಕಲು, ಮೂಡ್ಲಿಂದ ಬಂದಿದ್ರು. ಅದೇಟೋ ಜನಕ್ಕೆ ನಿಮ್ಮ ದರ್ಸನವೇ ಆಗ್ನಿಲ್ಲವಂತೆ' ಅಂದೆ.

'ಜನಕ್ಕೆ ದರ್ಸನ ಕೊಟ್ಟು ಅವರ ಆಸೆ ಈಡೇರಿಸಬೇಕು ದಿಟ. ಈ ರಾಜಕೀಯದೋವು ಅಧಿಕಾರದ ಆಸೆಗೆ ಜನಕ್ಕೇ ಅಲ್ಲ, ನಮಗೂ ಅಡ್ಡಗ್ಯಾನ ಮಾಡಿಬುಡ್ತವೆ ಕನೋ' ಹಾಸನವ್ವ ಸಿಟ್ಟು ಮಾಡಿಕ್ಯತ್ತು.

'ನಮ್ಮ ತಲೆ ಮ್ಯಾಲೇ ಕೈಇಟ್ಟು ಸುಳ್ಳನ್ನೇ ಸತ್ಯ ಅಂತ ಪ್ರಮಾಣ ಮಾಡ್ತವೆ ಕಯ್ಯಾ. ನಮ್ಮುನ್ನೂ ಬಾಳಗೆಡಿಸಿಬುಟ್ಟಾರು ಅಂತ ಗಾಬರಿಯಾಗಿ ಇಲ್ಲಿಂದ ಹೊಂಟೋಗಮು ಅಂತಿದ್ದೀವಿ' ಅಂದ ಚಾಮುಂಡವ್ವನ ಮಾತು ಕೇಳಿ ನನಗೆ ಗಾಬರಿಯಾತು.

'ಅವ್ವೈ, ಭಕ್ತರನ್ನ ನಿಮ್ಮ ಮಡಿಲಿಗೆ ಹಾಕ್ಯಂದು ಇತ–ಪರ ನೋಡದೆಲೆ ಹೊಂಟೋದ್ರೆ ಅದು ನ್ಯಾಯವಾ ನಮ್ಮವ್ವ. ನಾವು ಕಷ್ಟ ಬಂದಾಗ ಯಾರತಕ್ಕೋಗನೆ?' ಅಂತಂದೆ. ಹಾಸನವ್ವ ಉಳಿದೋರ ಜೊತೆ ಮಾತಾಡಿಕ್ಯಂದು ಬತ್ತಿನಿರು ಅಂತ ಹೋತು.

'ದಿಟ ಕಲ ಮಗ. ಜನಕ್ಕೆ ಒಳ್ಳೇದಾಗಬಕು. ಇಲ್ಲೇ ಇರ್ತೀವಿ ಬುಡು' ಅಂತಂದು ಎಲ್ಲಾರೂ ಗುಡಿ ಒಳಿಕ್ಕೋದರು. ನಾನು ನಿಸೂರಾದೆ.

ಸಂಗತ

ಕಡುಬಿನ ರುಚಿಗೆ ತಿಂದದ್ದೇ ಆಧಾರ ಅಲ್ಲವೇ?

ಸಂಘ ಚಾತುರ್ವರ್ಣವನ್ನು ಆಚರಿಸುತ್ತಿಲ್ಲ. ಮನುಸ್ಮೃತಿಯ ಬಗ್ಗೆ ಯಾರೇನೇ ಹೇಳಿದರೂ, ಸಂಘದ ಜಾತಿ ಒಂದೇ– ಹಿಂದೂ, ಹಿಂದೂ, ಹಿಂದೂ.

● ಕೋಟ ಶ್ರೀನಿವಾಸ ಪೂಜಾರಿ

'ದೇವನೂರರಿಗೊಂದು ದಾಳಿಂಬೆ ಕೊಡಿ' (ಅ. 11) ಎನ್ನುವ ನನ್ನ ಬರಹಕ್ಕೆ ನೀಡಿರುವ ಪ್ರತಿಕ್ರಿಯೆಯಲ್ಲಿ (ಅ. 18), ನಾನು ಕೊಡ ಹೇಳಿದ ದಾಳಿಂಬೆಯಲ್ಲಿ ಹುಸಿ ದೇಶಪ್ರೇಮ ಮತ್ತು ಧರ್ಮಪ್ರೇಮದ ಗೀಳಿನ ಮತಾಂಧ ಸಂಘಟನೆಗಳಿಗೆ ಹೆಚ್ಚು ಪಾಲು ನೀಡುವೆ ಎಂದು ದೇವನೂರ ಮಹಾದೇವ ಅವರು ನನ್ನನ್ನು ಛೇಡಿಸಿದ್ದಾರೆ. 1939ರಲ್ಲಿ ಸಂಘದ ಶಾಖೆಗೆ ಅಂಬೇಡ್ಕರ್ ಕೊಟ್ಟ ಭೇಟಿಯನ್ನು (ರಾಹುಲ್ ಶಾಸ್ತ್ರಿಯವರ ಪುಸ್ತಕದ ಉಲ್ಲೇಖವನ್ನು ಒಪ್ಪದೆ), ಸಾಕ್ಷಿಗಳಿಲ್ಲದ ಕಟ್ಟುಕತೆ ಮತ್ತು ಸತ್ಯಕ್ಕೆ ದೂರವಾದ ಮಾಹಿತಿ ಎಂದು ಹೇಳಿದ್ದಾರೆ.

ಸಂಘದ ಶಾಖೆಗೆ ಬಾಬಾ ಸಾಹೇಬರು ಭೇಟಿ ಕೊಟ್ಟಿದ್ದಕ್ಕೆ ದಾಖಲೆ ಕೇಳುವಾಗ, ಸರಿಸುಮಾರು 85 ವರ್ಷಗಳ ಹಿಂದೆ ಶಾಖೆಯಲ್ಲಿ ಬಂದ ಅತಿಥಿಗಳನ್ನು ದಾಖಲಿಸಿಕೊಳ್ಳುವ ಛಾಯಾಚಿತ್ರ ಅಥವಾ ವಿಡಿಯೊ ದಾಖಲಾತಿ ಮಾಡಿಕೊಳ್ಳುವ ತಂತ್ರಜ್ಞಾನವಿತ್ತೇ ಎಂಬ ಬಗ್ಗೆ ಅವರು ಯಾಕೆ ಯೋಚಿಸುವುದಿಲ್ಲ? ವ್ಯಕ್ತಿಯೊಬ್ಬ ಹೊಟ್ಟೆ ತುಂಬ ಕಡುಬು ತಿಂದು, ಅದು ರುಚಿ ಇಲ್ಲ ಎಂದು ವಾದಿಸಿದರೆ ಕಡುಬಿನ ರುಚಿಗೆ ತಿಂದದ್ದೇ ಮೂಲ ಆಧಾರ ಎನ್ನಬೇಕಲ್ಲವೇ?

1963ರಲ್ಲಿ ನೆಹರೂರವರು ಭಾರತದ ಗಣರಾಜ್ಯೋತ್ಸವದ ಪರೇಡ್‌ನಲ್ಲಿ ಭಾಗವಹಿಸಲು ಆರ್‌ಎಸ್‌ಎಸ್‌ಗೆ ಅವಕಾಶ ನೀಡಿದ್ದು ಸುಳ್ಳೇ? ಅದು ಸತ್ಯ ಎಂದು ದೇವನೂರರು ಒಪ್ಪುತ್ತಾರಾದರೆ, ಅದೇ ನೆಹರೂ, ದುಂಡು ಮೇಜಿನ ಚರ್ಚೆಯಲ್ಲಿ ಸಂಘದ ಹಿರಿಯರನ್ನು ಕರೆದು ಸಲಹೆ ಕೇಳಿದ್ದನ್ನು ಫೋಟೊಗಳಿಲ್ಲ ಎಂಬ ಕಾರಣಕ್ಕೆ ಘಟನೆಯೇ ಸುಳ್ಳು ಎಂದು ಹೇಗೆ ಹೇಳಬಲ್ಲರು?

1969ರಲ್ಲಿ ಉಡುಪಿಯಲ್ಲಿ, ವಿಶ್ವ ಹಿಂದೂ ಪರಿಷತ್ತಿನ ನೇತೃತ್ವದಲ್ಲಿ ನಡೆದ ಹಿಂದೂ ಸಮಾವೇಶದಲ್ಲಿ ಸಂತರು ತುಂಬಿದ ವೇದಿಕೆಯಲ್ಲಿ ಮಾತನಾಡಿದ ಸಂಘದ ಹಿರಿಯ, ನನ್ನದೇ ಒಡಲ ಭಾಷೆಯಲ್ಲಿ ಹೇಳುವುದಾದರೆ ಪರಮ ಪೂಜ್ಯ ಗೋಲ್ವಲ್ಕರ್, ಜಾತಿಯ ಹೆಸರಲ್ಲಿ ಹಿಂದೂ ಧರ್ಮ ಒಡೆಯದಂತೆ ಜಾಗ್ರತೆ ವಹಿಸೋಣ ಎಂದು ಹೇಳಿದ್ದರು. ಉಡುಪಿಯ ಹಿಂದೂ ಧಾರ್ಮಿಕ ಸಮಾವೇಶದ ನಂತರ ಸಂಘದ ಹಿರಿಯ ಪ್ರಚಾರಕ ಸೂರ್ಯನಾರಾಯಣ ಅವರನ್ನು ಭೇಟಿಯಾದಾಗ, ಅಸ್ಪೃಶ್ಯತೆ ಕೆಲವೇ ಕೆಲವು ಕೊಳಕು ಮನುಷ್ಯರ ಮನಸ್ಸುಗಳಲ್ಲಿ ತುಂಬಿದೆ. ಆ ಮನಸ್ಸುಗಳ ವಿರುದ್ಧ ಹೋರಾಡಲು ಸಂಘದ ಕಾರ್ಯಕರ್ತರು ದೀರ್ಘ ಕಾಲ ಶ್ರಮಿಸಬೇಕಾಗಬಹುದು ಎಂದು ಹೇಳಿದ್ದನ್ನು ದಾಖಲಿಸಿದರೆ, ಅದು ಸುಳ್ಳಿನ ಗೋಪುರ ಎಂದು ಅಪ್ಪಣೆ ಕೊಡಿಸಲು ಈ ನಾಡಿನ ಹಿರಿಯ ಚಿಂತಕ ದೇವನೂರ ಅವರಿಗೆ ಏನಧಿಕಾರವಿದೆ?



ಸಂಘದ ಸ್ಥಾಪಕ ಸರಸಂಚಾಲಕ ಡಾಕ್ಟರ್ ಜೀ ಮತ್ತು ಎರಡನೇ ಸರ ಸಂಚಾಲಕ ಗೋಲ್ವಲ್ಕರ್ ಅವರಿಂದ ಪ್ರೇರಿತರಾದ ಮೂರನೇ ಸರ ಸಂಚಾಲಕ ಬಾಳಾಸಾಹೇಬ್ ದೇವರಸ್, ಹಿಂದೂ ಧರ್ಮದ ಮೇಲು–ಕೀಳು, ಜಾತೀಯತೆ ಬಗ್ಗೆ ಮಾತನಾಡುತ್ತ, 'ಜಗತ್ತಿನಲ್ಲಿ ಮನುಷ್ಯ ಮನುಷ್ಯನನ್ನು ಮುಟ್ಟಲಾಗದ ಅಸ್ಪೃಶ್ಯತೆ ತಪ್ಪಲ್ಲವಾದರೆ, ಪ್ರಪಂಚದ ಯಾವ ಅಪರಾಧವೂ ತಪ್ಪಲ್ಲ' ಎಂದು ಘೋಷಿಸಿದ್ದರು. ಸಂಘ ಒಪ್ಪದವರೂ ಇದನ್ನು ಸುಳ್ಳೆನ್ನಬಹುದು.

ನನ್ನ ಮನೆಯ ಕೂಗಳತೆಯ ದೂರದಲ್ಲಿರುವ ಮುಸ್ಲಿಂ ಬಂಧುಗಳ ಮಸೀದಿಯಲ್ಲಿ ಪ್ರತಿ ಆಗಸ್ಟ್ 15ರಂದು ಸ್ವಾತಂತ್ರ್ಯ ದಿನಾಚರಣೆ ನಡೆಯುತ್ತದೆ. ಎಷ್ಟೇ ಕೆಲಸದ ಒತ್ತಡವಿದ್ದರೂ ಅಂದು ಮಸೀದಿಗೆ ಹಾಜರಾಗಿ, ಭಾರತದ ತ್ರಿವರ್ಣ ಧ್ವಜವನ್ನು ಹೆಮ್ಮೆಯಿಂದ ಹಾರಿಸುವಾಗ, ನನ್ನೂರ ಮುಸ್ಲಿಂ ಬಂಧುಗಳ ಬಗ್ಗೆ ಗೌರವ ಹೊಂದಿದ್ದೇನೆ. ಇದೇ ಗೌರವ–ಹೆಮ್ಮೆಯನ್ನು ವಿಧಾನಸೌಧದೊಳಗೆ ಪಾಕಿಸ್ತಾನಕ್ಕೆ ಜೈ ಎಂದವರ ಜೊತೆ ಇಟ್ಟುಕೊಳ್ಳಲು ಸಂಘ ನನಗೆ ಕಲಿಸಿಲ್ಲ.

ದೇವನೂರರಿಗೆ ಒಂದು ಸ್ಪಷ್ಟನೆ ನೀಡಬೇಕಾಗಿದೆ. 'ಆರ್‌ಎಸ್‌ಎಸ್ ಆಳ ಅಗಲ' ಎಂಬ ಪುಸ್ತಕಕ್ಕೆ ಪ್ರಾಸ್ತಾವಿಕ ನುಡಿ ಬರೆದ ಗಣ್ಯರೊಬ್ಬರು, ಈ ಪುಸ್ತಕ ಆರ್‌ಎಸ್‌ಎಸ್‌ನ ನಿಜಸ್ವರೂಪ ತಿಳಿಸಿ ಸಂವಿಧಾನದ ಮತ್ತು ದೇಶದ ಏಕತೆ ಗಟ್ಟಿಗೊಳಿಸಲು ಶಕ್ತಿ ನೀಡುತ್ತಿದೆ ಎಂದು ಘೋಷಿಸಿದ್ದರು ಎಂದು ಬರೆದಿದ್ದೆ. ಅದಕ್ಕವರು ಪ್ರಾಸ್ತಾವಿಕ ನುಡಿ ಬರೆದದ್ದೇ ಇಲ್ಲ ಎಂದಿದ್ದಾರೆ. ವಾಸ್ತವಿಕವಾಗಿ ಅದು ಪ್ರಕಾಶಕರ ನುಡಿ. ಅದನ್ನು ಬರೆದವರು ಅಭಿರುಚಿ ಗಣೇಶ್ ಎನ್ನುವವರು. ಇದನ್ನು ದೇವನೂರರು ಅಲ್ಲಗಳೆಯಲಾರರು ಎಂದು ನನ್ನ ಭಾವನೆ.

ಗೋಲ್ವಲ್ಕರ್ ಅವರು ಚಾತುರ್ವರ್ಣದಲ್ಲಿ ನಂಬಿಕೆ ಇರಿಸಿರುವವರೆಂದೂ, ಸಾವರ್ಕರ್ ಮನುಸ್ಮೃತಿಯೇ ಹಿಂದೂ ಕಾಯ್ದೆ ಎಂದಿದ್ದಾರೆ, ಅದಕ್ಕೆ ನಿಮ್ಮ ನಿಲುವೇನು ಎಂದೂ ದೇವನೂರರು ನನ್ನನ್ನು ಪ್ರಶ್ನಿಸಿದ್ದಾರೆ. ಅವರ ಈ ಪ್ರಶ್ನೆಗಳ ಹಿಂದಿನ ಮರ್ಮಗಳನ್ನು ಅರಿತೂ, ಆರ್‌ಎಸ್‌ಎಸ್‌ನ ಒಟ್ಟು ಸಿದ್ಧಾಂತವಿರುವುದು ಹಿಂದೂ–ಒಂದು ಎಂಬುದನ್ನು ಮತ್ತೆ ಪ್ರಸ್ತಾಪಿಸುವೆ; ಹಿಂದೆ ಚಾತುರ್ವರ್ಣ ಇದ್ದರೆ, ಮನುಸ್ಮೃತಿಯ ಚರ್ಚೆ ಇದ್ದದ್ದೇ ಹೌದೆಂದು ತಾವು ವಾದಿಸುತ್ತಿದ್ದರೂ, ಸಂಘದ ಮೂಲಕ ಇಡೀ ಸಮಾಜ ಒಂದಾಗುತ್ತಿದೆ. ಸಂಘದ ಮನೆ ಎಂದವರಾರೂ ಚಾತುರ್ವರ್ಣವನ್ನು ಆಚರಿಸುತ್ತಲೂ ಇಲ್ಲ, ಅನುಭವಿಸುತ್ತಲೂ ಇಲ್ಲ. ಮನುಸ್ಮೃತಿಯ ಬಗ್ಗೆ ಯಾರೇನೇ ಹೇಳಿದರೂ ಸಂಘದ ಜಾತಿ ಒಂದೇ– ಹಿಂದೂ, ಹಿಂದೂ, ಹಿಂದೂ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಹಿಂದುಳಿದ ಪ್ರದೇಶ ತಲುಪದ ಸಿಎಸ್‌ಆರ್

ಕರ್ನಾಟಕವು ಕಂಪನಿಗಳಿಂದ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿ ಪಡೆಯುವ ರಾಜ್ಯಗಳ ಪಟ್ಟಿಯಲ್ಲಿ (2023–24ನೇ ಸಾಲಿನಲ್ಲಿ) ದೇಶದಲ್ಲಿ ಮೂರನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿ ಮಹಾರಾಷ್ಟ್ರ, ನಂತರದ ಸ್ಥಾನದಲ್ಲಿ ಗುಜರಾತ್ ಇವೆ. ಕಂಪನಿಗಳು ಸಿಎಸ್‌ಆರ್ ನಿಧಿಯನ್ನು ನೀಡುವಾಗ ಮುಂದುವರಿದ ರಾಜ್ಯಗಳತ್ತಲೇ ಹೆಚ್ಚು ಗಮನ ಹರಿಸುತ್ತಿವೆ; ನೆರವಿನ ಅಗತ್ಯ ಇರುವ ರಾಜ್ಯಗಳತ್ತ, ಹಿಂದುಳಿದ ಪ್ರದೇಶಗಳತ್ತ, ಸೂಕ್ಷ್ಮ ವಲಯಗಳತ್ತ ಚಿತ್ತ ಹರಿಸುತ್ತಿಲ್ಲ ಎನ್ನುವ ದೂರು ಇದೆ. ಅಂಕಿಅಂಶಗಳೂ ಅದನ್ನೇ ಹೇಳುತ್ತಿವೆ

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಬೆಂಗಳೂರಿನ ರಸ್ತೆ ಗುಂಡಿಗಳು ಸೇರಿದಂತೆ ಬೆಂಗಳೂರಿನಲ್ಲಿ ಮೂಲಸೌಕರ್ಯದ ಸಮಸ್ಯೆಗಳ ಬಗ್ಗೆ ಇತ್ತೀಚೆಗೆ ಕೆಲವು ಉದ್ಯಮಿಗಳು ಬಹಿರಂಗವಾಗಿಯೇ ಆಕ್ಷೇಪಿಸಿದ್ದರು. ಅದಕ್ಕೆ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದ ರಾಜ್ಯದ ಸಚಿವರು, ಕಂಪನಿಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯ (ಸಿಎಸ್‌ಆರ್) ನಿಧಿಯಿಂದ ಮೂಲಸೌಕರ್ಯ ಅಭಿವೃದ್ಧಿಪಡಿಸಲಿ ಎಂದು ಪ್ರತಿಕ್ರಿಯಿಸಿದ್ದರು. ಈ ವಿದ್ಯಮಾನದಿಂದ ಕಂಪನಿಗಳು ನೀಡುವ ಸಿಎಸ್‌ಆರ್ ನಿಧಿಯು ಯಾವ ವಲಯಗಳಿಗೆ ಹೆಚ್ಚು ವೆಚ್ಚವಾಗುತ್ತಿದೆ ಎನ್ನುವ ಪ್ರಶ್ನೆಗಳೂ ಹುಟ್ಟಿಕೊಂಡಿದ್ದವು.

ಭಾರತದಲ್ಲಿ ವರ್ಷದಿಂದ ವರ್ಷಕ್ಕೆ ಸಿಎಸ್‌ಆರ್ ನಿಧಿ ಹೆಚ್ಚುತ್ತಲೇ ಸಾಗುತ್ತಿದೆ. 2023–24ನೇ ಸಾಲಿನಲ್ಲಿ ಈ ಹಣದಲ್ಲಿ ದೇಶದಾದ್ಯಂತ 59,634 ಯೋಜನೆಗಳನ್ನು ಜಾರಿಗೊಳಿಸಲಾಗಿದೆ. ಪ್ರತಿ ಯೋಜನೆಯ ಸರಾಸರಿ ವೆಚ್ಚ ₹58.5 ಲಕ್ಷ. ಅಗ್ರ 10 ಕಂಪನಿಗಳನ್ನು ಹೊರತುಪಡಿಸಿದರೆ, ಉಳಿದ ಕಂಪನಿಗಳು ಸರಾಸರಿಯಾಗಿ ತಲಾ ₹1.07 ಕೋಟಿ ಕೊಡುಗೆ ನೀಡಿವೆ. ನಿಧಿಯಲ್ಲಿ ಶೇ 60ರಷ್ಟು ಹಣವನ್ನು ವಿವಿಧ ವಲಯಗಳಲ್ಲಿ ಮೂಲಸೌಕರ್ಯ ವೃದ್ಧಿಗೆ ಬಳಸಲಾಗಿದೆ.

ದೇಶದಲ್ಲಿ ಸಿಎಸ್‌ಆರ್ (2023-24)

27,188 ಸಿಎಸ್‌ಆರ್ ನಿಧಿಗೆ ಕೊಡುಗೆ ನೀಡಿದ ಕಂಪನಿಗಳು

₹34,909 ಕೋಟಿ ಮಾಡಲಾದ ಒಟ್ಟು ವೆಚ್ಚ

59,633 ಕೈಗೆತ್ತಿಕೊಂಡ ಅಭಿವೃದ್ಧಿ ಯೋಜನೆಗಳು



ವರ್ಷವಾರು ವೆಚ್ಚ (ಕೋಟಿಗಳಲ್ಲಿ)

ವರ್ಷ	ಭಾರತ	ಕರ್ನಾಟಕ
2019-20	₹24,966	₹1,448
2020-21	₹26,211	₹1,278
2021-22	₹27,141	₹1,850
2022-23	₹30,932	₹2,059
2023-24	₹34,909	₹2,255

2023–24ರಲ್ಲಿ ಗರಿಷ್ಠ ನೆರವು ಪಡೆದ ರಾಜ್ಯಗಳು (ಕೋಟಿಗಳಲ್ಲಿ)

ರಾಜ್ಯ	ಮೊತ್ತ
ಮಹಾರಾಷ್ಟ್ರ	₹6,066
ಗುಜರಾತ್	₹2,708
ಕರ್ನಾಟಕ	₹2,255
ತಮಿಳುನಾಡು	₹1,969
ದೆಹಲಿ	₹1,950
ಉತ್ತರ ಪ್ರದೇಶ	₹1,545
ಒಡಿಶಾ	₹1,389
ರಾಜಸ್ಥಾನ	₹1,146
ಆಂಧ್ರ ಪ್ರದೇಶ	₹1,130
ತೆಲಂಗಾಣ	₹1,055

ಪ್ರಾದೇಶಿಕ ವ್ಯತ್ಯಾಸ

2014ರಲ್ಲಿ ಕಂಪನಿಗಳು ಸಿಎಸ್‌ಆರ್ ನಿಧಿಗೆ ₹10 ಸಾವಿರ ಕೋಟಿ ಕೊಡುಗೆ ನೀಡಿದ್ದವು. 2023–24ರಲ್ಲಿ ಈ ಮೊತ್ತವು ದಾಖಲೆಯ ₹34,909 ಕೋಟಿಗೆ ಏರಿದ್ದು, ಹಿಂದಿನ ವರ್ಷಕ್ಕಿಂತ (2022–23) ಶೇ 13ರಷ್ಟು ಹೆಚ್ಚಳವಾಗಿದೆ. ಆದರೆ, ಹೆಚ್ಚು ಉದ್ದಿಮೆಗಳು ಇರುವ, ಆರ್ಥಿಕ ಅಭಿವೃದ್ಧಿಯಲ್ಲಿ ಮುಂದೆ ಇರುವ ಆರು ರಾಜ್ಯಗಳಿಗೆ ಶೇ 60ರಷ್ಟು ಸಿಎಸ್‌ಆರ್ ನಿಧಿ ಸಂದಾಯವಾಗುತ್ತಿದೆ. ಮಹಾರಾಷ್ಟ್ರ, ಗುಜರಾತ್, ಕರ್ನಾಟಕ, ತಮಿಳುನಾಡು, ದೆಹಲಿ ರಾಜ್ಯಗಳಿಗೆ ಹೆಚ್ಚು ಸಿಎಸ್‌ಆರ್ ನಿಧಿ ಸಿಕ್ಕಿದೆ. ಹಿಂದುಳಿದ ಮಿಜೋರಾಂ (₹4.48 ಕೋಟಿ), ಮೇಘಾಲಯ (₹38 ಕೋಟಿ), ಡಿಯು ಮತ್ತು ದಮನ್ (₹13 ಕೋಟಿ), ತ್ರಿಪುರಾ (₹9.45 ಕೋಟಿ), ಪುದುಚೇರಿ (₹32.68 ಕೋಟಿ), ನಾಗಾಲ್ಯಾಂಡ್ (₹15.41 ಕೋಟಿ) ರಾಜ್ಯಗಳಿಗೆ ಕಡಿಮೆ ಕೊಡುಗೆ ಸಂದಾಯವಾಗಿದೆ.

ಕರ್ನಾಟಕದಲ್ಲಿಯೂ ಇದೇ ಪ್ರವೃತ್ತಿ ಕಂಡುಬಂದಿದೆ. ಗದಗ (₹4.15 ಕೋಟಿ), ಕೊಪ್ಪಳ (₹10.76 ಕೋಟಿ), ಬೀದರ್‌ನಂತಹ (₹13 ಕೋಟಿ) ಹಿಂದುಳಿದ ಜಿಲ್ಲೆಗಳಿಗಿಂತ ಮೈಸೂರು, ಬೆಂಗಳೂರು ಗ್ರಾಮಾಂತರ, ದಕ್ಷಿಣ ಕನ್ನಡ, ಧಾರವಾಡ ಜಿಲ್ಲೆಗಳಿಗೆ ಹೆಚ್ಚು ಸಿಎಸ್‌ಆರ್ ನಿಧಿ ಸಿಕ್ಕಿದೆ.

ಕಂಪನಿಗಳು, ತಾವು ಕಾರ್ಯಾಚರಿಸುತ್ತಿರುವ ರಾಜ್ಯ/ಪ್ರದೇಶದಲ್ಲಿಯೇ ಹೆಚ್ಚು ಹಣ ವೆಚ್ಚ ಮಾಡುತ್ತಿವೆ. ನಿಯಮಗಳ ಪ್ರಕಾರ ಇದು ಕಡ್ಡಾಯವೇನಲ್ಲ. ಹಾಗಾಗಿ ಹಿಂದುಳಿದಿರುವ ರಾಜ್ಯ, ಜಿಲ್ಲೆ, ಪ್ರದೇಶಗಳಿಗೆ ಹೆಚ್ಚು ಹಣವನ್ನು ಕೊಡುಗೆಯಾಗಿ ನೀಡಬೇಕು ಎಂದು ಅಧ್ಯಯನಗಳು ಶಿಫಾರಸು ಮಾಡಿವೆ.

ವಲಯವಾರು ಕೊಡುಗೆಯನ್ನು ಗಮನಿಸಿದರೆ, ರಾಜ್ಯದಲ್ಲಿ ಶಿಕ್ಷಣ, ಆರೋಗ್ಯ, ಸುಸ್ಥಿರತೆ, ಗ್ರಾಮೀಣಾಭಿವೃದ್ಧಿ ಮತ್ತು ಕ್ರೀಡೆಗಳಿಗೆ ಹೆಚ್ಚು ಆದ್ಯತೆ ನೀಡಲಾಗಿದೆ. ಆದರೆ, ಹಿರಿಯ ನಾಗರಿಕರ ಯೋಗಕ್ಷೇಮ, ಕೊಳೆಗೇರಿ ಅಭಿವೃದ್ಧಿ, ಲಿಂಗ ಸಮಾನತೆಯಂಥ ಕ್ಷೇತ್ರಗಳಿಗೆ ಹೆಚ್ಚಿನ ಆದ್ಯತೆ ಸಿಕ್ಕಿಲ್ಲ.


ಹೆಚ್ಚು ನೆರವು ಸಿಕ್ಕ ಜಿಲ್ಲೆಗಳು (ಕೋಟಿಗಳಲ್ಲಿ)

ಜಿಲ್ಲೆ	ಮೊತ್ತ
ಮೈಸೂರು	₹156
ಬೆಂ. ಗ್ರಾಮಾಂತರ	₹150
ಬಳ್ಳಾರಿ	₹71
ಕೋಲಾರ	₹52
ದಕ್ಷಿಣ ಕನ್ನಡ	₹51
ಧಾರವಾಡ	₹39
ತುಮಕೂರು	₹29
ಉಡುಪಿ	₹27
ಬೆಳಗಾವಿ	₹22
ರಾಯಚೂರು	₹22

ಏನಿದು ಸಿಎಸ್‌ಆರ್ ನಿಧಿ?

ಕಂಪನಿಗಳ ಕಾಯ್ದೆ–2013ರ 135ನೇ ಸೆಕ್ಷನ್ ಪ್ರಕಾರ, ₹500 ಕೋಟಿ ಅಥವಾ ಅದಕ್ಕಿಂತ ಹೆಚ್ಚು ಮಾರುಕಟ್ಟೆ ಮೌಲ್ಯ ಹೊಂದಿರುವ ಕಂಪನಿಗಳು ಅಥವಾ ₹1,000 ಕೋಟಿ ವಹಿವಾಟು ನಡೆಸುವ ಕಂಪನಿಗಳು ಅಥವಾ ಹಣಕಾಸು ವರ್ಷದಲ್ಲಿ ₹5 ಕೋಟಿ ನಿವ್ವಳ ಲಾಭ ಮಾಡಿದ ಕಂಪನಿಗಳು ತಮ್ಮ ಮೂರು ವರ್ಷಗಳ ಸರಾಸರಿ ಲಾಭಾಂಶದಲ್ಲಿ ಕನಿಷ್ಠ ಶೇ 2ರಷ್ಟು ಮೊತ್ತವನ್ನು ಸಿಎಸ್‌ಆರ್ ಚಟುವಟಿಕೆಗಳಿಗೆ ನೀಡುವುದು ಕಡ್ಡಾಯವಾಗಿದೆ. ಸಿಎಸ್‌ಆರ್ ಹಣವನ್ನು ನೀಡಬಹುದಾದ 24 ಅಭಿವೃದ್ಧಿ ವಲಯಗಳನ್ನೂ ಕಾಯ್ದೆಯಲ್ಲಿ ಉಲ್ಲೇಖಿಸಲಾಗಿದೆ.

ಆಧಾರ: ನ್ಯಾಷನಲ್ ಸಿಎಸ್‌ಆರ್ ಪೋರ್ಟಲ್, ಭಾರತ್ ಸಿಎಸ್‌ಆರ್ ಪರ್ಫಾರ್ಮೆನ್ಸ್ ರಿಪೋರ್ಟ್ (2018–2023)



ಶಿಕ್ಷಣ, ಆರೋಗ್ಯಕ್ಕೆ ಒತ್ತು

ಪ್ರತಿ ವರ್ಷ ಕಂಪನಿಗಳು ತಮ್ಮ ಸಿಎಸ್‌ಆರ್ ಚಟುವಟಿಕೆಯಲ್ಲಿ ಶಿಕ್ಷಣ, ಅಂಗವಿಕಲರಿಗೆ ನೆರವು ಮತ್ತು ಜೀವನೋಪಾಯಕ್ಕೆ ಹೆಚ್ಚು ಒತ್ತು ನೀಡುತ್ತಾ ಬಂದಿವೆ. 2023–24ರಲ್ಲಿ ಈ ಉದ್ದೇಶಕ್ಕೆ ವ್ಯಯಿಸಿದ ಮೊತ್ತ ₹16,288 ಕೋಟಿ. ಕರ್ನಾಟಕದಲ್ಲಿ ಈ ಉದ್ದೇಶಕ್ಕೆ ₹1,162 ಕೋಟಿ ಬಳಸಲಾಗಿದೆ.

ಆರೋಗ್ಯ, ಹಸಿವು–ಬಡತನ ನಿವಾರಣೆ, ಶುದ್ಧ ಕುಡಿಯುವ ನೀರು, ಅಪೌಷ್ಟಿಕತೆ ನಿವಾರಣೆ ಮತ್ತು ಸ್ವಚ್ಛತೆಗೆ ದೇಶದಲ್ಲಿ ₹9,087 ಕೋಟಿ ಖರ್ಚು ಮಾಡಲಾಗಿದೆ. ರಾಜ್ಯದಲ್ಲಿ ಈ ಮೊತ್ತ ₹428 ಕೋಟಿ. ಪರಿಸರ, ಪ್ರಾಣಿಗಳು ಮತ್ತು ಸಂಪನ್ಮೂಲಗಳ ಸಂರಕ್ಷಣೆಗಾಗಿ ದೇಶದಲ್ಲಿ ₹3,459 ಕೋಟಿಯಷ್ಟು ಖರ್ಚು ಮಾಡಲಾಗಿದೆ. ಗ್ರಾಮೀಣ ಅಭಿವೃದ್ಧಿಗೆ ₹2,408 ಕೋಟಿ, ಲಿಂಗಸಮಾನತೆ, ಮಹಿಳಾ ಸಬಲೀಕರಣ, ವೃದ್ಧಾಶ್ರಮಗಳ ನೆರವಿಗಾಗಿ ₹1,092 ಕೋಟಿಯಷ್ಟು ಹಣವನ್ನು ಬಳಸಲಾಗಿದೆ. ಪಾರಂಪರಿಕ ಕಲೆ ಮತ್ತು ಸಂಸ್ಕೃತಿಗಾಗಿ ₹704 ಕೋಟಿ ಖರ್ಚು ಮಾಡಲಾಗಿದೆ.

ರಾಷ್ಟ್ರೀಯ



ಕರೂರು ಕಾಲ್ತುಳಿತದಲ್ಲಿ ಮೃತಪಟ್ಟವರ ಕುಟುಂಬಸ್ಥರೊಂದಿಗೆ ನಟ ವಿಜಯ್ ಭೇಟಿ ಪ್ರಯುಕ್ತ ಮಹಾಬಲಿಪುರ ಸಮೀಪವಿರುವ ರೆಸಾರ್ಟ್ ಹೊರಗೆ ಖಾಸಗಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು –ಪಿಟಿಐ ಚಿತ್ರ

ರೋಡ್ ಶೋ, ರ್‍ಯಾಲಿ ಎಸ್‌ಒಪಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ತಮಿಳುನಾಡಿನಲ್ಲಿ ರಾಜಕೀಯ ಪಕ್ಷಗಳು ನಡೆಸುವ ರೋಡ್ ಶೋ ಮತ್ತು ರ್‍ಯಾಲಿಗಳು ಸೇರಿದಂತೆ ಸಾರ್ವಜನಿಕ ಕಾರ್ಯಕ್ರಮಗಳಿಗೆ ‘ಪ್ರಮಾಣೀಕೃತ ಕಾರ್ಯಾಚರಣೆ ವಿಧಾನ’ವನ್ನು (ಎಸ್‌ಒಪಿ) 10 ದಿನಗಳಲ್ಲಿ ರೂಪಿಸುವಂತೆ ಮದ್ರಾಸ್ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೋಮವಾರ ನಿರ್ದೇಶಿಸಿದೆ.

ಸೆ.27ರಂದು ತಮಿಳಗ ವೆಟ್ರಿ ಕಳಗಂ (ಟಿವಿಕೆ) ಮುಖ್ಯಸ್ಥ, ನಟ ವಿಜಯ್ ಅವರು ನಡೆಸಿದ್ದ ರ್‍ಯಾಲಿಯಲ್ಲಿ ಕಾಲ್ತುಳಿತ ಉಂಟಾಗಿ 41 ಮಂದಿ ಮೃತಪಟ್ಟ ನಂತರ ಸಲ್ಲಿಸಲಾದ ವಿವಿಧ ಅರ್ಜಿಗಳ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಎಂ.ಎಂ. ಶ್ರೀವಾಸ್ತವ ಮತ್ತು ನ್ಯಾಯಮೂರ್ತಿ ಜಿ. ಅರುಳ್ ಮುರುಗನ್ ಅವರಿದ್ದ ಪೀಠವು ಈ ನಿರ್ದೇಶನ ನೀಡಿದೆ.

‘ಎಸ್‌ಒಪಿ ರೂಪಿಸುವವರೆಗೆ ಯಾವುದೇ ರಾಜಕೀಯ ಪಕ್ಷಗಳು ರ್‍ಯಾಲಿ, ರೋಡ್ ಶೋಗಳನ್ನು ನಡೆಸಲು ಅವಕಾಶ ನೀಡುವುದಿಲ್ಲ. ಆದರೆ, ಸಾರ್ವಜನಿಕ ಸಭೆಗಳನ್ನು ನಡೆಸುವುದನ್ನು ತಡೆಯುವುದಿಲ್ಲ’ ಎಂದು ಹೆಚ್ಚುವರಿ ಅಡ್ವೊಕೇಟ್ ಜನರಲ್ ಜೆ. ರವೀಂದ್ರನ್ ಪ್ರಕರಣದ ವಿಚಾರಣೆ ವೇಳೆ ತಿಳಿಸಿದರು.

‘ರಾಜ್ಯ ಸರ್ಕಾರವು 10 ದಿನಗಳಲ್ಲಿ ಎಸ್‌ಒಪಿ ರೂಪಿಸಬೇಕು. ಇಲ್ಲದಿದ್ದರೆ ಆದೇಶ ಹೊರಡಿಸಲಾಗುವುದು’ ಎಂದು ನ್ಯಾಯಪೀಠ ಹೇಳಿತು. ಅರ್ಜಿಗಳ ವಿಚಾರಣೆಯನ್ನು ನ.11ಕ್ಕೆ ಮುಂದೂಡಿತು.

ಇದಕ್ಕೂ ಮೊದಲು, ಟಿವಿಕೆ ಪ್ರಧಾನ ಕಾರ್ಯದರ್ಶಿ ಎನ್. ಆನಂದ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪೀಠವು ವಜಾಗೊಳಿಸಿತು.

ಕ್ಷಮೆ ಕೋರಿದ ವಿಜಯ್

ಕರೂರು ಕಾಲ್ತುಳಿತದಲ್ಲಿ ಮೃತಪಟ್ಟ 31 ಮಂದಿಯ ಕುಟುಂಬಸ್ಥರನ್ನು ಟಿವಿಕೆ ಮುಖ್ಯಸ್ಥ, ನಟ ವಿಜಯ್ ಅವರು ಮಹಾಬಲಿಪುರದ ಸಮೀಪ ಸೋಮವಾರ ಭೇಟಿಯಾದರು. ‘ಮೃತರ ಕುಟುಂಬಸ್ಥರನ್ನು ಭೇಟಿಯಾಗಲು ಕರೂರಿಗೆ ಬರಲು ಸಾಧ್ಯವಾಗದಿದ್ದಕ್ಕೆ ನಟ ವಿಜಯ್ ಅವರು ಕ್ಷಮೆ ಕೋರಿದರು’ ಎಂದು ಟಿವಿಕೆ ಪಕ್ಷದ ಮೂಲಗಳು ತಿಳಿಸಿವೆ.

ರೆಸಾರ್ಟ್‌ವೊಂದರಲ್ಲಿ 50 ಕೊಠಡಿಗಳನ್ನು ಕಾಯ್ದಿರಿಸಿ, 38 ಕುಟುಂಬಗಳ ಸದಸ್ಯರ ಭೇಟಿಗೆ ವ್ಯವಸ್ಥೆ ಮಾಡಲಾಗಿತ್ತು. ಆದರೆ, ಕಾಲ್ತುಳಿತ ಸಂಭವಿಸಿದ 30 ದಿನಗಳ ಬಳಿಕ ಭೇಟಿಗೆ ಸಮಯ ನಿಗದಿಪಡಿಸಿದ್ದನ್ನು ಖಂಡಿಸಿ ಏಳು ಕುಟುಂಬಗಳ ಸದಸ್ಯರು ಸಭೆಯಿಂದ ದೂರು ಉಳಿದರು.

ವಿಜಯ್ ಅವರು ಪ್ರತಿಯೊಬ್ಬರನ್ನೂ ಭೇಟಿಯಾಗಿ ಚರ್ಚಿಸಿದರು. ಮೃತರ ಮಕ್ಕಳ ಶಿಕ್ಷಣಕ್ಕೆ ಹಾಗೂ ಕುಟುಂಬದ ಸದಸ್ಯರಿಗೆ ಅಗತ್ಯ ಹಣಕಾಸಿನ ನೆರವು ಒದಗಿಸುವುದಾಗಿ ಭರವಸೆ ನೀಡಿದರು. ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗಿತ್ತು. ಬಳಿಕ, ಅವರನ್ನು ಕರೂರಿಗೆ ಕರೆದೊಯ್ಯಲಾಯಿತು.

ಬಸ್ ದುರಂತ: ಶವಗಳ ಹಸ್ತಾಂತರ

ಕರ್ನೂಲು (ಆಂಧ್ರಪ್ರದೇಶ): ಕರ್ನೂಲುನಲ್ಲಿ ಖಾಸಗಿ ಬಸ್‌ಗೆ ಬೆಂಕಿ ಹತ್ತಿಕೊಂಡ ಪರಿಣಾಮ ಮೃತಪಟ್ಟ 19 ಜನರ ಮೃತದೇಹಗಳನ್ನು ಅವರ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ.

ಡಿಎನ್‌ಎ ಪರೀಕ್ಷೆಯ ಆಧಾರದಲ್ಲಿ ಮೃತರ ಗುರುತು ಪತ್ತೆ ಮಾಡಿ, ಮೃತದೇಹಗಳನ್ನು ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

‘ಬಿಹಾರ ಮತ್ತು ತಮಿಳುನಾಡಿನವರ ಮೃತದೇಹಗಳನ್ನು ಆಂಧ್ರದಲ್ಲೇ ಅಂತ್ಯಸಂಸ್ಕಾರ ಮಾಡಲು ಅವರ ಕುಟುಂಬಸ್ಥರು ನಿರ್ಧರಿಸಿದ್ದಾರೆ. ಸರ್ಕಾರ ವ್ಯವಸ್ಥೆಗಳನ್ನು ಮಾಡಿದೆ’ ಎಂದು ಅಧಿಕಾರಿಗಳು ಹೇಳಿದ್ದಾರೆ.

44 ಜನರಿದ್ದ ಖಾಸಗಿ ಬಸ್ ಅಪಘಾತದಿಂದಾಗಿ ಶುಕ್ರವಾರ ಬೆಂಕಿಗಾಹುತಿಯಾಗಿತ್ತು. ಅದರಲ್ಲಿದ್ದ 19 ಮಂದಿ ಮೃತಪಟ್ಟಿದ್ದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪ್ರವಾಹದ ನೀರಿನಲ್ಲಿ ಕೊಚ್ಚಿ ಹೋಗುತ್ತಿದ್ದ ಶಿವನ ಪ್ರತಿಮೆಯನ್ನು ಆನೆಯೊಂದು ಸೊಂಡಿಲಿನಲ್ಲಿ ಹಿಡಿದಿಟ್ಟಿರುವ ವಿಡಿಯೊದ ತುಣುಕೊಂದನ್ನು ಹಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆದರೆ ಇದು ಸುಳ್ಳು.



ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್ ಬಳಸಿಕೊಂಡು ಹುಡುಕಾಡಿದಾಗ ಪ್ರಣವ್ ವಿಜಯನ್ ಎಂಬವರು ಅಕ್ಟೋಬರ್ 18ರಂದು ಇನ್‌ಸ್ಟಾಗ್ರಾಂನಲ್ಲಿ ಮಾಡಿದ ಪೋಸ್ಟ್ ಸಿಕ್ಕಿತು. ಈಗ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ತುಣುಕು ಮತ್ತು ಈ ಪೋಸ್ಟ್‌ನಲ್ಲಿರುವ ತುಣುಕು ಒಂದೇ ಆಗಿತ್ತು. ವಿಜಯನ್ ಖಾತೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಅವರು ಎಐ ನಿರ್ಮಿತ ವಿಡಿಯೊಗಳನ್ನು ಹಂಚಿಕೊಳ್ಳುತ್ತಿರುವುದು ಗಮನಕ್ಕೆ ಬಂತು. ಅವರು ತಮ್ಮ ಪ್ರೊಫೈಲ್ ವಿವರದಲ್ಲಿ ‘ಎಐ ವಿಡಿಯೊ ಜನರೇಟರ್’ ಎಂದೇ ಬರೆದುಕೊಂಡಿದ್ದಾರೆ. ಇದರ ಆಧಾರದಲ್ಲಿ ವಿಡಿಯೊ ತುಣುಕನ್ನು ಝೂಕ್ ಎಐ ಪತ್ತೆ ಟೂಲ್ ಮೂಲಕ ಪರಿಶೀಲನೆ ನಡೆಸಿದಾಗ ವಿಡಿಯೊದ ಶೇ 99ರಷ್ಟು ಭಾಗವು ಎಐ ತಂತ್ರಜ್ಞಾನದಲ್ಲಿ ಸೃಷ್ಟಿಸಿರುವುದು ದೃಢಪಟ್ಟಿತು. ಪ್ರಣವ್ ವಿಜಯನ್ ಅವರನ್ನು ಸಂಪರ್ಕಿಸಿ ಈ ಬಗ್ಗೆ ವಿಚಾರಿಸಿದಾಗ, ಅದು ಎಐ ವಿಡಿಯೊ ಎಂಬುದನ್ನು ದೃಢಪಡಿಸಿದರು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ದೂರುವುದರಿಂದ ಪ್ರಯೋಜನವಿಲ್ಲ



ದೀಪಾ ಹಿರೇಗುತ್ತಿ

ಒಂದೂರಿನಲ್ಲಿ ಒಂದು ಬಹಳ ಹಳೆಯ ಆಲದ ಮರವಿತ್ತು. ನದಿ ದಡದಲ್ಲಿರುವ ಆ ಮರ ಬೃಹದಾಕಾರವಾಗಿತ್ತು. ದಪ್ಪ ದಪ್ಪ ಬಿಳಲುಗಳು ನೆಲ ಮುಟ್ಟುವಂತೆ ಇಳಿಬಿದ್ದಿದ್ದವು. ದೊಡ್ಡ ದೊಡ್ಡ ರೆಂಬೆ ಕೊಂಬೆಗಳಲ್ಲಿ ವಿಧವಿಧದ ಹಕ್ಕಿಗಳು, ಅಳಿಲುಗಳು ಗೂಡು ಕಟ್ಟಿಕೊಂಡಿದ್ದವು. ಊರಿನ ಜನರಿಗೆ ಆ ಮರವೆಂದರೆ ಊರಿನ ಅಸ್ಮಿತೆಯಂತೆ. ಯಾರಾದರೂ ಸ್ನೇಹಿತರು, ನೆಂಟರು ಬಂದರೆ ಆಲದಮರವನ್ನು ತೋರಿಸಲು ಕರೆದುಕೊಂಡು ಬರುತ್ತಿದ್ದರು.

ಆ ಊರಿನ ಮಕ್ಕಳಂತೂ ರಜೆ ಸಿಕ್ಕರೆ ಸಾಕು ಮರದಡಿ ಬೀಡು ಬಿಡುತ್ತಿದ್ದರು. ಅವರಲ್ಲೊಬ್ಬಳು ಹುಡುಗಿಯ ಹೆಸರು ಮೇಘಾ. ಆಕೆ ಜಾಣೆ ಮತ್ತು ಎಲ್ಲದರಲ್ಲೂ ಆಸಕ್ತಿ ಹೊಂದಿರುವ ಉತ್ಸಾಹಿ ಹುಡುಗಿ. ಆದರೆ ಅವಳ ಒಂದು ಸಮಸ್ಯೆ ಎಂದರೆ ಯಾವಾಗಲೂ ಬೇರೆಯವರನ್ನು ದೂರುವುದು. ಅವಳ ಸ್ನೇಹಿತೆಗೆ ಜಾಸ್ತಿ ಅಂಕ ಬಂದರೆ, ಮನೆಯಲ್ಲಿ ಹಣ್ಣಿನಲ್ಲೋ ಸಿಹಿಯಲ್ಲೋ ತಮ್ಮನಿಗೆ ದೊಡ್ಡ ಪಾಲು ಸಿಕ್ಕಿಬಿಟ್ಟರೆ ಎಲ್ಲದರಲ್ಲೂ ಅವಳ ದೂರು ಇದ್ದೇ ಇರುತ್ತಿತ್ತು. ಆಟ ಆಡುವಾಗಲೂ ಸಣ್ಣ ಸಣ್ಣ ಕಾರಣಗಳಿಗೆ ಇದು ಸರಿಯಿಲ್ಲ, ಅದು ಸರಿಯಿಲ್ಲ ಎಂದು ಗೊಣಗುತ್ತಿದ್ದಳು.

ಒಂದು ದಿನ ಸಂಜೆ ಮುಖ ಊದಿಸಿಕೊಂಡು ಆಲದ ಮರದ ಕೆಳಗೆ ಬಂದು ಕುಳಿತಳು ಮೇಘಾ. ಶಾಲೆಯಲ್ಲಿ ನಡೆದ ಓಟದ ಸ್ಪರ್ಧೆಯಲ್ಲಿ ಅವಳು ಮೂರನೇ ಸ್ಥಾನ ಪಡೆದಿದ್ದಳು. ತನ್ನಷ್ಟಕ್ಕೆ ತಾನು ಬಿಕ್ಕುತ್ತ, ‘ಬದುಕಿನಲ್ಲಿ ಯಾವುದೂ ಸರಿ ಇಲ್ಲ, ನಾನು ಅಂದುಕೊಂಡ ಹಾಗೆ ಯಾವುದೂ ಆಗುತ್ತಾ ಇಲ್ಲ’ ಎಂದು ಹೇಳಿಕೊಳ್ಳುತ್ತಿದ್ದಳು.

‘ಎಲ್ಲ ನೀನಂದುಕೊಂಡ ಹಾಗೆಯೇ ಆಗಬೇಕಾ ಮರೀ’ ಎಂಬ ಒಂದು ಮೃದುವಾದ ಧ್ವನಿ ಕೇಳಿ ತಿರುಗಿದರೆ ಅಲ್ಲಿ ಯಾರೂ ಇಲ್ಲ. ಕೊಂಚ ಭಯದಿಂದ ‘ಯಾರದು, ಯಾರು ಮಾತಾಡ್ತಾ ಇರೋದು’ ಅಂದಳು ಮೇಘಾ. ‘ನಾನು ನೀನು ಕುಳಿತಿರುವ ಆಲದ ಮರ. ನಾನು ಅನೇಕ ಪೀಳಿಗೆಗಳನ್ನು ನೋಡಿದ್ದೇನೆ, ನಿನಗೊಂದು ಗುಟ್ಟು ಹೇಳುತ್ತೇನೆ, ನಿಂತುಕೋ’ ಅಂದಿತು.

ಮೇಘಾ ಕಣ್ಣೊರೆಸಿಕೊಂಡು ಎದ್ದು ನಿಂತಳು. ‘ನನ್ನ ಬೇರುಗಳನ್ನು ನೋಡು, ಕೆಲವು ನೇರವಾಗಿವೆ. ಮತ್ತೆ ಕೆಲವು ಸುರುಳಿಯಾಗಿವೆ. ಒಮ್ಮೊಮ್ಮೆ ಮಳೆ ಬರದೇ ನನಗೆ ನೀರೇ ಸಿಗುವುದಿಲ್ಲ, ಹತ್ತಿರದಲ್ಲಿ ನದಿ ಇದ್ದರೂ ನಾನು ಬಾಯಾರಿರುತ್ತೇನೆ. ಆದರೂ ನಾನು, ನನಗೆ ಯಾರೂ ನೀರು ತಂದುಕೊಡಲಿಲ್ಲ ಎಂದು ದೂರುವುದಿಲ್ಲ, ಹಾಗಂತ ನಾನು ಬೆಳೆಯುವುದನ್ನು ನಿಲ್ಲಿಸುವುದಿಲ್ಲ, ನನ್ನ ಪಾಡಿಗೆ ನಾನು ಬೆಳೆಯುತ್ತಲೇ ಇದ್ದೇನೆ. ಒಂದು ವೇಳೆ ನಾನು ಬಿಸಿಲು, ಮಳೆ, ಗಾಳಿಯ ಬಗ್ಗೆ ದೂರುತ್ತಲೇ ಉಳಿದಿದ್ದರೆ ನಾನು ಇಷ್ಟು ಬಲಿಷ್ಠವಾಗುತ್ತಿದ್ದೆನೇ? ದೂರುವುದರಿಂದ ಬದುಕಿನಲ್ಲಿ ಸರಿ ಇಲ್ಲದಿರುವ ಸಂಗತಿಗಳು ಸರಿಯಾಗಿ ಬಿಡುವುದಿಲ್ಲ. ದೂರನ್ನು ಬದಿಗಿರಿಸಿ ನಮ್ಮನ್ನು ನಾವು ಸದೃಢವಾಗಿಸಿಕೊಂಡಾಗ ಜೀವನದಲ್ಲಿ ನಾವು ಬಯಸಿದ್ದು ನಡೆಯುತ್ತದೆ’ ಎಂದು ಹೇಳಿತು ಆಲದ ಮರ. ಮೇಘಾಳಿಗೆ ಮರ ಹೇಳುತ್ತಿರುವುದು ಅರ್ಥವಾಯಿತು. ಅವಳ ಮನಸ್ಸೀಗ ಹಗುರವಾಗಿತ್ತು. ಅವತ್ತಿನಿಂದ ಮೇಘಾ ಬದಲಾದಳು. ಸೋತಾಗ ದೂರುವ ಬದಲು ಜಾಸ್ತಿ ಪ್ರಯತ್ನ ಪಟ್ಟಳು, ಬೇರೆಯವರು ಗೆದ್ದಾಗ ಚಪ್ಪಾಳೆ ತಟ್ಟಿ ಅಭಿನಂದಿಸಿದಳು.

ದೂರುವುದರಿಂದ ಯಾವ ಬದಲಾವಣೆಯೂ ಆಗುವುದಿಲ್ಲ. ನೋಡನೋಡುತ್ತಿದ್ದಂತೆಯೇ ಸಮಯ ಸರಿದು ಹೋಗುತ್ತದೆ. ಕೊನೆಯಲ್ಲಿ ಪಶ್ಚಾತ್ತಾಪ ಮಾತ್ರ ಉಳಿದುಕೊಳ್ಳುತ್ತದೆ. ವಾಸ್ತವವನ್ನು ಒಪ್ಪಿಕೊಂಡು ಧೈರ್ಯದಿಂದ ಪ್ರಯತ್ನಶೀಲರಾಗುವುದರಲ್ಲಿಯೇ ಬದುಕಿನ ಅರ್ಥ ಅಡಗಿದೆ.

ಪದಬಂಧ 6206

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ದೇವಾಲಯ ಇಲ್ಲಿದೆ (2)
3.ಒಪ್ಪವಾಗಿ ಮೂಡಿರುವ ಪ್ರೀತಿ (4)
5.ಈತ ಲಂಕಾಧಿಪತಿ (3)
6.ತಾಯಿಯ ಮನೆ ಕಿಟಕಿ (4)
8.ಗುಡಿಸಲ ಹತ್ತಿರವಿರುವ ಜಲಪಾತ (4)
12.ಮಂದಿಯ ಒಳಿತು (4)
14.ಇದು ಬೇರೆಯವರ ದುಡ್ಡು (4)
15.ನಗರದಲ್ಲಿ ಕೇಳಿಸಿದ ಚರ್ಮವಾದ್ಯ (3)
16.ಹಣ್ಣಿನಿಂದ ಮಾಡಿರುವ ಖಾದ್ಯ (4)
17.ಹುಲ್ಲು ಮೊದಲಾದವುಗಳ ಕಟ್ಟು (2)

ಮೇಲಿಂದ ಕೆಳಕ್ಕೆ
1.ಬೇರೆಯವರನ್ನು ಆಶ್ರಯಿಸಿರುವವನು (5)
2.ಒಳ್ಳೆಯ ಸ್ವಭಾವದವನು (4)
3.ತೊಂದರೆಯ ನಿವಾರಣೆಗಾಗಿ ಮಾಡುವ ಪ್ರಾರ್ಥನೆ (4)
4.ಗಮನವಿಡಿ! ಇದು ಸುಲಭವಲ್ಲದುದು! (3)
7.ದೇವತೆಗಳಲ್ಲಿ ಒಂದು ವರ್ಗ (2)
9.ದನವಿರುವ ಆಲಯ! (3)
10.ಅಧಿಕವಾದ ಬಡತನ (5)
11.ತಲೆಕೂದಲನ್ನು ತೆಗೆಯುವುದು (2)
12.ಮಂದಿಯ ಮನಸ್ಸು (4)
13.ಮಗ್ನತೆಯನ್ನು ಹೀಗೆನ್ನಿ (4)
14.ಕೊನೆಗೆ ಬೆಲೆಯಿದ್ದರೆ ಮಡಿಕೆ ಕಂಡೀತು! (3)



6205ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 2.ವಾಗ್ದಾನ 4.ಪ್ಲುತ 6.ಪರಿಣಯ 7.ಸಕಾಲಿಕ 10.ವದಂತಿ 11.ಸಮೂಹಗಾನ 12.ಪ್ರಮಾದ 14.ರಗಾಣಹ 17.ವರ್ಧಮಾನ 18.ಲಕ್ಷ 19.ಲಶುನ

ಮೇಲಿಂದ ಕೆಳಕ್ಕೆ: 1.ಅಪರೂಪ 2.ವಾಯಸ 3.ನಕಲಿ 5.ತರಗತಿ 8.ಕಾಲಹರಣ 9.ಕವನ 11.ಸದರ 12.ಪ್ರತಿಫಲ 13.ನಸುನಗು 15.ಗಾವಿಲ 16.ಹವನ

ಸುಡೊಕು 6590

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

3		1		7		6		2
		5	2		9			
2	8			1			9	
	5		7		4	8		
				8		5		9
8	3	6						4
6				5		9		7
	7	8	1	3				
5		3		6		1		8

6589 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

28 ಅಕ್ಟೋಬರ್ 2025 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಷಷ್ಠಿ ಗಂ. 8-00 **ನಕ್ಷತ್ರ:** ಪೂರ್ವಾಷಾಢ ಗಂ 15-45 **ಯೋಗ:** ಸುಕರ್ಮ ಗಂ 7-51 **ಕರಣ:** ತೈತಿಲ ಗಂ.8-00 ತುಲಾ ಮಾಸದ 11 ನೇ ದಿನ. **ಮಳೆ ನಕ್ಷತ್ರ :** ಸ್ವಾತಿ 2 ನೇ ಪಾದ. **ರಾಹುಕಾಲ :** ಮಧ್ಯಾಹ್ನ 03-00 - 04-30 , **ಸೂರ್ಯೋದಯ :** 06-27 **ಸೂರ್ಯಾಸ್ತ :** 06-01, **ಮುಸ್ಲಿಂ ದಿನಾಂಕ :** 05 ಜುಮಾದುಲ್ಲಾವಲ್, **ಅದೃಷ್ಟ ಸಂಖ್ಯೆ :** 7, 11

ಮೇಷ: ಕೊನೆ ಕ್ಷಣದವರೆಗೂ ಜೊತೆಯನ್ನು ಕೊಡುವಂಥ ಸ್ನೇಹಿತರನ್ನು ಸಂಪಾದನೆ ಮಾಡುವಿರಿ. ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆಗಳು ವ್ಯವಸ್ಥಾಪಕರಿಂದ ಈಡೇರಲಿವೆ. ಹಿತವಾದ ಆಹಾರ ಸೇವಿಸಿರಿ.

ವೃಷಭ: ಸ್ವಚ್ಛಂದವಾಗಿ ಯೌವನವನ್ನು ಅನುಭವಿಸುತ್ತಿರುವ ನಿಮಗೆ ಮದುವೆ ಎನ್ನುವ ಹೆಚ್ಚುವರಿ ಜವಾಬ್ದಾರಿಯನ್ನು ಹೊರೆಸಲು ಪರಿವಾರದವರೆಲ್ಲರೂ ಕಾತರರಾಗುವರು. ಕೆಲವು ಪ್ರಶ್ನೆಗಳಿಗೆ ಉತ್ತರ ಸಿಗದಂತೆ ಆಗಲಿದೆ.

ಮಿಥುನ: ಆತ್ಮಗೌರವಕ್ಕೆ ಹೆಚ್ಚು ಪ್ರಾಶಸ್ತ್ಯ ನೀಡುವ ನಿಮಗೆ ಅಹಿತಕರ ಘಟನೆ ಮರೆಯಲು ಹೆಚ್ಚಿನ ಸಮಯ ಬೇಕಾಗುವುದು. ಭೂಸಂಬಂಧಿ ವ್ಯವಹಾರದಲ್ಲಿರುವವರಿಗೆ ಧನಲಾಭ. ಸಾಲ ತೀರಿಸುವ ಬಗ್ಗೆ ಯೋಚಿಸಿ.

ಕರ್ಕಾಟಕ: ಸಹಾಯ ಗುಣ ಹೊಂದಿರುವ ಕಾರಣದಿಂದ ಸಹಪಾಠಿಗಳೊಂದಿಗಿನ ಬಾಂಧವ್ಯ ಉತ್ತಮಗೊಳ್ಳುವುದು. ಮನುಷ್ಯ ಪ್ರಯತ್ನದ ಜತೆ ಆಂಜನೇಯನ ಮೊರೆ ಹೋಗುವುದರಿಂದ ಕಾರ್ಯಸಿದ್ಧಿ.

ಸಿಂಹ: ಸಂಪರ್ಕ ಸಾಧನದಂತಹ ಉದ್ಯೋಗದಲ್ಲಿ ನಿರತರಾದ ವ್ಯಕ್ತಿಗಳಿಗೆ ಸನ್ಮಾನ ಅಥವಾ ವಿಶೇಷ ಗೌರವಗಳು ಲಭಿಸಲಿವೆ. ಕೆಲಸ ಕಾರ್ಯಗಳಲ್ಲಿ ಉತ್ಸಾಹವನ್ನು ಕಾಣುವಿರಿ. ಅಸಮರ್ಪಕ ನಿರ್ಧಾರಗಳನ್ನು ಕೈಗೊಳ್ಳದಿರಿ.

ಕನ್ಯಾ: ಕಾರ್ಯಸಾಧನೆಗೆ ಪ್ರಯತ್ನದ ಹೊರತಾಗಿ ದೈವಬಲ ಇರಬೇಕಾಗುತ್ತದೆ ಎಂದು ಅರಿತುಕೊಂಡು ಅದಕ್ಕೆ ಬೇಕಾದ ವ್ಯವಸ್ಥೆ ಮಾಡಿ. ವದಂತಿಗಳಿಗೆ ಬೆಲೆಕೊಟ್ಟು ತೀರ್ಮಾನಕ್ಕೆ ಬರುವುದು ಸರಿಯಲ್ಲ.

ತುಲಾ: ಮನೆಗೆ ಹೊಂದಿಕೊಂಡಂತೆ ಇರುವಂತಹ ದೇವಾಲಯದ ಜೀರ್ಣೋದ್ಧಾರ ಮಾಡುವ ಮಾತುಕತೆ ಆಗಬಹುದು. ಹವಾನಿಯಂತ್ರಣದ ವಾತಾವರಣವು ಸರಿಹೋಗದೆ ಇರಬಹುದು. ಅಲರ್ಜಿ ಉಂಟಾಗಬಹುದು.

ವೃಶ್ಚಿಕ: ಮನೆಯಲ್ಲಿ ನಿಮ್ಮ ಶಕ್ತಿಗೂ ಮೀರಿ ನೀವು ಜವಾಬ್ದಾರಿಗಳನ್ನು ತೆಗೆದುಕೊಳ್ಳುತ್ತಿದ್ದರೂ ಇತರರು ಲಘುವಾಗಿ ಮಾತನಾಡಿದಾಗ ಕೋಪ ಬಂದರೂ ಸುಮ್ಮನಿರಬೇಕಾದ ಪರಿಸ್ಥಿತಿ ನಿಮ್ಮನ್ನು ಹೈರಾಣಾಗಿಸುತ್ತದೆ.


ಧನು: ತಂತ್ರಜ್ಞಾನದಲ್ಲಿ ಅನುಭವವು ಹೊಸ ಕಾರ್ಯಕ್ಷೇತ್ರದಲ್ಲಿ ಕಡಿಮೆ ಎಂದು ಅನ್ನಿಸುವುದು. ಸುಮುಹೂರ್ತದಲ್ಲಿ ನಡೆದ ಒಳ್ಳೆಯ ಕಾರ್ಯಕ್ರಮ ಉತ್ತಮ ಫಲ ನೀಡುವುದರಲ್ಲಿ ಸಂಶಯವಿಲ್ಲ.

ಮಕರ: ಸಮಸ್ಯೆ ಬಗೆಹರಿಸಲು ಜಾಣತನ, ಬುದ್ಧಿವಂತಿಕೆ ಬಳಸಿಕೊಳ್ಳಿ. ನಿತ್ಯದ ಕೆಲಸಗಳಲ್ಲಿ ಬದಲಾವಣೆ ಇರುವುದಿಲ್ಲ. ಖುಷಿ ಕೊಡುವ ಹವ್ಯಾಸದ ಕೆಲಸಗಳನ್ನು ಎಷ್ಟೇ ಬಿಡುವಿಲ್ಲದ ದಿನವಾಗಿದ್ದರೂ ಮಾಡುವಿರಿ.


ಕುಂಭ: ಸಹಜೀವನದಲ್ಲಿ ದೊರೆಯುವ ಸಹಕಾರ ಹಾಗೂ ಖುಷಿಯನ್ನು ಒಬ್ಬಂಟಿಯಾಗಿ ಜೀವಿಸುತ್ತಿರುವ ಬಹಳವಾಗಿ ನೆನೆಸಿಕೊಳ್ಳುವಿರಿ. ಉದ್ಯೋಗದಲ್ಲಿ ಕಂಡುಬಂದ ತಾಂತ್ರಿಕ ಸಮಸ್ಯೆ ನಿವಾರಣೆಯಾಗುವುದು.

ಮೀನ: ಕೂದಲೆಳೆಯಷ್ಟು ತಪ್ಪುಗಳನ್ನು ಮಾಡಿದ್ದಕ್ಕೆ ಆತಂಕಕ್ಕೆ ಒಳಗಾಗುವ ಪರಿಸ್ಥಿತಿ ಎದುರಾಗಬಹುದು. ವೈಯಕ್ತಿಕ ತೃಪ್ತಿ ಧ್ಯೇಯೋದ್ದೇಶ ತಿಳಿದು ಸಮಾಜಮುಖಿ ಆಗಬೇಕಾಗುತ್ತದೆ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,795
ಇಂದಿನ ಅಂತ್ಯ:	25,966
ದಿನದ ಗರಿಷ್ಠ:	26,005
	▲ 170

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	100 ಕ್ಕೆ	₹590
	12 ಕ್ಕೆ	₹80
ಮೈಸೂರು:	100 ಕ್ಕೆ	₹590

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹185
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹167

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1410 (1405)
ಸೋಯಾ (ರಿಫೈನ್ಡ್)	₹1285 (1280)
ಸೂರ್ಯಕಾಂತಿ (ರಿಫೈನ್ಡ್)	₹1480 (1475)
ಪಾಮೋಲಿನ್	₹1285 (1280)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹30500
ಎಸಿ	₹15680
ಆರ್‌ಪಿ	₹19500
ಆರ್‌ಸಿ	₹11050

ಚಿಟಿಕೆ ಸುದ್ದಿ

ಸೇವಾ ಲಭ್ಯತೆ ವಿಸ್ತರಿಸಿದ ಓಲಾ

ಬೆಂಗಳೂರು/ನವದೆಹಲಿ: ವಿದ್ಯುತ್ ಚಾಲಿತ ದ್ವಿಚಕ್ರ ವಾಹನ ತಯಾರಿಕಾ ಕಂಪನಿ ಓಲಾ ಎಲೆಕ್ಟ್ರಿಕ್, ತನ್ನ ಸೇವಾ ಜಾಲವನ್ನು ವಿಸ್ತರಿಸಲು ಮುಂದಾಗಿದೆ.

ಓಲಾ ಕಂಪನಿಯು ತನ್ನ ವಾಹನಗಳ ಬಿಡಿಭಾಗಗಳು, ಉಪಕರಣಗಳನ್ನು ತನ್ನ ಗ್ರಾಹಕರಿಗೆ ಮಾತ್ರವಲ್ಲದೆ, ಸ್ವತಂತ್ರವಾಗಿ ಗ್ಯಾರೇಜ್ ನಡೆಸುತ್ತಿರುವವರಿಗೆ, ಮೆಕ್ಯಾನಿಕ್‌ಗಳಿಗೆ ಕೂಡ ನೀಡುವುದಾಗಿ ಸೋಮವಾರ ತಿಳಿಸಿದೆ.

ಜೊತೆಗೆ, ವಾಹನಗಳ ದುರಸ್ತಿಗೆ ಸಂಬಂಧಿಸಿದ ಮಾಹಿತಿಯು ಗ್ಯಾರೇಜ್ ಮಾಲೀಕರು ಮತ್ತು ಮೆಕ್ಯಾನಿಕ್‌ಗಳಿಗೆ ಕೂಡ ಲಭ್ಯವಾಗುವಂತೆ ಮಾಡಲಾಗುವುದು ಎಂದು ತಿಳಿಸಿದೆ.

‘ಇಂದಿನಿಂದ ಓಲಾ ಎಲೆಕ್ಟ್ರಿಕ್‌ನ ಬಿಡಿಭಾಗಗಳನ್ನು ಓಲಾ ಎಲೆಕ್ಟ್ರಿಕ್‌ನ ಗ್ರಾಹಕರ ಆ್ಯಪ್ ಮತ್ತು ವೆಬ್‌ಸೈಟ್ ಮೂಲಕ ಖರೀದಿಸಬಹುದು. ಪ್ರತಿ ಗ್ರಾಹಕ ಮತ್ತು ಗ್ಯಾರೇಜ್‌ಗಳು ಉನ್ನತ ಗುಣಮಟ್ಟದ, ಪ್ರಮಾಣೀಕೃತ ಬಿಡಿಭಾಗಗಳನ್ನು ಮಧ್ಯವರ್ತಿಗಳು ಇಲ್ಲದೇ ಖರೀದಿಸಬಹುದು’ ಎಂದು ಕಂಪನಿಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಭವೀಶ್ ಅಗರ್ವಾಲ್ ಹೇಳಿದ್ದಾರೆ.

ಅಮೆರಿಕದಿಂದ ತೈಲ ಖರೀದಿ ಹೆಚ್ಚಳ

ಆಮದು ಪ್ರಮಾಣ ದಿನವೊಂದಕ್ಕೆ 5.40 ಲಕ್ಷ ಬ್ಯಾರಲ್‌ಗೆ ಏರಿಕೆ



ನವದೆಹಲಿ (ಪಿಟಿಐ): ಭಾರತವು ಅಮೆರಿಕದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಅಕ್ಟೋಬರ್‌ನಲ್ಲಿ ಹೆಚ್ಚಳ ಕಂಡಿದೆ. ಇದು 2022ರ ನಂತರದ ಗರಿಷ್ಠ ಮಟ್ಟ.

ಕಚ್ಚಾ ತೈಲದ ಆಮದು ಪ್ರಮಾಣವನ್ನು ರಷ್ಯಾ ಹೊರಗೂ ಹೆಚ್ಚಿಸಿಕೊಳ್ಳುವ, ಅಮೆರಿಕದ ಜೊತೆ ವ್ಯಾಪಾರ ವಹಿವಾಟುಗಳಿಗೆ ಸಂಬಂಧಿಸಿದಂತೆ ಮೂಡಿರುವ ಬಿಕ್ಕಟ್ಟನ್ನು ಸುಧಾರಿಸುವ ಪ್ರಯತ್ನದ ಭಾಗವಾಗಿ ಭಾರತವು ಈ ಹೆಜ್ಜೆ ಇರಿಸಿದೆ ಎನ್ನಲಾಗಿದೆ.

ಸೋಮವಾರದ (ಅಕ್ಟೋಬರ್ 27) ಹೊತ್ತಿಗೆ ಭಾರತವು ಅಮೆರಿಕದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ದಿನವೊಂದಕ್ಕೆ 5.40 ಲಕ್ಷ ಬ್ಯಾರಲ್‌ಗೆ ತಲುಪಿದೆ ಎಂದು ದತ್ತಾಂಶಗಳ ಮೇಲೆ ಗಮನ ಇರಿಸುವ ಕೆಪ್ಲರ್ ಸಂಸ್ಥೆ ಹೇಳಿದೆ.

ಅಕ್ಟೋಬರ್ ಅಂತ್ಯದ ಹೊತ್ತಿಗೆ ಆಮದು ಪ್ರಮಾಣವು ದಿನವೊಂದಕ್ಕೆ 5.75 ಲಕ್ಷ ಬ್ಯಾರಲ್‌ಗೆ ತಲುಪಬಹುದು. ನವೆಂಬರ್‌ನಲ್ಲಿ ಆಮದು ಪ್ರಮಾಣವು ದಿನವೊಂದಕ್ಕೆ 4 ಲಕ್ಷದಿಂದ 4.5 ಲಕ್ಷ ಬ್ಯಾರಲ್‌ವರೆಗೆ ಇರಬಹುದು ಎಂದು ಅಂದಾಜು ಮಾಡಲಾಗಿದೆ. ಈ ವರ್ಷದಲ್ಲಿ ಇದುವರೆಗೆ ಅಮೆರಿಕದಿಂದ ಆಮದು ಮಾಡಿಕೊಳ್ಳುತ್ತಿದ್ದ ಕಚ್ಚಾ ತೈಲದ ಸರಾಸರಿ ಪ್ರಮಾಣಕ್ಕೆ (ದಿನವೊಂದಕ್ಕೆ 3 ಲಕ್ಷ ಬ್ಯಾರಲ್) ಹೋಲಿಸಿದರೆ ಇದು ಹೆಚ್ಚು.

ಹಣಕಾಸಿನ ಲೆಕ್ಕಾಚಾರ ಆಧರಿಸಿ ಅಮೆರಿಕದಿಂದ ಆಮದು ಪ್ರಮಾಣ ಹೆಚ್ಚಿಸಲಾಗಿದೆ. ಬ್ರೆಂಟ್ ಕಚ್ಚಾ ತೈಲಕ್ಕಿಂತ ಡಬ್ಲ್ಯುಟಿಐ ಮಿಡ್‌ಲ್ಯಾಂಡ್ ಕಚ್ಚಾ ತೈಲವು ಭಾರತದ ಕಚ್ಚಾ ತೈಲ ಸಂಸ್ಕರಣಾ ಕಂಪನಿಗಳಿಗೆ ಕಡಿಮೆ ದರಕ್ಕೆ ಸಿಕ್ಕಿದೆ ಎಂದು ಕೆಪ್ಲರ್ ಸಂಸ್ಥೆಯ ಸಂಶೋಧನಾ ವಿಶ್ಲೇಷಕ ಸುಮಿತ್ ರಿತೋಲಿಯಾ ಹೇಳಿದ್ದಾರೆ.

ಅಮೆರಿಕದಿಂದ ಆಮದು ಹೆಚ್ಚಾಗಿದ್ದರೂ, ಭಾರತಕ್ಕೆ ಕಚ್ಚಾ ತೈಲ ಪೂರೈಸುವ ದೇಶಗಳ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಈಗಲೂ ರಷ್ಯಾ ಇದೆ. ಎರಡನೆಯ ಸ್ಥಾನದಲ್ಲಿ ಇರಾಕ್ ಹಾಗೂ ಮೂರನೆಯ ಸ್ಥಾನದಲ್ಲಿ ಸೌದಿ ಅರೇಬಿಯಾ ಇದೆ.

ಭಾರತದ ಕಚ್ಚಾ ತೈಲ ಸಂಸ್ಕರಣಾ ಕಂಪನಿಗಳು ಅಮೆರಿಕದ ಕಚ್ಚಾ ತೈಲವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಲು ಮುಂದಾಗಿವೆ. ತಮ್ಮ ಪೂರೈಕೆ ಜಾಲವನ್ನು ವಿಸ್ತರಿಸಿಕೊಳ್ಳುವ ಜೊತೆಗೆ, ಅಮೆರಿಕದ ಜೊತೆ ಸಹಕರಿಸಲು ಸಿದ್ಧ ಎಂಬ ಸಂದೇಶ ರವಾನಿಸುವ ಉದ್ದೇಶವೂ ಇದರ ಹಿಂದಿದೆ ಎಂದು ಸರ್ಕಾರ ಹಾಗೂ ವರ್ತಕರ ವಲಯದ ಮೂಲಗಳು ಹೇಳಿವೆ.

ಆದರೆ ಅಮೆರಿಕದಿಂದ ಕಚ್ಚಾ ತೈಲ ಆಮದು ಇನ್ನೂ ಹೆಚ್ಚಾಗುವ ಸಾಧ್ಯತೆ ಕಡಿಮೆ ಎಂದು ರಿತೊಲಿಯಾ ಅಭಿಪ್ರಾಯಪಟ್ಟಿದ್ದಾರೆ. ‘ಈಗ ಭಾರತವು ಅಮೆರಿಕದಿಂದ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸಿರುವುದಕ್ಕೆ ಒಂದು ಕಾರಣ ಒಳ್ಳೆಯ ಬೆಲೆಗೆ ಅದು ಸಿಕ್ಕಿರುವುದು. ಅಲ್ಲಿಂದ ಭಾರತಕ್ಕೆ ಕಚ್ಚಾ ತೈಲ ತರಲು ಹೆಚ್ಚಿನ ಸಮಯ ಬೇಕು, ಸಾಗಣೆ ವೆಚ್ಚ ಹೆಚ್ಚಾಗಿರುತ್ತದೆ. ಹೀಗಾಗಿ ಅಲ್ಲಿಂದ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿ ಆಗಲಿಕ್ಕಿಲ್ಲ’ ಎಂದು ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ವಾರ್ಷಿಕ ಸರಾಸರಿ ಖರೀದಿಗಿಂತ ಅಕ್ಟೋಬರ್‌ನಲ್ಲಿ ಜಾಸ್ತಿ
- ಮುಂದಿನ ದಿನಗಳಲ್ಲಿ ಖರೀದಿಯು ಇನ್ನಷ್ಟು ಹೆಚ್ಚುವ ಸಾಧ್ಯತೆ ಅಲ್ಪ

ಐಒಸಿ ಲಾಭ ಹಲವು ಪಟ್ಟು ಏರಿಕೆ

ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೊರೇಷನ್‌ನ (ಐಒಸಿ) ಸೆಪ್ಟೆಂಬರ್ ತ್ರೈಮಾಸಿಕದ ಲಾಭವು ಹಲವು ಪಟ್ಟು ಹೆಚ್ಚಾಗಿ ₹7,610 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯ ಲಾಭವು ₹180 ಕೋಟಿ ಆಗಿತ್ತು.

ಈ ತ್ರೈಮಾಸಿಕದಲ್ಲಿ ಕಂಪನಿಯ ಇಂಧನ ಮಾರಾಟ ಪ್ರಮಾಣ ಶೇ 6ರಷ್ಟು ಹೆಚ್ಚಾಗಿದೆ. ಕಚ್ಚಾ ತೈಲ ಸಂಸ್ಕರಣೆಯ ಪ್ರಮಾಣವು ಶೇ 5ರಷ್ಟು ಹೆಚ್ಚಾಗಿದೆ.

ನಿರ್ಬಂಧ ಪಾಲನೆ: ‘ಎಲ್ಲ ಬಗೆಯ ನಿರ್ಬಂಧಗಳನ್ನು ಪಾಲಿಸಲಾಗುವುದು’ ಎಂದು ಐಒಸಿ ಅಧ್ಯಕ್ಷ ಅರವಿಂದರ್ ಸಿಂಗ್ ಸಾಹ್ನಿ ಹೇಳಿದ್ದಾರೆ. ಆದರೆ, ರಷ್ಯಾದಿಂದ ಕಚ್ಚಾ ತೈಲ ಆಮದು ಮಾಡಿಕೊಳ್ಳುವುದರ ಕುರಿತ ಪ್ರಶ್ನೆಗೆ ಅವರು ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದಾರೆ.

ಐಒಸಿ ದೇಶದ ಅತಿದೊಡ್ಡ ತೈಲ ಕಂಪನಿ. ಏಪ್ರಿಲ್–ಸೆಪ್ಟೆಂಬರ್ ಅವಧಿಯಲ್ಲಿ ಐಒಸಿ ಆಮದು ಮಾಡಿಕೊಂಡ ಕಚ್ಚಾ ತೈಲದಲ್ಲಿ ರಷ್ಯಾದಿಂದ ಬಂದ ಕಚ್ಚಾ ತೈಲದ ಪಾಲು ಶೇ 21ರಷ್ಟಿದೆ.

ಭಾರತದ ಕಚ್ಚಾ ತೈಲ ಸಂಸ್ಕರಣಾ ಕಂಪನಿಗಳು ಆಮದು ಮೂಲವನ್ನು ಹೆಚ್ಚಿಸಿಕೊಳ್ಳಲು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಆರಂಭಿಸಿವೆ. ಅವು ಕೊಲಂಬಿಯಾ, ಕೆನಡಾ ಮತ್ತು ಪಶ್ಚಿಮ ಏಷ್ಯಾದಿಂದ ಆಮದು ಮಾಡಿಕೊಳ್ಳುವುದನ್ನು ಹೆಚ್ಚಿಸಿವೆ.

ಭಾರತದ ಕಂಪನಿಗಳು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಪ್ರತಿದಿನ 16.8 ಲಕ್ಷ ಬ್ಯಾರಲ್ ಆಗಿತ್ತು. ಇದು ಜೂನ್ ತ್ರೈಮಾಸಿಕದ ಆಮದು ಪ್ರಮಾಣಕ್ಕೆ ಹೋಲಿಸಿದರೆ ಶೇ 13ರಷ್ಟು ಕಡಿಮೆ.

ವ್ಯಾಪಾರ ಚಟುವಟಿಕೆ ಮಂದಗತಿಗೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ಉದ್ಯಮ–ವ್ಯಾಪಾರ ಚಟುವಟಿಕೆ ಮಂದಗೊಂಡಿದೆ ಎಂದು ಎನ್‌ಸಿಎಇಆರ್ ಸಮೀಕ್ಷೆ ಸೋಮವಾರ ತಿಳಿಸಿದೆ.

ಅಮೆರಿಕದ ಹೆಚ್ಚುವರಿ ಸುಂಕ ಸೇರಿದಂತೆ ಜಾಗತಿಕ ಅನಿಶ್ಚಿತತೆಗಳು ಚಟುವಟಿಕೆ ಮಂದಗೊಳ್ಳಲು ಕಾರಣ ಎಂದು ರಾಷ್ಟ್ರೀಯ ಅನ್ವಯಿಕ ಆರ್ಥಿಕ ಸಂಶೋಧನಾ ಮಂಡಳಿ (ಎನ್‌ಸಿಎಇಆರ್) ತಿಳಿಸಿದೆ.


ಮುಂಬೈ ಧಾರಣೆ (ಶೇಂಗಾ)

27-10-2025

ಜಾವಾ 70/80(ಹೊಸ)	10400-10500
ಜಾವಾ 80/90(ಹೊಸ)	9700-9800
ದಪ್ಪ ಮಧ್ಯಪ್ರದೇಶ (ಹೊಸ)	7600-7700
ದಪ್ಪ ಗುಜರಾತ್ (ಹೊಸ)	8500-8600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1420 (1415)
ಒಂದು ವಾರದ ಡೆಲಿವರಿ	1415 (1410)
ಪಾಮ್ ವಾರದ ಡೆಲಿವರಿ	1283 (1278)
ಸೂರ್ಯಕಾಂತಿ ಎಣ್ಣೆ ಕಚ್ಚಾ	1430 (1425)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,20,800 (1,21,900)
ಬೆಳ್ಳಿ ಕೆ.ಜಿಗೆ	1,45,500 (1,48,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ನಿಧನ



ಶ್ರೀ ವಿ.ಎನ್. ರೆಡ್ಡಿ (103 ವರ್ಷ)

ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ವೆಂಕಟಾಪುರ, ಪಾವಗಡ ತಾ।।, ತುಮಕೂರು ಜಿಲ್ಲೆ.

ಶ್ರೀಯುತರು ದಿನಾಂಕ: 27.10.2025ರಂದು ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯು ಇಂದು ಮಂಗಳವಾರ (28.10.2025ರಂದು) ಬೆಳಿಗ್ಗೆ 9:30 ಗಂಟೆಗೆ ವೆಂಕಟಾಪುರ ಗ್ರಾಮದಲ್ಲಿ ನಡೆಯಲಿದೆ

ಇಂತಿ ದುಃಖತಪ್ತರು : ಕುಟುಂಬದವರು ಮತ್ತು ಬಂಧು–ಮಿತ್ರರು

ಅತಿವೃಷ್ಟಿ ಸಮಯದಲ್ಲೂ ಲಾಭ ಕಂಡುಕೊಂಡ ರೈತ

ಇರಾಕ್, ಇರಾನ್‌ಗೆ ಬಸರಕೋಡದ ಬಾಳೆ

• ಶಂಕರ ಈ. ಹೆಬ್ಬಾಳ



ಮುದ್ದೇಬಿಹಾಳ ತಾಲ್ಲೂಕು ಬಸರಕೋಡದ ರೈತ ಹೇಮರೆಡ್ಡಿ ಮೇಟಿ ಅವರ ತೋಟದಲ್ಲಿ ಬೆಳೆದಿರುವ ಬಾಳೆ ಗೊನೆಗಳನ್ನು ಇರಾಕ್, ಇರಾನ್ ದೇಶಕ್ಕೆ ರಫ್ತುಮಾಡಲು ಪ್ಯಾಕಿಂಗ್ ಮಾಡಲಾಯಿತು

ಮುದ್ದೇಬಿಹಾಳ (ವಿಜಯಪುರ ಜಿಲ್ಲೆ): ತಾಲ್ಲೂಕಿನ ಬಸರಕೋಡ ಗ್ರಾಮದ ರೈತ ಹೇಮರೆಡ್ಡಿ ಬ.ಮೇಟಿ ಅವರು ಬೆಳೆದ ಬಾಳೆ (ಜಿ- 9) ಬೆಳೆಗೆ ಹೊರದೇಶದಲ್ಲಿ ಮಾರುಕಟ್ಟೆ ಲಭಿಸಿದೆ.

ರೈತ ಹೇಮರೆಡ್ಡಿ ಬ.ಮೇಟಿ ಬಾಳೆಯನ್ನು ಇರಾಕ್, ಇರಾನ್ ದೇಶಗಳಿಗೆ ರಫ್ತು ಮಾಡಲು ಮುಂದಾಗಿದ್ದಾರೆ. 20 ಎಕರೆ ಜಮೀನಿನಲ್ಲಿ ಬೆಳೆದಿರುವ ಬಾಳೆ ಭಾಗಶಃ ಕಟಾವಿಗೆ ಬಂದಿದೆ. ಅವರ ಪುತ್ರ ಬಾಪುಗೌಡ ಮೇಟಿ ವಿದೇಶಿ ಮಾರುಕಟ್ಟೆಯ ಸಂಪರ್ಕ ಸಾಧಿಸಿದ್ದಾರೆ.

‘ಮಧ್ಯಪ್ರದೇಶ, ಗುಜರಾತ್‌ದಿಂದ ಸಸಿಗಳನ್ನು ತರಿಸಿಕೊಂಡಿದ್ದೆವು. ಸ್ಥಳೀಯ ಮಾರುಕಟ್ಟೆಯಲ್ಲಿ ಕೆ.ಜಿಗೆ ₹3ರಿಂದ ₹4ಕ್ಕೆ ಕೇಳುತ್ತಾರೆ. ಇಷ್ಟು ಕಡಿಮೆಗೆ ನೀಡಿದರೆ ನಷ್ಟ ಖಂಡಿತ. ಎಕರೆಗೆ ತಲಾ ₹1.15 ಲಕ್ಷದಂತೆ ಖರ್ಚು ಮಾಡಿದ್ದು, 20 ಎಕರೆಗೆ 1 ಸಾವಿರ ಟನ್ ಬಾಳೆ ಬರುವ ನಿರೀಕ್ಷೆ ಇದೆ’ ಎಂದು ಹೇಮರೆಡ್ಡಿ ಮೇಟಿ ತಿಳಿಸಿದರು.

‘ಅಂತರರಾಷ್ಟ್ರೀಯ ಮಾರುಕಟ್ಟೆಗೆ ಬೆಳೆ ತಲುಪಿಸಲು ಮೀರಜ್‌ನ ಚಾಂದ್ ಫ್ರೂಟ್ಸ್ ಅವರನ್ನು ಸಂಪರ್ಕಿಸಲಾಗಿತ್ತು. ಅವರು ಖರೀದಿಗೆ ಒಪ್ಪಿದರು. ಕಂಟೇನರ್‌ಗಳಲ್ಲಿ ಬಾಳೆ ಕಾಯಿಗಳನ್ನು ಸಂಗ್ರಹಿಸಿ ಹಡಗುಗಳ ಮೂಲಕ ಇರಾಕ್, ಇರಾನ್‌ಗೆ ಕಳುಹಿಸುತ್ತಿದ್ದೇವೆ. ಕೆ.ಜಿಗೆ ₹13ರಂತೆ ಈವರೆಗೆ 35 ಟನ್ ಬಾಳೆಕಾಯಿ ಕಳುಹಿಸಲಾಗಿದೆ’ ಎಂದು ತಿಳಿಸಿದರು.

ಪಶ್ಚಿಮ ಬಂಗಾಳದ ಕಾರ್ಮಿಕರು: ಬಾಳೆ ಗೊನೆಯನ್ನು ಕತ್ತರಿಸಿ, ಅದು ಕೆಡದಂತೆ ವೈಜ್ಞಾನಿಕ ಕ್ರಮದಲ್ಲಿ ಪ್ಯಾಕಿಂಗ್ ಮಾಡಲು ಪಶ್ಚಿಮ ಬಂಗಾಳದ 25 ಕಾರ್ಮಿಕರು ನಾಲ್ಕು ದಿನಗಳಿಂದ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಸಿದರು.

‘ಗ್ರಾಮದ ರೈತರೊಬ್ಬರು ಬೆಳೆದಿರುವ ಬಾಳೆ ಅನ್ಯ ದೇಶಕ್ಕೆ ಹೋಗುತ್ತಿದೆ. ನಮ್ಮಲ್ಲೂ ಉತ್ಕೃಷ್ಟ ದರ್ಜೆಯ ಬಾಳೆ ಕೃಷಿ ನಡೆದಿರುವುದು ಹೆಮ್ಮೆಯ ಸಂಗತಿ’ ಎಂದು ಸ್ಥಳೀಯ ರೈತರು ಹೇಳುತ್ತಾರೆ.

ಗುಣಮಟ್ಟದ ಬಾಳೆ

‘ದೇವರ ನಿಂಬರಗಿಯ ಯಂಕಣ್ಣ ಬಿರಾದಾರ ಅವರು ಬಸರಕೋಡದಲ್ಲಿ ಗುಣಮಟ್ಟದ ಬಾಳೆ ಇದೆ ಎಂದು ತಿಳಿಸಿದ್ದರು. ಹೇಮರೆಡ್ಡಿ ಅವರು ಬೆಳೆದ ಬಾಳೆ ರಫ್ತುಮಾಡಲು ಯೋಗ್ಯ ವಾಗಿದೆ. ಖರೀದಿ ಒಪ್ಪಂದ ಆಗಿದೆ. ಈ ಬಾಳೆಯು ನ. 1ರಂದು ಗುಣಮಟ್ಟದ ಪ್ಯಾಕಿಂಗ್‌ನಲ್ಲಿ ಇರಾನ್, ಇರಾಕ್, ಸೌದಿ ಅರೇಬಿಯಾಕ್ಕೆ ರವಾನೆಯಾಗಲಿದೆ’ ಎನ್ನುತ್ತಾರೆ ಬಾಳೆ ಖರೀದಿದಾರ ಅಬೂಬಕರ ಖುರೋಷಿ.


ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹27000-28050
ಪುತ್ತೂರು	₹6000-24500
ತಿಪಟೂರು	₹27000-28826
ತುರುವೇಕೆರೆ	₹27000-28500

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹335-622
ದ್ವಿತಳಿ (ಬಿ.ವಿ)	₹422-777

ಎಫ್‌ಡಿಐ ಏರಿಕೆ: ಜಿಗಿದ ಪಿಎಸ್‌ಯು ಬ್ಯಾಂಕ್ ಸೂಚ್ಯಂಕ



ನವದೆಹಲಿ (ರಾಯಿಟರ್ಸ್): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಲ್ಲಿ ವಿದೇಶಿ ನೇರ ಹೂಡಿಕೆಗೆ (ಎಫ್‌ಡಿಐ) ಇರುವ ಶೇಕಡ 20ರ ಮಿತಿಯನ್ನು, ಶೇ 49ಕ್ಕೆ ಹೆಚ್ಚಿಸುವ ಚಿಂತನೆ ನಡೆದಿದೆ ಎಂಬ ಸುದ್ದಿಯು ಬಿತ್ತರವಾದ ನಂತರದಲ್ಲಿ ಬ್ಯಾಂಕಿಂಗ್ ವಲಯದ ‘ನಿಫ್ಟಿ ಪಿಎಸ್‌ಯು ಬ್ಯಾಂಕ್’ ಸೂಚ್ಯಂಕವು ಶೇಕಡ 3ರವರೆಗೆ ಜಿಗಿದಿದೆ.

ಸರ್ಕಾರಿ ಬ್ಯಾಂಕ್‌ಗಳಲ್ಲಿ ಎಫ್‌ಡಿಐ ಹೆಚ್ಚಳವು, ನಿಯಮಗಳ ವಿಚಾರದಲ್ಲಿ ಸರ್ಕಾರಿ ಹಾಗೂ ಖಾಸಗಿ ಬ್ಯಾಂಕ್‌ಗಳ ನಡುವಿನ ಅಂತರವನ್ನು ತಗ್ಗಿಸುವ ಪ್ರಯತ್ನದ ಭಾಗವೂ ಆಗಿದೆ ಎಂದು ಮೂಲಗಳು ಹೇಳಿವೆ. ಖಾಸಗಿ ವಲಯದ ಬ್ಯಾಂಕ್‌ಗಳಲ್ಲಿ ಶೇ 74ರಷ್ಟು ಎಫ್‌ಡಿಐಗೆ ಅವಕಾಶ ಇದೆ.

ಈ ವಿಚಾರವಾಗಿ ಆರ್‌ಬಿಐ ಹಾಗೂ ಹಣಕಾಸು ಸಚಿವಾಲಯದಿಂದ ಪ್ರತಿಕ್ರಿಯೆ ಲಭ್ಯವಾಗಿಲ್ಲ.

ದೇಶದ ಆರ್ಥಿಕ ಬೆಳವಣಿಗೆ ದರವು ಕಳೆದ ಮೂರು ವರ್ಷಗಳಿಂದ ಸರಾಸರಿ ಶೇ 8ರಷ್ಟಿದೆ. ಇದರಿಂದಾಗಿ ಸಾಲಕ್ಕೆ ಬೇಡಿಕೆ ಹೆಚ್ಚಾಗಿದೆ, ದೇಶದ ಬ್ಯಾಂಕ್‌ಗಳು ಹೂಡಿಕೆಗೆ ಆಕರ್ಷಕವಾಗುತ್ತಿವೆ.

ದೇಶದಲ್ಲಿ 12 ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳಿವೆ. ಈ ಬ್ಯಾಂಕ್‌ಗಳಲ್ಲಿ ಕನಿಷ್ಠ ಶೇ 51ರಷ್ಟು ಪಾಲನ್ನು ಉಳಿಸಿಕೊಳ್ಳುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಈಗ ದೇಶದ ಸರ್ಕಾರಿ ಬ್ಯಾಂಕ್‌ಗಳಲ್ಲಿ ಎಫ್‌ಡಿಐ ಪ್ರಮಾಣವು ಒಂದೊಂದು ಬ್ಯಾಂಕ್‌ನಲ್ಲಿ ಒಂದೊಂದು ಮಟ್ಟದಲ್ಲಿದೆ. ಕೆನರಾ ಬ್ಯಾಂಕ್‌ನಲ್ಲಿ ಅದು ಶೇ 12ರಷ್ಟಿದೆ.

ಸಮಾಜದ ದುರ್ಬಲ ವರ್ಗಗಳಿಗೂ ಸಾಲ ನೀಡುವ ಹೊಣೆಯು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಮೇಲೆ ಇರುವ ಕಾರಣ ಹೂಡಿಕೆಯ ದೃಷ್ಟಿಯಿಂದ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳು ಖಾಸಗಿ ವಲಯದ ಬ್ಯಾಂಕ್‌ಗಳಷ್ಟು ಬಲಿಷ್ಠವಲ್ಲ ಎಂಬ ನಂಬಿಕೆ ಇದೆ.

ಎಸ್‌ಐಆರ್: ವೇಳಾಪಟ್ಟಿ ಪ್ರಕಟ

ಒಂದನೇ ಪುಟದಿಂದ...

ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಯಲಿರುವ ಕೇರಳದಲ್ಲಿ ಎಸ್‌ಐಆರ್‌ಅನ್ನು ಮುಂದೂಡಬೇಕೆಂಬ ಮನವಿಯ ಕುರಿತ ಪ್ರಶ್ನೆಗೆ ಅವರು, ‘ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಇದುವರೆಗೆ ಯಾವುದೇ ಅಧಿಸೂಚನೆ ಹೊರಡಿಸಲಾಗಿಲ್ಲ. ಆದ್ದರಿಂದ ಕೇರಳದಲ್ಲಿ ಎರಡನೇ ಹಂತದಲ್ಲಿ ಎಸ್‌ಐಆರ್ ನಡೆಸಲು ಆಯೋಗ ಮುಂದಾಗಿದೆ’ ಎಂದು ಹೇಳಿದರು.

ಎಸ್‌ಐಆರ್ ಕುರಿತು ವಿವಿಧ ರಾಜ್ಯಗಳ ಮುಖ್ಯ ಚುನಾವಣಾ ಅಧಿಕಾರಿಗಳೊಂದಿಗೆ (ಸಿಇಒ) ಕೇಂದ್ರ ಚುನಾವಣಾ ಆಯೋಗದ ಹಿರಿಯ ಅಧಿಕಾರಿಗಳು ಈಚೆಗೆ ಸಭೆ ನಡೆಸಿದ್ದರು. ತಮ್ಮ ತಮ್ಮ ರಾಜ್ಯಗಳಲ್ಲಿ ಕೊನೆಯದಾಗಿ ಎಸ್‌ಐಆರ್ ಪ್ರಕ್ರಿಯೆ ನಡೆದ ಬಳಿಕ ಪ್ರಕಟಿಸಲಾಗಿರುವ ಮತದಾರರ ಪಟ್ಟಿಯನ್ನು ಸಿದ್ಧಪಡಿಸುವಂತೆ ಸೂಚಿಸಿದ್ದರು.

ಹಲವು ರಾಜ್ಯಗಳ ಚುನಾವಣಾಧಿಕಾರಿಗಳು ತಮ್ಮ ಕೊನೆಯ ಎಸ್‌ಐಆರ್ ನಂತರ ಪ್ರಕಟವಾದ ಮತದಾರರ ಪಟ್ಟಿಗಳನ್ನು ಈಗಾಗಲೇ ವೆಬ್‌ಸೈಟ್‌ಗಳಲ್ಲಿ ಲಭ್ಯವಾಗುವಂತೆ ಮಾಡಿದ್ದಾರೆ. ಬಹುತೇಕ ರಾಜ್ಯಗಳಲ್ಲಿ 2002 ಮತ್ತು 2004ರ ನಡುವೆ ಕೊನೆಯದಾಗಿ ಎಸ್‌ಐಆರ್ ನಡೆದಿತ್ತು.

‘ಬಂಗಾಳ: ಅಡ್ಡಿ ಎದುರಾಗದು’

‘ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ನಡೆಸಲು ಯಾವುದೇ ಅಡ್ಡಿ ಎದುರಾಗದು’ ಎಂಬುದನ್ನು ಚುನಾವಣಾ ಆಯೋಗ (ಇ.ಸಿ) ಪುನರುಚ್ಚರಿಸಿದೆ. ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ನಡೆದರೆ ಅಲ್ಲಿ ‘ರಕ್ತಪಾತ’ ಆಗಲಿದೆ ಎಂದು ವರದಿಯಾಗಿರುವ ಬಗ್ಗೆ ಎದುರಾದ ಪ್ರಶ್ನೆಗೆ ಜ್ಞಾನೇಶ್ ಕುಮಾರ್ ಈ ರೀತಿ ಪ್ರತಿಕ್ರಿಯಿಸಿದ್ದಾರೆ.

‘ಇ.ಸಿ ತನ್ನ ಕರ್ತವ್ಯ ನಿರ್ವಹಿಸುತ್ತಿದೆ ಮತ್ತು ರಾಜ್ಯ ಸರ್ಕಾರಗಳು ಸಾಂವಿಧಾನಿಕವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸಲು ಬದ್ಧವಾಗಿವೆ. ಎಲ್ಲಾ ಸಾಂವಿಧಾನಿಕ ಸಂಸ್ಥೆಗಳು ಸಂವಿಧಾನದಲ್ಲಿ ತಿಳಿಸಿರುವಂತೆ ತಮ್ಮ ಜವಾಬ್ದಾರಿ ನಿರ್ವಹಿಸುತ್ತವೆ’ ಎಂದು ಹೇಳಿದರು.

‘ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದು ರಾಜ್ಯ ಸರ್ಕಾರದ ಜವಾಬ್ದಾರಿಯಾಗಿದೆ. ಮತದಾರರ ಪಟ್ಟಿ ಸಿದ್ಧಪಡಿಸಲು ಮತ್ತು ಚುನಾವಣೆ ನಡೆಸಲು ಇ.ಸಿಗೆ ಅಗತ್ಯವಿರುವ ಸಿಬ್ಬಂದಿಯನ್ನು ಒದಗಿಸಲು ರಾಜ್ಯಗಳು ಬದ್ಧವಾಗಿವೆ’ ಎಂದರು.

ಬಿಹಾರದಲ್ಲಿ ಪ್ರಕ್ರಿಯೆ ಪೂರ್ಣ

ಬಿಹಾರದಲ್ಲಿ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಸೆಪ್ಟೆಂಬರ್ 30ರಂದು ಪ್ರಕಟಿಸಿದ ಅಂತಿಮ ಪಟ್ಟಿಯಲ್ಲಿ 7.42 ಕೋಟಿ ಮತದಾರರ ಹೆಸರುಗಳು ಇವೆ. ವಿಶೇಷ ಪರಿಷ್ಕರಣೆ ಬಳಿಕ 3.66 ಲಕ್ಷ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಬಿಹಾರದ ಎಸ್‌ಐಆರ್ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ನಡೆಯುತ್ತಿದೆ. ಬಿಹಾರದಲ್ಲಿ ಎಸ್‌ಐಆರ್ ನಡೆಸಿದ ರೀತಿಯ ಕುರಿತು ಕಾಂಗ್ರೆಸ್ ಸೇರಿ ಹಲವು ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದವು.

ಮತದಾರರ ಪಟ್ಟಿಯಿಂದ ಕೈಬಿಡಲಾದ ಮತದಾರರಿಗೆ ಚುನಾವಣಾ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಲು ನೆರವಾಗುವಂತೆ ಬಿಹಾರ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಇದುವರೆಗೂ ಯಾವುದೇ ಮೇಲ್ಮನವಿ ಸಲ್ಲಿಕೆಯಾಗಿಲ್ಲ ಎಂದು ಚುನಾವಣಾ ಆಯೋಗ ಹೇಳುತ್ತಿದೆ.

ಬಿಹಾರದಲ್ಲಿ ವಿಧಾನಸಭಾ ಚುನಾವಣೆ ಘೋಷಣೆಯಾಗಿದ್ದು, ನವೆಂಬರ್ 6 ಹಾಗೂ 11ರಂದು ಮತದಾನ ಹಾಗೂ ನವೆಂಬರ್ 14ರಂದು ಮತ ಎಣಿಕೆ ನಡೆಯಲಿದೆ.

ಸುದ್ದಿ 2 ನಿಮಿಷ

ಮಾಲಿಯಲ್ಲಿ ಇಂಧನ ಬಿಕ್ಕಟ್ಟು ಶಾಲೆ, ಕಾಲೇಜುಗಳು ಬಂದ್

ಬಮಾಕೊ (ಮಾಲಿ) (ಎಪಿ): ಇಂಧನ ಆಮದಿನ ಮೇಲೆ ಜಿಹಾದಿ ಭಯೋತ್ಪಾದಕರು ಹೇರಿರುವ ನಿರ್ಬಂಧದಿಂದ ಪಶ್ಚಿಮ ಆಫ್ರಿಕಾದ ಮಾಲಿ ದೇಶದಲ್ಲಿ ಬಿಕ್ಕಟ್ಟು ಎದುರಾಗಿದೆ. ಹೀಗಾಗಿ ಮುಂದಿನ ಎರಡು ವಾರಗಳವರೆಗೆ ದೇಶದಾದ್ಯಂತ ಎಲ್ಲಾ ಶಾಲೆ ಹಾಗೂ ವಿಶ್ವವಿದ್ಯಾಲಯಗಳನ್ನು ಮುಚ್ಚುವುದಾಗಿ ಸರ್ಕಾರ ಘೋಷಿಸಿದೆ.

ಶಿಕ್ಷಣ ಸಚಿವ ಅಮಡೌ ಸೈ ಸವಾನೆ ಈ ಬಗ್ಗೆ ಮಾಹಿತಿ ನೀಡಿದ್ದು, ‘ಇಂಧನ ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಶಾಲಾ–ಕಾಲೇಜುಗಳ ಸಿಬ್ಬಂದಿಯ ಸಂಚಾರಕ್ಕೂ ತೊಡಕಾಗುತ್ತಿದೆ. ಹೀಗಾಗಿ ಈ ನಿರ್ಧಾರ ಕೈಗೊಳ್ಳಲಾಗಿದೆ’ ಎಂದಿದ್ದಾರೆ.

ಅಲ್ಲದೇ, ನವೆಂಬರ್ 10ರಂದು ಶಾಲೆಗಳನ್ನು ಮತ್ತೆ ತೆರೆಯಲಾಗುವುದು. ಅಷ್ಟರೊಳಗೆ ಸಹಜ ಸ್ಥಿತಿಯನ್ನು ಮರುಸ್ಥಾಪಿಸಲು ಆಡಳಿತ ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದೆ ಎಂದೂ ಹೇಳಿದ್ದಾರೆ.

ಅಲ್–ಖೈದಾ ಬೆಂಬಲಿತ ಜಮಾತ್ ನುಸ್ರತ್ ಅಲ್–ಇಸ್ಲಾಮ್ ವಲ್–ಮುಸ್ಲಿಮೀನ್ ಎಂಬ ಭಯೋತ್ಪಾದಕ ಸಂಘಟನೆಯು ಮಾಲಿಯ ಸುತ್ತ ಮುತ್ತಲಿನ ದೇಶಗಳಿಂದ ಇಂಧನ ಆಮದು ಮಾಡಿಕೊಳ್ಳದಂತೆ ಸೆಪ್ಟೆಂಬರ್‌ನಲ್ಲಿ ನಿರ್ಬಂಧ ಹೇರಿದೆ.

ಇಂಧನ ಹೊತ್ತು ತರುವ ಟ್ಯಾಂಕರ್‌ಗಳನ್ನು ಗಡಿಯಲ್ಲೇ ತಡೆದು, ಅವುಗಳ ಮೇಲೆ ದಾಳಿ ನಡೆಸಿ, ಇಂಧನ ಪೂರೈಕೆಗೆ ಭಯೋತ್ಪಾದಕರು ತಡೆ ಒಡ್ಡಿದ್ದಾರೆ. ಇದು ಮಾಲಿಯಲ್ಲಿ ಆರ್ಥಿಕ, ಸಾಮಾಜಿಕ ಬಿಕ್ಕಟ್ಟಿಗೆ ಕಾರಣವಾಗಿದೆ.



ಅಮೆಜಾನ್ ರಫ್ತು ₹1.76 ಲಕ್ಷ ಕೋಟಿ

ಬೆಂಗಳೂರು: 2015ರಿಂದ 2025ರ ನಡುವೆ ಅಮೆಜಾನ್ ಕಂಪನಿಯು ಇ–ಕಾಮರ್ಸ್ ವೇದಿಕೆ ಮೂಲಕ ದೇಶದಿಂದ ಮಾಡಿರುವ ಒಟ್ಟು ರಫ್ತು ಮೌಲ್ಯವು ₹1.76 ಲಕ್ಷ ಕೋಟಿಯನ್ನು (20 ಬಿಲಿಯನ್ ಡಾಲರ್) ದಾಟಿದೆ.

ರಫ್ತು ಮೊತ್ತವನ್ನು 2030ರ ವೇಳೆಗೆ ₹7 ಲಕ್ಷ ಕೋಟಿಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ಕಂಪನಿ ಸೋಮವಾರ ತಿಳಿಸಿದೆ.

ಅಮೆಜಾನ್ ಕಂಪನಿಯು ‘ಜಾಗತಿಕ ಮಾರಾಟ ಕಾರ್ಯಕ್ರಮ’ಕ್ಕೆ 2015ರಲ್ಲಿ ಚಾಲನೆ ನೀಡಿತ್ತು. ಕಳೆದ ದಶಕದಲ್ಲಿ ಭಾರತದಲ್ಲಿ ತಯಾರಿಸಿದ 75 ಕೋಟಿಗೂ ಹೆಚ್ಚು ಉತ್ಪನ್ನಗಳನ್ನು ವಿಶ್ವದಾದ್ಯಂತ ಗ್ರಾಹಕರಿಗೆ ಇ–ವಾಣಿಜ್ಯ ವೇದಿಕೆ ಮೂಲಕ ಮಾರಾಟ ಮಾಡಲಾಗಿದೆ.

ಒಂದೇ ವರ್ಷದಲ್ಲಿ ಅಮೆಜಾನ್ ನಲ್ಲಿನ ರಫ್ತುದಾರರ ಪ್ರಮಾಣ ಶೇ 33ರಷ್ಟು ಹೆಚ್ಚಾಗಿದ್ದು, 2 ಲಕ್ಷಕ್ಕೆ ತಲುಪಿದೆ. ದೆಹಲಿ, ರಾಜಸ್ಥಾನ, ಗುಜರಾತ್, ಉತ್ತರ ಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಮತ್ತು ಹರಿಯಾಣವು ಹೆಚ್ಚು ರಫ್ತುದಾರರನ್ನು ಹೊಂದಿರುವ ರಾಜ್ಯಗಳಾಗಿವೆ.

ಕಳೆದ ದಶಕದಲ್ಲಿ ಆರೋಗ್ಯ ಮತ್ತು ವೈಯಕ್ತಿಕ ಆರೈಕೆ ಉತ್ಪನ್ನಗಳ ಮಾರಾಟದ ವಾರ್ಷಿಕ ಬೆಳವಣಿಗೆ ದರ ಶೇ 45ರಷ್ಟು ಏರಿಕೆಯಾಗಿದೆ. ಸೌಂದರ್ಯ ವರ್ಧಕಗಳು (ಶೇ 45), ಆಟಿಕೆಗಳು (ಶೇ 44), ಉಡುಪುಗಳು (ಶೇ 37ರಷ್ಟು) ಮತ್ತು ಪೀಠೋಪಕರಣಗಳ ಮಾರಾಟ (ಶೇ 36ರಷ್ಟು) ಹೆಚ್ಚಳವಾಗಿದೆ. ಅಮೆರಿಕ, ಬ್ರಿಟನ್ ಸೇರಿದಂತೆ 18 ದೇಶಗಳಿಗೆ ಉತ್ಪನ್ನಗಳನ್ನು ರಫ್ತು ಮಾಡಲಾಗಿದೆ ಎಂದು ತಿಳಿಸಿದೆ.

ಕರ್ನಾಟಕದಲ್ಲಿ 7 ಸಾವಿರ: 2024ರಲ್ಲಿ ‘ಅಮೆಜಾನ್‌ನ ಜಾಗತಿಕ ಮಾರಾಟ ಕಾರ್ಯಕ್ರಮ’ದ ಅಡಿ ಕರ್ನಾಟಕದ 7 ಸಾವಿರ ರಫ್ತುದಾರರು ನೋಂದಣಿ ಮಾಡಿಕೊಂಡಿದ್ದಾರೆ.

ನಾವು ಕಾಶ್ಮೀರದ ಜನರ ಪರ: ಪಾಕ್

ಇಸ್ಲಾಮಾಬಾದ್ (ಪಿಟಿಐ): ಸ್ವಯಂ ನಿರ್ಧಾರದ ಹಕ್ಕಿಗಾಗಿ ಕಾಶ್ಮೀರ ಜನರು ನಡೆಸುತ್ತಿರುವ ಹೋರಾಟಕ್ಕೆ ಪಾಕಿಸ್ತಾನದ ಅಚಲವಾದ ಬೆಂಬಲ ಇದೆ ಎಂದು ಪಾಕಿಸ್ತಾನದ ಅಧ್ಯಕ್ಷ ಆಸಿಫ್ ಅಲಿ ಜರ್ದಾರಿ ಮತ್ತು ಪ್ರಧಾನಿ ಶೆಹಬಾಜ್ ಷರೀಫ್ ಸೋಮವಾರ ಪುನರುಚ್ಚರಿಸಿದ್ದಾರೆ.

ಭಾರತದ ಸೇನೆಯು 1947ರಲ್ಲಿ ಕಾಶ್ಮೀರವನ್ನು ಆಕ್ರಮಣ ಮಾಡಿಕೊಂಡಿದೆ ಎಂದು ಆರೋಪಿಸಿ, ಪ್ರತಿ ವರ್ಷ ಅಕ್ಟೋಬರ್ 27ರಂದು ಪಾಕಿಸ್ತಾನ ಆಚರಿಸುತ್ತಿರುವ ‘ಕರಾಳ ದಿನ’ದ ಅಂಗವಾಗಿ ಉಭಯ ನಾಯಕರು ಸೋಮವಾರ ಸಂದೇಶ ಬಿಡುಗಡೆ ಮಾಡಿದ್ದಾರೆ.

‘ಕಾಶ್ಮೀರದ ಜನಸಂಖ್ಯಾ ಸ್ಥಿತಿಯನ್ನು ಬದಲಿಸುವ ಪ್ರಯತ್ನದ ಮೂಲಕ ಭಾರತದಿಂದ ಮಾನವ ಹಕ್ಕುಗಳ ಉಲ್ಲಂಘನೆ ಆಗುತ್ತಿದೆ. ವಿಶ್ವಸಂಸ್ಥೆಯು ಭದ್ರತಾ ಮಂಡಳಿಯ ನಿರ್ಣಯಗಳನ್ನು ಜಾರಿಗೆ ತರುವ ಭರವಸೆ ನೀಡಲಿ’ ಎಂದು ಜರ್ದಾರಿ ಸಂದೇಶದಲ್ಲಿ ಹೇಳಿದ್ದಾರೆ.

‘ಭಾರತ ಸರ್ಕಾರ ಕಾಶ್ಮೀರದ ಜನರಿಗೆ ಸ್ವಯಂ ನಿರ್ಧಾರದ ಹಕ್ಕನ್ನು ನಿರಾಕರಿಸುತ್ತಿದೆ. ಪಾಕಿಸ್ತಾನದ 24 ಕೋಟಿ ಜನರು ಕಾಶ್ಮೀರದ ಜನರ ಜೊತೆಗಿದ್ದೇವೆ. ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದಂತೆ ಭಾರತ ಸರ್ಕಾರವು ಸಂವಿಧಾನದ 370ನೇ ವಿಧಿ ರದ್ದು ಮತ್ತು ವಿಶೇಷ ಸ್ಥಾನಮಾನವನ್ನು ವಾಪಸ್ ಪಡೆದ ನಂತರ ಭಾರತ ಹಾಗೂ ಪಾಕಿಸ್ತಾನದ ಸಂಬಂಧ ಮತ್ತಷ್ಟು ಹದಗೆಟ್ಟಿದೆ’ ಎಂದು ಪ್ರಧಾನಿ ಶೆಹಬಾಜ್ ಹೇಳಿದ್ದಾರೆ.

ಅಡಿಕೆ ಧಾರಣೆ

ಚಿತ್ರದುರ್ಗ	
ಆಪಿ	61882-62292
ಬೆಟ್ಟೆ	39629-40069
ಕೆಂಪುಗೋಟು	34600-35000
ರಾಶಿ	61339-61779
ಪುತ್ತೂರು	
ಕೋಕ	20000-31500
ಹೊಸತು	26000-36000
ಹಳತು	48500-53000
ಕುಮಟಾ	
ಚಾಲಿ	40089-47301
ಚಿಪ್ಪು	27699-33999
ಕೋಕ	11099-28869
ಫ್ಯಾಕ್ಟರಿ	9099-25649
ಹಳೆಚಾಲಿ	42569-45700
ಸಾಗರ	
ಬಿಳಿಗೋಟು	10199-35100
ಚಾಲಿ	34099-43099
ಕೋಕ	11989-35899
ಕೆಂಪುಗೋಟು	30999-42899
ರಾಶಿ	34099-68599
ಸಿಪ್ಪೆಗೋಟು	9699-23555
ಶಿವಮೊಗ್ಗ	
ಬೆಟ್ಟೆ	52009-77069
ಗೊರಬಲು	19001-45699
ಹೊಸತು	60009-66559
ರಾಶಿ	50000-66109
ಸರಕು	65200-98696
ಸಿದ್ದಾಪುರ	
ಬಿಳಿಗೋಟು	26499-35419
ಚಾಲಿ	39779-47339
ಕೋಕ	20319-32399
ಕೆಂಪುಗೋಟು	25099-35199
ರಾಶಿ	44889-61009
ತಟ್ಟಿಬೆಟ್ಟೆ	33999-60099

ರುಬಿಯೊ ಭೇಟಿಯಾದ ಜೈಶಂಕರ್

ಕ್ವಾಲಾಲಂಪುರ (ಪಿಟಿಐ): ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರೊಂದಿಗೆ ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಸೋಮವಾರ ಮಾತುಕತೆ ನಡೆಸಿದರು. ಇಬ್ಬರೂ ನಾಯಕರು ಆಸಿಯಾನ್ ಶೃಂಗಸಭೆಯಲ್ಲಿ ಭಾಗವಹಿಸಲು ಇಲ್ಲಿಗೆ ಆಗಮಿಸಿದ್ದರು.

ಭಾರತದ ವಸ್ತುಗಳ ಮೇಲೆ ಅಮೆರಿಕವು ಸುಂಕ ವಿಧಿಸಿದ ಬಳಿಕ ಎರಡೂ ದೇಶಗಳ ಸಂಬಂಧ ಹಳಸಿತ್ತು. ಹಳಸಿದ ಸಂಬಂಧವನ್ನು ಸರಿಪಡಿಸಿಕೊಳ್ಳುವ ಯತ್ನ ನಡೆಯುತ್ತಿದೆ. ‘ಅಮೆರಿಕದ ರುಬಿಯೊ ಅವರನ್ನು ಭೇಟಿಯಾಗಿ ಸಂತೋಷವಾಯಿತು. ನಮ್ಮ ದ್ವಿಪಕ್ಷೀಯ ಸಂಬಂಧ ಮತ್ತು ಜಗತ್ತಿನ ವಿಚಾರಗಳ ಬಗ್ಗೆ ಚರ್ಚೆ ನಡೆಸಲಾಯಿತು’ ಎಂದು ಜೈಶಂಕರ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಹಂಚಿಕೊಂಡಿದ್ದಾರೆ. ಇದೇ ವೇಳೆ ಜೈಶಂಕರ್ ಅವರು ಆಸ್ಟ್ರೇಲಿಯಾ ಪ್ರಧಾನಿ ಆಂಥೊನಿ ಅಲ್ಬನೀಸ್, ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್, ಜಪಾನ್‌ನ ವಿದೇಶಾಂಗ ಸಚಿವ ಮೊಟೆಗಿ ತೊಷಿಮಿತ್ಸು, ಮಲೇಷ್ಯಾದ ವಿದೇಶಾಂಗ ಸಚಿವ ಮೊಹಮ್ಮದ್ ಹಾಜಿ ಹಸನ್ ಅವರನ್ನು ಭೇಟಿಯಾದರು.

ಪ್ರಮಾಣಪತ್ರ ಸಲ್ಲಿಸದ್ದಕ್ಕೆ ತರಾಟೆ

ಒಂದನೇ ಪುಟದಿಂದ...

ದೆಹಲಿ ಮತ್ತು ರಾಷ್ಟ್ರ ರಾಜಧಾನಿ ಪ್ರದೇಶದ (ದೆಹಲಿ–ಎನ್‌ಸಿಆರ್) ಬೀದಿ ನಾಯಿಗಳನ್ನು ಹಿಡಿದು, ಅವುಗಳನ್ನು ಸ್ಥಳಾಂತರಿಸುವಂತೆ ಸುಪ್ರೀಂ ಕೋರ್ಟ್ ಆಗಸ್ಟ್ 11ರಂದು ಆದೇಶಿಸಿತ್ತು. ಆದರೆ, ಬೀದಿ ನಾಯಿಗಳ ಸ್ಥಳಾಂತರ ವಿರೋಧಿಸಿ ಕೆಲವರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು.

ತಾನು ಹೊರಡಿಸಿದ್ದ ಆದೇಶ ‘ವಿಪರೀತ ಕಠೋರ’ವಾಗಿತ್ತು ಎಂದು ಹೇಳಿದ್ದ ಸುಪ್ರೀಂ ಕೋರ್ಟ್ ಈ ಆದೇಶವನ್ನು ಮಾರ್ಪಡಿಸಿ ಆಗಸ್ಟ್ 22ರಂದು ಹಲವು ನಿರ್ದೇಶನಗಳನ್ನು ನೀಡಿತ್ತು.

ಬೀದಿ ನಾಯಿಗಳ ಉಪದ್ರವಕ್ಕೆ ಕಡಿವಾಣ ಹಾಕುವುದಕ್ಕಾಗಿ ರಾಷ್ಟ್ರವ್ಯಾಪಿ ಅನ್ವಯವಾಗುವ ನೀತಿಯೊಂದನ್ನು ರೂಪಿಸುವ ಇಂಗಿತ ವ್ಯಕ್ತಪಡಿಸಿತಲ್ಲದೆ, ಈ ವಿಚಾರಕ್ಕೆ ಸಂಬಂಧಿಸಿ ಕೈಗೊಳ್ಳುವ ಕ್ರಮಗಳ ವ್ಯಾಪ್ತಿಯನ್ನು ರಾಷ್ಟ್ರ ರಾಜಧಾನಿ ಪ್ರದೇಶದ (ದೆಹಲಿ–ಎನ್‌ಸಿಆರ್) ಆಚೆಗೂ ಹಿಗ್ಗಿಸಲು ನಿರ್ಧರಿಸಿತ್ತು.

‘ದೇಶದ ಬಗ್ಗೆ ಕೆಟ್ಟ ಚಿತ್ರಣ’

‘ಬೀದಿ ನಾಯಿಗಳ ಹಾವಳಿಗೆ ಸಂಬಂಧಿಸಿದಂತೆ ನಿರಂತರ ಘಟನೆಗಳು ನಡೆಯುತ್ತಿವೆ. ಪ್ರಮಾಣ ಪತ್ರ ಸಲ್ಲಿಸಬೇಕೆಂದು ನಿರ್ದೇಶನ ನೀಡಿದ್ದರೂ ಅಕ್ಟೋಬರ್ 27ರವರೆಗೂ ಯಾರೂ ಪ್ರತಿಕ್ರಿಯೆ ನೀಡಿಲ್ಲ. ಬೀದಿ ನಾಯಿಗಳ ವಿಚಾರದಲ್ಲಿ ವಿದೇಶಗಳಲ್ಲಿ ನಮ್ಮ ದೇಶವನ್ನು ಕೆಟ್ಟದಾಗಿ ಚಿತ್ರಿಸಲಾಗುತ್ತಿದೆ’ ಎಂದು ಪೀಠವು ಹೇಳಿತು.

ಕರ್ನಾಟಕದ ಮುನ್ನಡೆಯ ಕನಸಿಗೆ ಬಲ

ವೇಗಿಗಳ ಬಿಗುವಿನ ದಾಳಿ: ಫಾಲೋ ಆನ್ ತಪ್ಪಿಸಲು ಗೋವಾ ಹೋರಾಟ

• ಜಿ.ಶಿವಕುಮಾರ

ಶಿವಮೊಗ್ಗ: ವೇಗಿಗಳಿಗೆ ನೆರವು ನೀಡುತ್ತಿರುವ ಇಲ್ಲಿನ ಪಿಚ್‌ನಲ್ಲಿ ಸೋಮವಾರ ಕರ್ನಾಟಕದ ಅಭಿಲಾಷ್ ಶೆಟ್ಟಿ (63ಕ್ಕೆ3) ಮತ್ತು ವಿದ್ವತ್ ಕಾವೇರಪ್ಪ (30ಕ್ಕೆ2) ಬಿಗುವಿನ ದಾಳಿ ನಡೆಸಿದರು.

ನವುಲೆಯ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದ ಮೂರನೇ ದಿನದಾಟದ ಮೊದಲ ಎರಡು ಅವಧಿಯಲ್ಲಿ ಗೋವಾ ತಂಡದ ಪ್ರಮುಖ ಬ್ಯಾಟರ್‌ಗಳನ್ನು ಕಂಗೆಡಿಸಿ ಆತಿಥೇಯರ ಇನಿಂಗ್ಸ್ ಮುನ್ನಡೆ ಕನಸಿಗೆ ಬಲ ತುಂಬಿದರು.


ಕರ್ನಾಟಕ ಮೊದಲ ಇನಿಂಗ್ಸ್‌ನಲ್ಲಿ ದಾಖಲಿಸಿರುವ 371ರನ್‌ಗಳಿಗೆ ಉತ್ತರವಾಗಿ ಗೋವಾ ಮೂರನೇ ದಿನದಾಟದ ಅಂತ್ಯಕ್ಕೆ 77 ಓವರ್‌ಗಳಲ್ಲಿ 6 ವಿಕೆಟ್‌ಗೆ 171 ರನ್ ಗಳಿಸಿ, 200 ರನ್‌ಗಳ ಹಿನ್ನಡೆಯಲ್ಲಿದೆ. ಆಲ್‌ರೌಂಡರ್ ಅರ್ಜುನ್ ತೆಂಡೂಲ್ಕರ್ (ಬ್ಯಾಟಿಂಗ್ 43; 115 ಎ, 5ಬೌಂ, 1ಸಿ) ಮತ್ತು ಮೋಹಿತ್ ರೆಡ್ಕರ್ (ಬ್ಯಾಟಿಂಗ್ 24; 54ಎ, 2 ಬೌಂ) ಆಸರೆಯಾಗಿದ್ದಾರೆ.

13 ಓವರ್‌ಗಳಲ್ಲಿ 1 ವಿಕೆಟ್‌ಗೆ 28 ರನ್‌ಗಳಿಂದ ಸೋಮವಾರ ಆಟ ಮುಂದುವರಿಸಿದ ಸ್ನೇಹಲ್ ಕೌತಂಕರ್ ಬಳಗ ಈ ಮೊತ್ತಕ್ಕೆ ಕೇವಲ ಒಂದು ರನ್ ಸೇರಿಸಿ ಸುಯಶ್ ಪ್ರಭುದೇಸಾಯಿ (12; 42ಎ, 1ಬೌಂ) ವಿಕೆಟ್ ಕಳೆದುಕೊಂಡಿತು. ದಿನದ ಎರಡನೇ ಓವರ್‌ನ ಮೊದಲ ಎಸೆತದಲ್ಲೇ ವಿದ್ವತ್ ಕಾವೇರಪ್ಪ ಗೋವಾಗೆ ಆಘಾತ ನೀಡಿದರು. ನಾಯಕ ಸ್ನೇಹಲ್ (10) ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿದರು. ಅವರು ಎಡಗೈ ವೇಗಿ ಅಭಿಲಾಷ್ ಹಾಕಿದ ಇನಿಂಗ್ಸ್‌ನ 18ನೇ ಓವರ್‌ನ 5ನೇ ಎಸೆತದಲ್ಲಿ ವಿಕೆಟ್ ಕೀಪರ್ ಶ್ರೀಜಿತ್‌ಗೆ ಕ್ಯಾಚ್ ನೀಡಿದರು.

ಚಂಡೀಗಢ ವಿರುದ್ಧದ ಪಂದ್ಯದಲ್ಲಿ ದ್ವಿಶತಕ ಸಿಡಿಸಿ ಗೋವಾ ಗೆಲುವಿಗೆ ಕಾರಣರಾಗಿದ್ದ ಅಭಿನವ್ ತೇಜ್‌ರಾಣಾ (18; 40ಎ, 3ಬೌಂ) ಮತ್ತು ಲಲಿತ್ ಯಾದವ್ (36; 96ಎ, 3ಬೌಂ) ಅವರಿಗೆ ಇಲ್ಲಿ ಬೇರೂರಲು ಕರ್ನಾಟಕದ ವೇಗಿಗಳು ಅವಕಾಶ ನೀಡಲಿಲ್ಲ.

19ನೇ ಓವರ್‌ನಲ್ಲಿ ವಿದ್ವತ್ ಹಾಕಿದ ಬೌನ್ಸರ್ ಅಂದಾಜಿಸುವಲ್ಲಿ ಅಭಿನವ್ ಎಡವಿದರು. ಅವರ ಬ್ಯಾಟಿನ ಅಂಚಿಗೆ ತಾಗಿ ತಮ್ಮತ್ತ ಬಂದ ಚೆಂಡನ್ನು ಎರಡನೇ ಸ್ಲಿಪ್‌ನಲ್ಲಿದ್ದ ನಿಕಿನ್ ಜೋಸ್ ಹಿಡಿದರು. ಊಟದ ವಿರಾಮದ ವೇಳೆಗೆ ನಾಲ್ಕು ವಿಕೆಟ್ ಪಡೆದು 74 ರನ್‌ಗಳನ್ನಷ್ಟೇ ಬಿಟ್ಟು ಕೊಟ್ಟಿದ್ದ ಕರ್ನಾಟಕ, ಎದುರಾಳಿ ತಂಡವನ್ನು ಬೇಗನೇ ಆಲೌಟ್ ಮಾಡುವ ಆಲೋಚನೆಯಲ್ಲಿತ್ತು. ಆದರೆ ಲಲಿತ್ ಮತ್ತು ದರ್ಶನ್ ಮಿಸಾಳ್ (12) ಎರಡನೇ ಅವಧಿಯಲ್ಲಿ ಎಚ್ಚರಿಕೆಯಿಂದ ಆಡಿ ತಂಡದ ಮೊತ್ತವನ್ನು ಶತಕದ ಗಡಿ ಮುಟ್ಟಿಸಿದರು. ಯಶೋವರ್ಧನ್ ಪರಂತಾಪ್ 44ನೇ ಓವರ್‌ನ ಕೊನೆಯ ಎಸೆತದಲ್ಲಿ ದರ್ಶನ್ ವಿಕೆಟ್ ಪಡೆದು 49ರನ್‌ಗಳ 5ನೇ ವಿಕೆಟ್ ಜತೆಯಾಟ ಮುರಿದರು. ತಂಡದ ಖಾತೆಗೆ ಮತ್ತೆ 15 ರನ್ ಸೇರುವಷ್ಟರಲ್ಲಿ ಲಲಿತ್ ಕೂಡ ಔಟಾದರು.

ಈ ಹಂತದಲ್ಲಿ ಒಂದಾದ ಅರ್ಜುನ್ ಮತ್ತು ಮೋಹಿತ್ ಜಾಗರೂಕತೆಯಿಂದ ಆಡಿ ಇನಿಂಗ್ಸ್ ಬೆಳೆಸಿದರು. ಮುರಿಯದ 7ನೇ ವಿಕೆಟ್ ಪಾಲುದಾರಿಕೆಯಲ್ಲಿ 56ರನ್ ಕಲೆಹಾಕಿ ಆಲೌಟ್ ಮಾಡುವ ಕರ್ನಾಟಕದ ಕನಸಿಗೆ ತಣ್ಣೀರೆರಚಿದರು. ಒಂದು ಗಂಟೆ ತಡವಾಗಿ ಆರಂಭವಾದ ದಿನದಾಟ ಮಂದ ಬೆಳಕಿನ ಕಾರಣ ಸಂಜೆ 4.30ಕ್ಕೇ ಕೊನೆಗೊಂಡಿತು.

ಗೋವಾ ವಿರುದ್ಧದ ಪಂದ್ಯದಲ್ಲಿ ಎರಡು ವಿಕೆಟ್ ಪಡೆದ ಕರ್ನಾಟಕದ ವಿದ್ವತ್ ಕಾವೇರಪ್ಪ ಸಂಭ್ರಮ(ಎಡ). ಅಭಿಲಾಷ್ ಶೆಟ್ಟಿ ಬೌಲಿಂಗ್ ವೈಖರಿ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್‌.

‘ಫಾಲೋ ಆನ್’ ಕುತೂಹಲ

ನಿಯಮದ ಅನುಸಾರ ಮೂರು ಇಲ್ಲವೇ ನಾಲ್ಕು ದಿನಗಳ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡುವ ತಂಡ 150 ಹಾಗೂ ಅದಕ್ಕಿಂತ ಹೆಚ್ಚಿನ ರನ್‌ಗಳ ಮುನ್ನಡೆ ಗಳಿಸಿದರೆ ಎದುರಾಳಿಗಳ ಮೇಲೆ ಫಾಲೋ ಆನ್ ಹೇರಬಹುದು. ಆ ಮೊತ್ತಕ್ಕೇ ಎದುರಾಳಿ ತಂಡವನ್ನು ಮತ್ತೊಮ್ಮೆ ಕಟ್ಟಿ ಹಾಕಿ ಇನಿಂಗ್ಸ್ ಗೆಲುವು ಪಡೆಯಬಹುದು. ಆ ಮೂಲಕ 7 ಅಂಕ ಗಳಿಸಲೂಬಹುದು.

ಗೋವಾ ತಂಡವನ್ನು 221ರನ್‌ಗಳ ಒಳಗೆ ಕಟ್ಟಿ ಹಾಕಿದರೆ ಕರ್ನಾಟಕಕ್ಕೆ ಫಾಲೋ ಆನ್ ಹೇರುವ ಅವಕಾಶ ಸಿಗಲಿದೆ. ಹಾಗಾದಲ್ಲಿ ಮಯಂಕ್ ಯಾವ ನಿರ್ಣಯ ಕೈಗೊಳ್ಳುತ್ತಾರೆ ಎಂಬ ಕುತೂಹಲ ಈಗ ಗರಿಗೆದರಿದೆ.

ಕೊನೆಯ ದಿನದ ಆಟವಷ್ಟೇ ಬಾಕಿ ಇರುವುದರಿಂದ, ಗೆಲುವು ದೂರದ ಮಾತು. ಹೀಗಾಗಿ ಮಯಂಕ್, ಫಾಲೋ ಆನ್ ಗೊಡವೆಗೆ ಹೋಗದೆ ಎರಡನೇ ಇನಿಂಗ್ಸ್ ಆರಂಭಿಸುತ್ತಾರೆಯೇ? ಇಲ್ಲವೇ ಎಂಬುದನ್ನು ಕಾದು ನೋಡಬೇಕು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ: 110.1 ಓವರ್‌ಗಳಲ್ಲಿ 371
ಗೋವಾ: 77 ಓವರ್‌ಗಳಲ್ಲಿ 6 ವಿಕೆಟ್‌ಗೆ 171 (ಭಾನುವಾರ 13 ಓವರ್‌ಗಳಲ್ಲಿ 1 ವಿಕೆಟ್‌ಗೆ 28)
ಸುಯಶ್ ಪ್ರಭುದೇಸಾಯಿ ಸಿ ಶ್ರೀಜಿತ್ ಬಿ ವಿದ್ವತ್ 12 (42ಎ, 4X1)
ಅಭಿನವ್ ತೇಜ್‌ರಾಣಾ ಸಿ ನಿಕಿನ್ ಜೋಸ್ ಬಿ ವಿದ್ವತ್ 18 (40ಎ, 4X3)
ಸ್ನೇಹಲ್ ಕೌತಂಕರ್ ಸಿ ಶ್ರೀಜಿತ್ ಬಿ ಅಭಿಲಾಷ್ 10 (15ಎ, 4X1)
ಲಲಿತ್ ಯಾದವ್ ಸಿ ಯಶೋವರ್ಧನ್ ಬಿ ಅಭಿಲಾಷ್ 36 (96ಎ, 4X3)
ದರ್ಶನ್ ಮಿಸಾಳ್ ಸಿ ಕರುಣ್ ಬಿ ಯಶೋವರ್ಧನ್ 12 (84ಎ, 4X1)
ಅರ್ಜುನ್ ತೆಂಡೂಲ್ಕರ್ ಬ್ಯಾಟಿಂಗ್ 43 (115ಎ, 4X5, 6X1)
ಮೋಹಿತ್ ರೆಡ್ಕರ್ ಬ್ಯಾಟಿಂಗ್ 24 (54ಎ, 4X2)
ಇತರೆ: 7 (ನೋಬಾಲ್ 1, ಬೈ 2, ಲೆಗ್ ಬೈ 4).
ವಿಕೆಟ್ ಪತನ: 2–29 (ಸುಯಶ್; 14.1), 3–47 (ಸ್ನೇಹಲ್; 17.5), 4–51 (ಅಭಿನವ್; 18.6), 5–100 (ದರ್ಶನ್; 43.6), 6–115 (ಲಲಿತ್; 53.2).
ಬೌಲಿಂಗ್: ವಿದ್ವತ್ ಕಾವೇರಪ್ಪ 18–5–30–2, ಅಭಿಲಾಷ್ ಶೆಟ್ಟಿ 18–3–63–3, ಯಶೋವರ್ಧನ್ ಪರಂತಾಪ್ 16–6–18–1, ವೈಶಾಖ್ ವಿಜಯಕುಮಾರ್ 17–2–41–0, ಶ್ರೇಯಸ್ ಗೋಪಾಲ್ 8–2–13–0.

‘ಸೂರ್ಯ ವೈಫಲ್ಯ; ಚಿಂತಿತನಾಗಿಲ್ಲ’

ನವದೆಹಲಿ (ಪಿಟಿಐ): ನಾಯಕ ಸೂರ್ಯಕುಮಾರ್ ಯಾದವ್ ಅವರ ಕಳಪೆ ಫಾರ್ಮ್ ಬಗ್ಗೆ ಭಾರತ ತಂಡದ ಹೆಡ್ ಕೋಚ್ ಗೌತಮ್ ಗಂಭೀರ್ ಹೆಚ್ಚು ತಲೆಕೆಡಿಸಿಕೊಂಡಿಲ್ಲ. ತಂಡ ಹೆಚ್ಚು ಆಕ್ರಮಣಕಾರಿ ಬ್ರ್ಯಾಂಡ್‌ನ ಕ್ರಿಕೆಟ್ ಆಡುವಾಗ ಈ ರೀತಿಯ ‘ವೈಫಲ್ಯಗಳು ಆಗೇ ಆಗುತ್ತವೆ’ ಎನ್ನುವುದು ಅವರ ಅನಿಸಿಕೆ.

ಸೂರ್ಯ ಅವರ ನಾಯಕತ್ವದಲ್ಲಿ ಭಾರತ ತಂಡವು ಹೋದ ತಿಂಗಳು ಯುಎಇಯಲ್ಲಿ ಏಷ್ಯಾ ಕಪ್ ಟೂರ್ನಿಯನ್ನು ಗೆದ್ದುಕೊಂಡಿತ್ತು. ಆದರೆ ಸ್ವತಃ ಸೂರ್ಯ ಸತತವಾಗಿ ವಿಫಲರಾಗಿದ್ದರು. ಏಳು ಇನಿಂಗ್ಸ್‌ಗಳಿಂದ 72 ರನ್‌ಗಳನ್ನಷ್ಟೇ ಗಳಿಸಿದ್ದರು. ಈಗ ಅವರಿಗೆ ಕೋಚ್ ಬೆಂಬಲವಾಗಿ ನಿಂತಿದ್ದಾರೆ.

‘ಸೂರ್ಯ ಅವರ ಬ್ಯಾಟಿಂಗ್ ಲಯ ನನಗೇನೂ ಕಳವಳ ಮೂಡಿಸಿಲ್ಲ. ನಾವು ‘ಅಲ್ಟ್ರಾ ಅಗ್ರೆಸಿವ್’ ಮಾದರಿಯಲ್ಲಿ ಆಡಲು ಬದ್ಧರಾಗಿದ್ದೇವೆ. ಇಂಥ ತತ್ತ್ವಕ್ಕೆ ಜೋತುಬಿದ್ದಾಗ ವೈಫಲ್ಯಗಳು ಆಗುವುದು ಸಹಜ’ ಎಂದು ಗಂಭೀರ್ ಅವರು ಜಿಯೊಸ್ಟಾರ್‌ನಲ್ಲಿ ಸಂವಾದದ ವೇಳೆ ಅಭಿಪ್ರಾಯಪಟ್ಟರು.

ಒಂದು ಕಡೆ ನಾಯಕ ವಿಫಲರಾದರೂ, ಇನ್ನೊಂದು ಕಡೆ ಅಭಿಷೇಕ್ ಶರ್ಮಾ ಮತ್ತು ತಿಲಕ್ ವರ್ಮಾ ಅವರ ತಮ್ಮ ಆಕ್ರಮಣಕಾರಿ ಬ್ಯಾಟಿಂಗ್ ಮೂಲಕ ಟೂರ್ನಿಗೆ ರಂಗೇರಿಸಿದ್ದರು.

‘ನಮ್ಮ ಗಮನ ಆಟಗಾರರ ವೈಯಕ್ತಿಕ ಆಟಕ್ಕಿಂತ ಇಡಿಯಾಗಿ ತಂಡದ ಆಟದತ್ತ ಇರುತ್ತದೆ’ ಎಂದಿದ್ದಾರೆ ಗಂಭೀರ್.

‘ನಿರ್ಭೀತಿಯ ಧೋರಣೆಯನ್ನು ತಂಡದಲ್ಲಿ ಬೆಳೆಸುವುದು ನಮ್ಮ ದೃಷ್ಟಿಕೋನವಾಗಿದೆ’ ಎಂದು ಹೇಳಿದರು.

‘ನಾವು ಸೋಲಿಗೆ ಹೆದರುವುದಿಲ್ಲ. ನಾನು ಅತ್ಯಂತ ಯಶಸ್ವಿ ಕೋಚ್ ಆಗುವ ಗುರಿಹೊಂದಿಲ್ಲ. ಅತ್ಯಂತ ನಿರ್ಭೀತ ತಂಡ ಹೊಂದುವುದಷ್ಟೇ ನನ್ನ ಬಯಕೆ ಎಂದು ನನ್ನ ಮತ್ತು ಸೂರ್ಯ ಜೊತೆಗಿನ ಮೊದಲ ಸಂಭಾಷಣೆಯಲ್ಲೇ ಒಪ್ಪಿಕೊಂಡಿದ್ದೆವು’ ಎಂದು ಅವರು ಹೇಳಿದರು.



ಇಬ್ಬರು ಅನುಭವಿಗಳಿಗೆ ಇನ್ನೂ ಅನೇಕ ವರ್ಷಗಳು ಉಳಿದಿವೆ!

ರಣಜಿ: ಪೃಥ್ವಿ ಮಿಂಚಿನ ದ್ವಿಶತಕ



ಚಂಡೀಗಢ (ಪಿಟಿಐ): ಮುಂಬೈ ತಂಡದ ಆರಂಭಿಕ ಆಟಗಾರ ಪೃಥ್ವಿ ಶಾ ಅವರು ಸೋಮವಾರ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಚಂಡೀಗಢ ವಿರುದ್ಧ 141 ಎಸೆತಗಳಲ್ಲಿ ದ್ವಿಶತಕ ದಾಖಲಿಸಿದರು. ಭಾರತದ ಆಟಗಾರನೊಬ್ಬ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ದಾಖಲಿಸಿದ ಮೂರನೇ ಅತಿವೇಗದ ದ್ವಿಶತಕ ಇದೆನಿಸಿತು.

ಮೊದಲ ಇನಿಂಗ್ಸ್‌ನಲ್ಲಿ 104 ರನ್‌ಗಳ ಮುನ್ನಡೆ ಪಡೆದ ಮಹಾರಾಷ್ಟ್ರ ಎರಡನೇ ಇನಿಂಗ್ಸ್‌ನಲ್ಲಿ 52 ಓವರ್‌ಗಳಲ್ಲಿ 3 ವಿಕೆಟ್‌ಗೆ 359 ರನ್ ಗಳಿಸಿ ಡಿಕ್ಲೇರ್ಡ್ ಮಾಡಿಕೊಂಡಿದೆ. ಎದುರಾಳಿ ತಂಡಕ್ಕೆ 464 ರನ್‌ಗಳ ಕಠಿಣ ಗುರಿ ನೀಡಿದೆ. ಆತಿಥೇಯ ತಂಡ ಮೂರನೇ ದಿನದಾಟದ ಅಂತ್ಯಕ್ಕೆ 1 ವಿಕೆಟ್‌ಗೆ 129 ರನ್ ಗಳಿಸಿದೆ.

156 ಎಸೆತಗಳನ್ನು ಎದುರಿಸಿದ ಶಾ 222 ರನ್ ಬಾರಿಸಿದರು. ಅವರ ಇನಿಂಗ್ಸ್‌ನಲ್ಲಿ 29 ಬೌಂಡರಿ ಮತ್ತು ಐದು ಸಿಕ್ಸರ್‌ಗಳಿದ್ದವು. ಅವರು ರವಿಶಾಸ್ತ್ರಿ (123 ಎಸೆತ: 1985ರಲ್ಲಿ ಬರೋಡಾ ವಿರುದ್ಧ) ಮತ್ತು ತನ್ಮಯ್ ಅಗರವಾಲ್ (119 ಎಸೆತ; 2024ರಲ್ಲಿ ಅರುಣಾಚಲ ಪ್ರದೇಶ ವಿರುದ್ಧ) ನಂತರ ಅತಿವೇಗದ ದ್ವಿಶತಕ ದಾಖಲಿಸಿದರು.

ತಮಿಳುನಾಡಿಗೆ ತಲೆನೋವಾದ ನಿಶ್ಚಲ್

ದಿಮಾಪುರ (ಪಿಟಿಐ): ಕನ್ನಡಿಗ ಡೇಗಾ ನಿಶ್ಚಲ್ ಮತ್ತು ಇಮ್ಲಿವಾತಿ ಲೆಮ್ತುರ್ ಅವರ ಅಜೇಯ ಶತಕಗಳ ನೆರವಿನಿಂದ ಅನನುಭವಿ ನಾಗಾಲ್ಯಾಂಡ್ ತಂಡ, ತಮಿಳುನಾಡು ತಂಡಕ್ಕೆ ದಿಟ್ಟ ಉತ್ತರ ನೀಡಿದೆ. ರಣಜಿ ಟ್ರೋಫಿ ಪಂದ್ಯದಲ್ಲಿ ತಮಿಳುನಾಡು ತಂಡದ 512 ರನ್‌ಗಳಿಗೆ ಉತ್ತರವಾಗಿ ನಾಗಾಲ್ಯಾಂಡ್ ಮೂರನೇ ದಿನದಾಟದ ಕೊನೆಗೆ 5 ವಿಕೆಟ್‌ಗೆ ಡಿ. 365 ರನ್ ಗಳಿಸಿದೆ.

ಒಂದು ಹಂತದಲ್ಲಿ 31 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡು ಆರಂಭಿಕ ಕುಸಿತ ಕಂಡಿದ್ದ ನಾಗಾಲ್ಯಾಂಡ್‌ಗೆ ಕರ್ನಾಟಕದ ಮಾಜಿ ಆಟಗಾರ ನಿಶ್ಚಲ್ (161, 350ಎ, 4x24) ಎರಡು ಉಪಯುಕ್ತ ಜೊತೆಯಾಟಗಳ ಮೂಲಕ ಆಸರೆಯಾದರು. ನಾಲ್ಕೂ ವಿಕೆಟ್‌ಗಳು ಎಡಗೈ ವೇಗಿ ಗುರಜಪನೀತ್ ಸಿಂಗ್ (57ಕ್ಕೆ4) ಪಾಲಾಗಿದ್ದವು.

ಆದರೆ ನಿಶ್ಚಲ್ ಮತ್ತು ಯುಗಂಧರ್ (67, 180ಎ) ಐದನೇ ವಿಕೆಟ್‌ಗೆ 129 ರನ್ ಸೇರಿಸಿದರು. ನಂತರ ಲೆಮ್ತುರ್ (ಅಜೇಯ 115, 203ಎ, 4X17, 6X3) ಮುರಿಯದ ಆರನೇ ವಿಕೆಟ್‌ಗೆ 205 ರನ್ ಸೇರಿಸಿದ್ದರಿಂದ ಈಶಾನ್ಯದ ತಂಡ ಮೊದಲ ಇನಿಂಗ್ಸ್ ಮುನ್ನಡೆಯ ಕನಸಿನಲ್ಲಿದೆ. ತಂಡ 147 ರನ್ ಹಿನ್ನಡೆಯಲ್ಲಿದ್ದು, ಮಂಗಳವಾರ ಪಂದ್ಯದ ಅಂತಿಮ ದಿನವಾಗಿದೆ.

ಆಂತರಿಕ ರಕ್ತಸ್ರಾವ: ಅಯ್ಯರ್‌ಗೆ ಚಿಕಿತ್ಸೆ



ಕ್ಯಾಚ್ ಪಡೆಯುವಾಗ ಆಯತಪ್ಪಿ ಬಿದ್ದು ಗಾಯಗೊಂಡ ಶ್ರೇಯಸ್ ಅಯ್ಯರ್

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧ ಮೂರನೇ ಏಕದಿನ ಪಂದ್ಯದ ವೇಳೆ ಪಕ್ಕೆಲುಬಿಗೆ ಪೆಟ್ಟುಮಾಡಿಕೊಂಡಿದ್ದ ಭಾರತ ತಂಡದ ಉಪ ನಾಯಕ ಶ್ರೇಯಸ್ ಅಯ್ಯರ್ ಅವರು ಸಿಡ್ನಿಯ ಆಸ್ಪತ್ರೆಯೊಂದರ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶನಿವಾರ ನಡೆದ ಆ ಪಂದ್ಯದಲ್ಲಿ ಅಲೆಕ್ಸ್ ಕ್ಯಾರಿ ಹೊಡೆದ ಚೆಂಡನ್ನು ಹಿಂದಕ್ಕೆ ಓಡಿ ಬ್ಯಾಕ್‌ವರ್ಡ್ ಪಾಯಿಂಟ್‌ನಲ್ಲಿ ಅಮೋಘವಾಗಿ ಕ್ಯಾಚ್ ಪಡೆದ ವೇಳೆ ಅಯ್ಯರ್ ಅವರು ಜಾರಿ ಬಿದ್ದು ಪಕ್ಕೆಲುಬಿಗೆ ಪೆಟ್ಟುಮಾಡಿಕೊಂಡಿದ್ದರು.

‘ಡ್ರೆಸಿಂಗ್‌ರೂಮ್‌ನಲ್ಲಿ ಅಯ್ಯರ್ ಪ್ರಜ್ಞೆ ತಪ್ಪಿದ್ದರು. ಅವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಯಿತು. ಅವರ ಗುಲ್ಮಕ್ಕೆ (ಪ್ಲೀಹ/ಸ್ಪ್ಲೀನ್) ಸೀಳು ಗಾಯವಾಗಿರುವುದು ಸ್ಕ್ಯಾನ್‌ಗಳಿಂದ ದೃಢಪಟ್ಟಿದೆ’ ಎಂದು ಮೂಲಗಳು ತಿಳಿಸಿವೆ.

‘ಅಯ್ಯರ್ ಅವರಿಗೆ ಎಡ ಪಕ್ಕೆಲುಬಿನ ಕೆಳಭಾಗದಲ್ಲಿ ಗಾಯವಾಗಿದೆ. ಹೆಚ್ಚಿನ ಚಿಕಿತ್ಸೆಗೆ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರು ಚೇತರಿಸಿಕೊಳ್ಳುತ್ತಿದ್ದಾರೆ’ ಎಂದು ಬಿಸಿಸಿಐ ಸೋಮವಾರ ತಿಳಿಸಿದೆ.

‘ಅವರಿಗೆ ಆಂತರಿಕ ರಕ್ತಸ್ರಾವವಾಗಿರುವುದೂ ಪತ್ತೆಯಾಗಿದೆ. ಅವರ ಗಾಯದ ಸ್ಥಿತಿಗತಿಗಳ ಬಗ್ಗೆ ಬಿಸಿಸಿಐನ ವೈದ್ಯಕೀಯ ತಂಡವು, ಸಿಡ್ನಿಯಲ್ಲಿರುವ ತಜ್ಞ ವೈದ್ಯರ ಜೊತೆ ನಿಗಾವಹಿಸಿದೆ. ತಂಡದ ವೈದ್ಯರು ಸಿಡ್ನಿಯಲ್ಲೇ ಇರಲಿದ್ದು, ದೈನಂದಿನ ಪ್ರಗತಿಯ ಬಗ್ಗೆ ಪರಾಮರ್ಶೆ ನಡೆಸಲಿದ್ದಾರೆ. 30 ವರ್ಷದ ಅಯ್ಯರ್ 2 ರಿಂದ 7 ದಿನಗಳ ಕಾಲ ನಿಗಾದಲ್ಲಿ ಇರಲಿದ್ದಾರೆ’ ಎಂದು ಹೇಳಿದೆ.

ಚಾಲನೆ..

ಪ್ರಜಾವಾಣಿ ಚಿತ್ರ



ವಿಶ್ವ ಬ್ಯಾಡ್ಮಿಂಟನ್ ಸಂಸ್ಥೆಯು (ಬಿಡಬ್ಲ್ಯುಎಫ್) ಮಂಗಳೂರಿನ ಉರ್ವ ಒಳಾಂಗಣ ಕ್ರೀಡಾಂಗಣದಲ್ಲಿ ಆಯೋಜಿಸಿರುವ ‘ಚೀಫ್ ಮಿನಿಸ್ಟರ್ಸ್ ಮಂಗಳೂರು ಇಂಡಿಯಾ ಇಂಟರ್‌ನ್ಯಾಷನಲ್ ಚಾಲೆಂಜ್ 2025’ ಟೂರ್ನಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಚಾಲನೆ ನೀಡಿದರು. ಟಿ.ಎಂ. ಶಹೀದ್, ದ.ಕ. ಜಿಲ್ಲಾ ಬ್ಯಾಡ್ಮಿಂಟನ್ ಸಂಸ್ಥೆ ಅಧ್ಯಕ್ಷ ಸಂತೋಷ್ ಕುಮಾರ್ ಶೆಟ್ಟಿ, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಭಾಗವಹಿಸಿದ್ದರು

ವಿಶ್ವಕಪ್ ಟೂರ್ನಿ ಹೊರಬಿದ್ದ ಪ್ರತೀಕಾ



ನವಿ ಮುಂಬೈ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧ ಮಹಿಳಾ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಹೋರಾಟಕ್ಕೆ ಅಣಿಯಾಗುತ್ತಿರುವ ಭಾರತ ತಂಡಕ್ಕೆ ಪಂದ್ಯ ಆರಂಭಕ್ಕೆ ಮೊದಲೇ ಹಿನ್ನಡೆ ಆಗಿದೆ. ಉತ್ತಮ ಲಯದಲ್ಲಿದ್ದ ಆರಂಭ ಆಟಗಾರ್ತಿ ಪ್ರತೀಕಾ ರಾವಲ್ ಮೊಣಕಾಲು ಮತ್ತು ಪಾದದ ನೋವಿನಿಂದಾಗಿ ಟೂರ್ನಿಯಿಂದ ಹೊರಬಿದ್ದಿದ್ದಾರೆ.

ವರ್ಷದ ಹಿಂದೆ ಕೊನೆಯ ಬಾರಿ ಏಕದಿನ ಪಂದ್ಯ ಆಡಿದ್ದ ಅನುಭವಿ ಶಫಾಲಿ ವರ್ಮಾ ಅವರನ್ನು ಪ್ರತೀಕಾ ಸ್ಥಾನದಲ್ಲಿ ಸೇರ್ಪಡೆಗೊಳಿಸಲಾಗಿದೆ.

ಇಲ್ಲಿನ ಡಿ.ವೈ.ಪಾಟೀಲ ಕ್ರೀಡಾಂಗಣದಲ್ಲಿ ಭಾನುವಾರ ಬಾಂಗ್ಲಾದೇಶ ಎದುರಿನ ಕೊನೆಯ ಲೀಗ್ ಪಂದ್ಯದಲ್ಲಿ ಪ್ರತೀಕಾ ಅವರ ಮೊಣಕಾಲು ತಿರುಚಿಕೊಂಡಿತ್ತು. ಡೀಪ್ ಮಿಡ್‌ವಿಕೆಟ್‌ನಿಂದ ಮುಂದೆ ಓಡಿ ಚೆಂಡನ್ನು ತಡೆಯುವ ಯತ್ನದಲ್ಲಿ ಅವರು ಗಾಯಗೊಂಡಿದ್ದರು.

ಪ್ರತೀಕಾ ಅವರು ಈ ಟೂರ್ನಿಯ ಆರು ಇನಿಂಗ್ಸ್‌ಗಳಿಂದ 308 (ಸರಾಸರಿ 51.33) ರನ್ ಗಳಿಸಿದ್ದರು.

ಪ್ರೊ ಕಬಡ್ಡಿ: ಹಾಲಿ ಆವೃತ್ತಿಯಲ್ಲಿ ಅಭಿಯಾನ ಮುಗಿಸಿದ ಬೆಂಗಳೂರು ತಂಡ

ಪಟ್ನಾ ಪೈರೇಟ್ಸ್‌ಗೆ ಮಣಿದ ಬುಲ್ಸ್

ನವದೆಹಲಿ (ಪಿಟಿಐ): ಅಯಾನ್ ಲೋಚಬ್ ಅವರ ಅಮೋಘ ರೇಡಿಂಗ್ ಬಲದಿಂದ ಪಟ್ನಾ ಪೈರೇಟ್ಸ್ ತಂಡವು ಸೋಮವಾರ ಪ್ರೊ ಕಬಡ್ಡಿ ಲೀಗ್‌ನ ಎರಡನೇ ಎಲಿಮಿನೇಟರ್ ಪಂದ್ಯದಲ್ಲಿ 46-37 ಅಂಕಗಳಿಂದ ಬೆಂಗಳೂರು ಬುಲ್ಸ್ ತಂಡವನ್ನು ಮಣಿಸಿತು.

ಈ ಸೋಲಿನೊಂದಿಗೆ ಕನ್ನಡಿಗ ಬಿ.ಸಿ.ರಮೇಶ್ ಮಾರ್ಗದರ್ಶನದ ಬುಲ್ಸ್ ತಂಡವು ಹಾಲಿ ಆವೃತ್ತಿಯ ಅಭಿಯಾನ ಮುಗಿಸಿತು. ಲೀಗ್ ಪಟ್ಟಿಯಲ್ಲಿ ಮೂರನೇ ಸ್ಥಾನ ಪಡೆದಿದ್ದ ಬೆಂಗಳೂರು ತಂಡವು ಪ್ಲೇ ಆಫ್ ಹಂತದಲ್ಲಿ ಸತತ ಎರಡು ಪಂದ್ಯಗಳನ್ನು ಸೋತು ಕೈಸುಟ್ಟುಕೊಂಡಿತು. ಎರಡನೇ ಬಾರಿ ಪ್ರಶಸ್ತಿ ಗೆಲ್ಲುವ ಭರವಸೆ ಮೂಡಿಸಿದ್ದ ತಂಡವು ನಿರಾಸೆ ಅನುಭವಿಸಿತು. 2018ರಲ್ಲಿ ಬೆಂಗಳೂರು ತಂಡ ಚಾಂಪಿಯನ್ ಆಗಿತ್ತು.

ತ್ಯಾಗರಾಜ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆರಂಭದಿಂದಲೇ ಆಕ್ರಮಣಕಾರಿ ಆಟ ಪ್ರದರ್ಶಿಸಿದ ಪಟ್ನಾ ತಂಡವು ಮೊದಲಾರ್ಧದಲ್ಲಿ 14 ಅಂಕಗಳ (27-13) ಭರ್ಜರಿ ಮುನ್ನಡೆ ಪಡೆಯಿತು. ದ್ವಿತೀಯಾರ್ಧದಲ್ಲಿ ಬುಲ್ಸ್ ತಂಡವು ಪ್ರತಿಹೋರಾಟ ನಡೆಸಿದರೂ ಗೆಲುವಿಗೆ ಅದು ಸಾಕಾಗಲಿಲ್ಲ.


ಲೀಗ್ ಪಟ್ಟಿಯಲ್ಲಿ ಏಳನೇ ಸ್ಥಾನ ಪಡೆದಿದ್ದ ಪಟ್ನಾ ತಂಡವು ಪ್ಲೇ ಆಫ್ ಹಂತದಲ್ಲಿ ಸತತ ಮೂರು ಪಂದ್ಯಗಳನ್ನು ಗೆದ್ದು, ಮೂರನೇ ಎಲಿಮಿನೇಟರ್‌ಗೆ ಅರ್ಹತೆ ಪಡೆಯಿತು. ಮಂಗಳವಾರದ ನಡೆಯುವ ಈ ಪಂದ್ಯದಲ್ಲಿ ತೆಲುಗು ಟೈಟನ್ಸ್ ತಂಡವನ್ನು ಎದುರಿಸಲಿದೆ.

ಪಟ್ನಾ ಪರ ಏಕಾಂಗಿ ಹೋರಾಟ ನಡೆಸಿದ ಅಯಾನ್ 19 ಅಂಕ ಗಳಿಸಿದರು. ಅವರು ರೇಡಿಂಗ್ ನಿಂದ 17 ಪಾಯಿಂಟ್ಸ್ ಗಳಿಸಿದರೆ, ಬೋನಸ್‌ನಿಂದ ಎರಡು ಅಂಕವನ್ನು ಬಾಚಿದರು.

ಬೆಂಗಳೂರು ತಂಡದ ಪ್ರಮುಖ ರೇಡರ್ ಅಲಿರೆಜಾ ಮಿರ್ಜೈಯಾನ್ (6) ಅವರಿಗೆ ನಿರೀಕ್ಷಿತ ಯಶಸ್ಸು ಸಿಗಲಿಲ್ಲ. ಶುಭಂ ಬಿತಕೆ 7 ಅಂಕ ಗಳಿಸಿದರು. ಅಶಿಶ್ ಮಲಿಕ್ ಮತ್ತು ಕನ್ನಡಿಗ ಬಿ. ಗಣೇಶ್ ‘ಹೈಫೈ’ ಗಳಿಸಿದರು.

ಫೈನಲ್‌ಗೆ ದಬಂಗ್ ಡೆಲ್ಲಿ: ಸೋಮವಾರ ನಡೆದ ಮೊದಲ ಕ್ವಾಲಿಫೈಯರ್ ಪಂದ್ಯದಲ್ಲಿ ದಬಂಗ್ ಡೆಲ್ಲಿ ತಂಡವು ‘ಟೈಬ್ರೇಕರ್’ನಲ್ಲಿ ಪುಣೇರಿ ಪಲ್ಟನ್ ತಂಡವನ್ನು ಮಣಿಸಿ ಪ್ರಶಸ್ತಿ ಸುತ್ತಿಗೆ ಲಗ್ಗೆ ಇಟ್ಟಿತು.

ನಿಗದಿತ ಅವಧಿಯಲ್ಲಿ ಉಭಯ ತಂಡಗಳು 34-34 ಅಂಕಗಳಿಂದ ಸಮಬಲ ಸಾಧಿಸಿದ್ದವು. ನಂತರ ನಡೆದ ‘ಟೈಬ್ರೇಕರ್’ನಲ್ಲಿ ಡೆಲ್ಲಿ ತಂಡವು 6-4ರಿಂದ ಗೆಲುವು ಸಾಧಿಸಿತು.



ಬೆಂಗಳೂರು ಬುಲ್ಸ್ ತಂಡದ ರೇಡರ್‌ನನ್ನು ಪಟ್ನಾ ಪೈರೇಟ್ಸ್ ಆಟಗಾರರು ಟ್ಯಾಕಲ್ ಮಾಡಲು ಯತ್ನಿಸಿದರು ‘ಎಕ್ಸ್’ ಚಿತ್ರ


ಶಶಿಕುಮಾರ್‌ಗೆ ಆರು ವಿಕೆಟ್ ಗೊಂಚಲು

ಬೆಂಗಳೂರು: ಸ್ಪಿನ್ನರ್ ಶಶಿಕುಮಾರ್ ಕೆ. (56ಕ್ಕೆ 6) ಅವರ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡ ಕರ್ನಲ್ ಸಿ.ಕೆ. ನಾಯ್ಡು ಟ್ರೋಫಿ ಕ್ರಿಕೆಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಉತ್ತರ ಪ್ರದೇಶ ವಿರುದ್ಧ 20 ರನ್ ಮುನ್ನಡೆ ಪಡೆಯಿತು.

ಮೀರತ್‌ನ ವಿಕ್ಟೋರಿಯಾ ಪಾರ್ಕ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಕರ್ನಾಟಕ ತಂಡ ಹಾರ್ದಿಕ್ ರಾಜ್ (ಔಟಾಗದೇ 54; 83ಎ) ಅವರ ಅರ್ಧಶತಕದ ನೆರವಿನಿಂದ 75.1 ಓವರ್‌ಗಳಲ್ಲಿ 235 ರನ್ ಗಳಿಸಿತು. ಅದಕ್ಕೆ ಪ್ರತಿಯಾಗಿ ಉತ್ತರಪ್ರದೇಶ ತಂಡವು 83.1 ಓವರ್‌ಗಳಲ್ಲಿ 215 ರನ್‌ಗಳಿಗೆ ಆಲೌಟ್ ಆಯಿತು. ಶಶಿ ಕುಮಾರ್ 6 ವಿಕೆಟ್ ಹಾಗೂ ಹಾರ್ದಿಕ್ ರಾಜ್ 3 ವಿಕೆಟ್ ಕಬಳಿಸಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಕರ್ನಾಟಕ: 75.1 ಓವರ್‌ಗಳಲ್ಲಿ 235 (ಸಿ. ಆರ್. ಸಿ.ಆರ್. ಹಾರ್ದಿಕ್‌ರಾಜ್ ಔಟಾಗದೇ 54; ಶುಭಂ ಮಿಶ್ರಾ 65ಕ್ಕೆ 3, ಕಾರ್ತಿಕ್ ಯಾದವ್ 40ಕ್ಕೆ 4). ಉತ್ತರಪ್ರದೇಶ: 83.1 ಓವರ್‌ಗಳಲ್ಲಿ 215 (ಋತುರಾಜ್ ಶರ್ಮಾ 48; ಹಾರ್ದಿಕ್‌ರಾಜ್ 79ಕ್ಕೆ 3, ಶಶಿಕುಮಾರ್ ಕೆ. 56ಕ್ಕೆ 6). ಎರಡನೇ ಇನಿಂಗ್ಸ್: ಕರ್ನಾಟಕ: 19 ಓವರ್‌ಗಳಲ್ಲಿ 2 ವಿಕೆಟ್‌ಗೆ 50 (ಅನೀಶ್ವರ್ ಗೌತಮ್ ಔಟಾಗದೇ 32).

ತಂಡಕ್ಕೆ ಮರಳಿದ ನಾಯಕ ಬವುಮಾ



ಜೋಹಾನೆಸ್ ಬರ್ಗ್ (ಪಿಟಿಐ): ನಾಯಕ ತೆಂಬಾ ಬವುಮಾ ಅವರು ಭಾರತ ವಿರುದ್ಧದ ಎರಡು ಟೆಸ್ಟ್‌ಗಳ ಸರಣಿಯನ್ನು ಆಡುವ ದಕ್ಷಿಣ ಆಫ್ರಿಕಾ ತಂಡಕ್ಕೆ ಮರಳಿದ್ದಾರೆ. ಅವರು ಮೀನಖಂಡದ ಗಾಯದಿಂದ ಸಂಪೂರ್ಣ ಚೇತರಿಸಿಕೊಂಡಿದ್ದಾರೆ.

ನ. 14ರಂದು ಮೊದಲ ಟೆಸ್ಟ್ ಪಂದ್ಯ ಕೋಲ್ಕತ್ತದಲ್ಲಿ ಆರಂಭವಾಗಲಿದೆ. ಎರಡನೇ ಟೆಸ್ಟ್ ಪಂದ್ಯ ನ. 22ರಿಂದ ಗುವಾಹಟಿಯಲ್ಲಿ ನಡೆಯಲಿದೆ.

ಈ ಟೆಸ್ಟ್ ಸರಣಿಗೆ ಮೊದಲು ಭಾರತ ‘ಎ’ ವಿರುದ್ಧ ನ.2 ರಿಂದ ನಡೆಯುವ ಟೆಸ್ಟ್ ಸರಣಿಯಲ್ಲೂ ಬವುಮಾ ಆಡಲಿದ್ದಾರೆ.

ತಂಡ: ತೆಂಬಾ ಬವುಮಾ (ನಾಯಕ), ಏಡನ್ ಮರ್ಕರಂ, ರಯಾನ್ ರಿಕೆಲ್ಟನ್ ಟ್ರಿಸ್ಟನ್ ಸ್ಟಬ್ಸ್, ಕೈಲ್ ವೇರಿಯನ್, ಡೆವಾಲ್ಡ್ ಬ್ರೆವಿಸ್, ಜುಬೇರ್ ಹಂಝ, ಟೋನಿ ಡಿ ಝೋರ್ಜಿ, ಕಾರ್ಬಿನ್ ಬಾಷ್, ವಿಯಾನ್ ಮುಲ್ಡರ್, ಮಾರ್ಕೊ ಯಾನ್ಸನ್, ಕೇಶವ ಮಹಾರಾಜ್, ಸೆನುರಾನ್ ಮುತ್ತುಸಾಮಿ, ಕಗಿಸೊ ರಬಾಡ ಮತ್ತು ಸೈಮನ್ ಹರ್ಮರ್.

ವಿಶ್ವ ಕುಸ್ತಿ: ಸ್ವರ್ಣ ಜಯಿಸಿದ ಸುಜೀತ್

ನೋವಿಸಾದ್ (ಸರ್ಬಿಯಾ) (ಪಿಟಿಐ): ಭಾರತದ ಉದಯೋನ್ಮುಖ ಕುಸ್ತಿಪಟು ಸುಜೀತ್ ಕಲ್ಕಲ್ ಅವರು 23 ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಜಯಿಸಿದರು.



ಪುರುಷರ 65 ಕೆ.ಜಿ. ಫ್ರೀಸ್ಟೈಲ್ ವಿಭಾಗದಲ್ಲಿ ಕಣಕ್ಕಿಳಿದಿರುವ ಸುಜೀತ್ ಅವರು ಸೋಮವಾರ ನಡೆದ ಫೈನಲ್ ಹಣಾಹಣಿಯಲ್ಲಿ 10-0ಯಿಂದ ಉಜ್ಬೇಕಿಸ್ತಾನದ ಉಮಿಜೊನ್ ಜಲಲೊವ್ ಅವರನ್ನು ಅಧಿಕಾರಯುತವಾಗಿ ಮಣಿಸಿದರು. 22 ವರ್ಷ ವಯಸ್ಸಿನ ಸುಜೀತ್ ಕಳೆದ ಬಾರಿ ಈ ಟೂರ್ನಿಯಲ್ಲಿ ಕಂಚಿನ ಪದಕ ಜಯಿಸಿದ್ದರು.

ಚಿಟಿಕೆ ಸುದ್ದಿ

ನೇಪಾಳಕ್ಕೆ ಮಣಿದ ಭಾರತ ವನಿತೆಯರು

ಶಿಲ್ಲಾಂಗ್ (ಪಿಟಿಐ): ಭಾರತ ಸೀನಿಯರ್ ಮಹಿಳಾ ತಂಡ, ಮೂರು ತಂಡಗಳ ಅಂತರರಾಷ್ಟ್ರೀಯ ಸೌಹಾರ್ದ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಸೋಮವಾರ ನೇಪಾಳ ಎದುರು 1-2 ಗೋಲುಗಳಿಂದ ಸೋಲನುಭವಿಸಿತು.

ನೇಪಾಳ ಪರ ಸಬಿತಾ ಭಂಡಾರಿ (2, 63ನೇ ನಿ.) ಎರಡು ಗೋಲು ಗಳಿಸಿದರೆ, ಕರಿಷ್ಮಾ (81ನೇ ನಿಮಿಷ) ಆತಿಥೇಯರ ಪರ ಏಕೈಕ ಗೋಲು ಗಳಿಸಿದರು.

ರಾಜ್ಯ ತಂಡಕ್ಕೆ ಸೋಲು

ಬೆಂಗಳೂರು: ಕರ್ನಾಟಕ ತಂಡವು ಪಂಜಾಬ್‌ನ ಅಮೃತಸರದಲ್ಲಿ ನಡೆಯುತ್ತಿರುವ ಸಬ್ ಜೂನಿಯರ್ ಬಾಲಕರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್ ಟೂರ್ನಿಯ ಮೊದಲ ಚರಣದ ಪಂದ್ಯದಲ್ಲಿ ಸೋಮವಾರ 0-3ರಿಂದ ಪಶ್ಚಿಮ ಬಂಗಾಳ ತಂಡಕ್ಕೆ ಮಣಿಯಿತು.

ಭಾರತ ತಂಡದ ಮಾಜಿ ವೇಗಿ ವೆಂಕಟೇಶ್ ಪ್ರಸಾದ್ ನೇತೃತ್ವದ ಬಣ ಒತ್ತಾಯ

ಕೆಎಸ್‌ಸಿಎಗೆ ಶೀಘ್ರದಲ್ಲೇ ಚುನಾವಣೆ ನಡೆಸಿ

ಪ್ರಜಾವಾಣಿ ವಾರ್ತೆ



ವೆಂಕಟೇಶ್ ಪ್ರಸಾದ್

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ನೂತನ ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಲು ಆಕಾಂಕ್ಷಿಯಾಗಿರುವ ಭಾರತದ ಮಾಜಿ ವೇಗಿ ವೆಂಕಟೇಶ್ ಪ್ರಸಾದ್ ನೇತೃತ್ವದ ತಂಡವು, ಹಾಲಿ ಆಡಳಿತಗಾರರು ಮತ್ತಷ್ಟು ವಿಳಂಬ ಮಾಡದೇ ಚುನಾವಣೆ ನಡೆಸಬೇಕು ಎಂದು ಒತ್ತಾಯಿಸಿದೆ.

‘ನಾವೆಲ್ಲರೂ ಚುನಾವಣೆ ಘೋಷಣೆಗಾಗಿ ಕಾಯುತ್ತಿದ್ದೇವೆ. ಸಂಸ್ಥೆಯ ಬೈಲಾ ಪ್ರಕಾರ ಸೆಪ್ಟೆಂಬರ್ 30ರ ಮೊದಲು ಚುನಾವಣೆ ನಡೆದು, ಈ ಹೊತ್ತಿಗೆ ಹೊಸ ಆಡಳಿತ ಮಂಡಳಿಯು ಅಧಿಕಾರ ವಹಿಸಿಕೊಳ್ಳಬೇಕಿತ್ತು’ ಎಂದು ಸೋಮವಾರ ಮಾಧ್ಯಮ ಗೋಷ್ಠಿಯಲ್ಲಿ ಪ್ರಸಾದ್ ಹೇಳಿದರು.

‘ಸಂಸ್ಥೆಯ ಸುಗಮ ಕಾರ್ಯನಿರ್ವಹಣೆಗಾಗಿ ಚುನಾವಣಾ ಪ್ರಕ್ರಿಯೆಯನ್ನು ಆದಷ್ಟು ಬೇಗ ಪ್ರಾರಂಭಿಸಬೇಕು’ ಎಂದು ಅವರು ಒತ್ತಾಯಿಸಿದರು.

ಕೆಎಸ್‌ಸಿಎ ಮಾಜಿ ಖಜಾಂಚಿ ವಿನಯ್ ಮೃತ್ಯುಂಜಯ ಮತ್ತು ಭಾರತ ಮಹಿಳಾ ತಂಡದ ಮಾಜಿ ನಾಯಕಿ ಶಾಂತಾ ರಂಗಸ್ವಾಮಿ ಈ ಸಂದರ್ಭದಲ್ಲಿ ಇದ್ದರು.

ಕೆಎಸ್‌ಸಿಎ ನಿಕಟಪೂರ್ವ ಅಧ್ಯಕ್ಷ ರಘುರಾಮ್ ಭಟ್ (ಪ್ರಸ್ತುತ ಬಿಸಿಸಿಐ ಖಜಾಂಚಿ) ನೇತೃತ್ವದ ಆಡಳಿತ ಮಂಡಳಿಯ ಅಧಿಕಾರಾವಧಿ ಸೆ.30 ರಂದು ಕೊನೆಗೊಂಡಿದೆ. ಆದರೆ, ಚುನಾವಣೆಗೆ ನಿರ್ದಿಷ್ಟ ದಿನಾಂಕವನ್ನು ಇನ್ನೂ ಘೋಷಿಸಿಲ್ಲ. ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಚುನಾವಣೆ ನಡೆಯಲಿದೆ ಎಂಬ ಮಾತುಗಳು ಕೇಳಿಬಂದಿದ್ದವು.

ಜೂನ್‌ನಲ್ಲಿ ಐಪಿಎಲ್ ಟ್ರೋಫಿ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿಜಯೋತ್ಸವದ ಸಂದರ್ಭದಲ್ಲಿ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತದ ನೈತಿಕ ಹೊಣೆ ಹೊತ್ತು ಎ.ಶಂಕರ್ ಮತ್ತು ಇ.ಎಸ್. ಜೈರಾಮ್ ರಾಜೀನಾಮೆ ನೀಡಿದ ನಂತರ ಕೆಎಸ್‌ಸಿಎಗೆ ಚುನಾಯಿತ ಕಾರ್ಯದರ್ಶಿ ಮತ್ತು ಖಜಾಂಚಿ ಇಲ್ಲದಂತಾಗಿದೆ.

‘ಸಂಸ್ಥೆಯಲ್ಲಿ ಈಗ ಅಧ್ಯಕ್ಷ, ಕಾರ್ಯದರ್ಶಿ, ಖಜಾಂಚಿ ಅಥವಾ ಉಪಾಧ್ಯಕ್ಷರೂ ಇಲ್ಲ. ಆದ್ದರಿಂದ ಚುನಾವಣೆಗೆ ದಿನಾಂಕವನ್ನು ಘೋಷಿಸಬೇಕು. ವಾಸ್ತವವಾಗಿ 45 ದಿನಗಳಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂಬ ನಿಯಮವಿದೆ’ ಎಂದು ವಿನಯ್ ಹೇಳಿದರು.

‘ಬಿಸಿಸಿಐ ನಿಯಮಾವಳಿಯಲ್ಲಿರುವ ಒಂಬತ್ತು ವರ್ಷ ಅಧಿಕಾರ ಅವಧಿಯ ನಿಯಮವನ್ನು ತಪ್ಪಾಗಿ ವ್ಯಾಖ್ಯಾನಿಸಲಾಗುತ್ತಿದೆ. ಇದನ್ನು ಮುಂದಿಟ್ಟುಕೊಂಡು ಕೆಲವು ಅರ್ಹ ಅಭ್ಯರ್ಥಿಗಳನ್ನೂ ಚುನಾವಣೆ ಸ್ಪರ್ಧೆಯಿಂದ ಅನರ್ಹಗೊಳಿಸುವ ಪ್ರಯತ್ನ ನಡೆಯುತ್ತಿದೆ’ ಎಂದು ಅವರು ಆರೋಪಿಸಿದರು.

ಏತನ್ಮಧ್ಯೆ, ‘ತಂಡದ ಅಭ್ಯರ್ಥಿಗಳನ್ನು ಅನರ್ಹಗೊಳಿಸುವುದನ್ನು ತಡೆಯಲು ಅಧೀನ ನ್ಯಾಯಾಲಯದಿಂದ ತಾತ್ಕಾಲಿಕ ತಡೆಯಾಜ್ಞೆ ಪಡೆದಿದ್ದೇನೆ’ ಎಂದು ಶಾಂತಾ ಹೇಳಿದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಲು ಸಂಜಯ್ ಪೋಳ್ (ಹಂಗಾಮಿ ಅಧ್ಯಕ್ಷರು) ನಿರಾಕರಿಸಿದರು. ಎಂ.ಎಸ್. ವಿನಯ್ (ಹಂಗಾಮಿ ಕಾರ್ಯದರ್ಶಿ) ಅವರು ಕರೆಯನ್ನು ಸ್ವೀಕರಿಸಲಿಲ್ಲ.

MARUTI SUZUKI

NEXA

CELEBRATIONS JUST GOT BIGGER.

WITH GST BENEFITS + *LIMITED PERIOD FESTIVE OFFERS

	PRICE REDUCTION OF UP TO#	NOW STARTING AT#	ADDITIONAL FESTIVE OFFERS OF UP TO*
FRONX	₹ 1 12 600	₹ 6 84 900	₹ 1 00 000
GRAND VITARA	₹ 1 07 000	₹ 10 76 500	₹ 1 54 100 + 5 Year Extended Warranty
BALENO	₹ 86 100	₹ 5 98 900	₹ 47 500
IGNIS	₹ 71 300	₹ 5 35 100	₹ 57 500
INVICTO	₹ 61 700	₹ 24 97 400	₹ 1 40 000
XL6	₹ 52 000	₹ 11 52 300	₹ 35 000
JIMNY	₹ 51 900	₹ 12 31 500	₹ 75 000



SCAN TO CONNECT TO A SHOWROOM NEAR YOU

*FESTIVE OFFERS VALID TILL 31ST OCT ONLY

NEXA SAFETY SHIELD

UP TO 100% WAIVER ON CAR LOAN PROCESSING FEE (ONLY TILL 31ST OCT)##

E-BOOK TODAY @ WWW.NEXAEXPERIENCE.COM

Contact us at 1800-200-6392 1800-102-6392

For detailed T&C kindly visit your nearest dealership. Features and accessories shown may not be a part of the standard fitment. Black glass shade on the vehicle is due to the lighting effect. Images used are for illustration purposes only. All offers are brought to you by NEXA dealers only. Offers and features may vary subject to the model and variant purchased. *The mentioned offers include "Consumer Offer + Booking offer + Exchange Bonus + Rural offer", and may vary from city to city. Please contact nearby dealership for more details. Maruti Suzuki reserves the right to withdraw offers at any point in time without any advance notice. All offers are applicable till 31st October '25 or till stocks last. Maruti Suzuki Smart Finance is now available pan India. Maruti Suzuki Subscribe is available only in selected cities. ##Offers include consumer offer, exchange bonus and institutional or rural offers (wherever applicable) on select models/variants. Finance is at the sole discretion of the financer by selected finance partners. #Prices and savings mentioned above are for select variants and may vary across cities/ variants.